PAPERS LAID ON THE TABLE

Sri B. VAIKUNTA BALIGA (Minister for Labour and Legal Affairs).—Sir, I lay on the Table :

(1) Finance Accounts 1956-57 (from 1st April 1956 to 31st October 1956) and the Audit Report of the former State of Coorg ;

(2) Appropriation Accounts 1956-57 (from 1st April 1956 to 31st October 1956) and the Audit Report of the former State of Coorg ;

(3) Finance Accounts 1956-57 (from 1st April 1956 to 31st October 1956) and the Audit Report of the former State of Mysore ;

(4) Finance Accounts 1954-55 and the Audit Report 1956 of the former State of Hyderabad ;

(5) Finance Accounts 1955-56 and Audit Report 1956 of the former State of Hyderabad ;

in pursuance of clause (2) of Article 151 of the Constitution of India read with clause 2 of the States Reorganisation (Removal of Difficulties Order No. 2).

REPORT OF THE MYSORE TENANCY AND AGRICULTURAL LAND LAWS COMMITTEE.

(Discussion continued)

Mr. SPEAKER.—Further debate on the report of the Mysore Tenancy and Agricultural Land Laws Committee.

ಶ್ರೀ ಬಿ. ರಾಚಯ್ಯ (ಚಾಮರಾಜನಗರ).—ಮಾನ್ಯ ಸಭಾಪತಿಗಳೇ, ಜತ್ತಿ ಸಮಿತಿಯವರು ಒಪ್ಪಿಸಿರತಕ್ಕಂಥ ಮೈಸೂರು ಜಮೀನ್‌ದಾರಿ ವರದಿಯ ಮೇಲೆ ಈಗಾಗಲೇ ವಿಪುಲವಾದ ಚರ್ಚೆ ಆಗಿದೆ. ಈ ಚರ್ಚೆ ನಡೆಯುವಾಗ ನಾನು ಈ ವರದಿಯಮೇಲೆ ಬಂದಂಥ ಕೆಲವು ಸೂಚನೆಗಳನ್ನು ಮತ್ತು ಸಲಹೆಗಳನ್ನು ಕೇಳಿದ್ದೇನೆ. ಅದರಲ್ಲಿ ಬಹಳಮಟ್ಟಿಗೆ ಹೆಚ್ಚಿಗೆ, ಈ ಭೂಸುಧಾರಣೆ ಸಮಿತಿಯನ್ನು ಸರ್ಕಾರ ನೇಮಿಸುವಾಗ ಮೈಸೂರಿನಲ್ಲಿ ವಿಲೀನವಾದ ನಾನಾ ಪ್ರದೇಶಗಳಲ್ಲಿ ಬಂದಿರತಕ್ಕಂಥ ಗೇಣಿ ಶಾಸನವನ್ನು ಸಮನ್ವಯ ಮಾಡಬೇಕು ಎಂದು ಕೊಟ್ಟಿರುವ ಒಂದು ಆದೇಶವನ್ನು ಎಲ್ಲರೂ ಒಪ್ಪುತ್ತಾರೆ. ಈ ರೀತಿಯಾಗಿ ಒಂದು ವರದಿಯನ್ನು ಕೊಡುವುದಕ್ಕೋಸ್ಕರ ಸರ್ಕಾರ ಈ ಸಮಿತಿಯನ್ನು ನೇಮಕಮಾಡಿದ್ದರೆಂಬುದು ತಮಗೆ ತಿಳಿದ ವಿಷಯವಾಗಿದೆ.

ಈ ಗೇಣಿ ಶಾಸನ ಮತ್ತು ಭೂ ಶಾಸನಕ್ಕೆ ಸಂಬಂಧಪಟ್ಟಂಥ ವಿಚಾರ ಮೈಸೂರಿಗಾಗಲಿ ಅಥವಾ ಐದು ಭಾಗಗಳಿಂದ ಬಂದಂಥ ಪ್ರದೇಶಗಳಿಗಾಗಲಿ ಹೊಸದಾಗಿ ಹೊರಿಸಿದ ಕಾನೂನು ಅಲ್ಲವೆನ್ನತಕ್ಕಂಥಾದ್ದನ್ನು ನಾನು ಸ್ಪಷ್ಟಪಡಿಸಲು ಇಷ್ಟಪಡುತ್ತೇನೆ. ಹೀಗೆ ಹೇಳುವಾಗ ಈ ಐದು ಭಾಗಗಳಲ್ಲಿ ವೈಯಕ್ತಿಕ ರೀತಿಯಾದ ಕಾನೂನುಗಳು ಜಾರಿಯಲ್ಲಿದ್ದವು. ಒಂದೊಂದು ಭಾಗದಲ್ಲಿ ಒಂದೊಂದು ರೀತಿಯಾಗಿದ್ದರಿಂದ, ಗೇಣಿದಾರರಿಗಾಗಲೀ, ಭೂಮಾಲೀಕರಿಗಾಗಲೀ, ಏನೊಂದೂ ತೊಂದರೆಯಾಗಬಾರದೆಂಬ ರೀತಿಯಲ್ಲಿ ಏಕರೀತಿಯಾದ ಒಂದು ಕಾನೂನು ಮಾಡುವಾಗ, ಅದನ್ನು ತರಾತುರಿಯಿಂದ ಮಾಡಬಾರದೆಂದೂ, ಈ ವರದಿ ಪ್ರಚಾರವಾಗಬೇಕು ಮತ್ತು ಜನಾಭಿಪ್ರಾಯವನ್ನು ಕೂಡಿಸಬೇಕು ಎಂಬ ದೃಷ್ಟಿಯಿಂದ ಮೈಸೂರು ಸರ್ಕಾರದವರು ಮನಸ್ಸುಮಾಡಿ ಈ ಸಮಿತಿಯನ್ನು ನೇಮಿಸಿದರು. ಅದರಂತೆಯೇ ಜತ್ತಿ ಸಮಿತಿಯವರು ತಮಗೆ ಇದ್ದಂಥ ಅವಕಾಶದಲ್ಲಿ ಬಹಳಮಟ್ಟಿಗೆ ಈ ಮಾನ್ಯ ಸಭೆಯ ಬಹುಮಂದಿಗೆ ಒಪ್ಪುವ ರೀತಿಯಲ್ಲಿ ಒಂದು ವರದಿಯನ್ನು ಸಲ್ಲಿಸಿದ್ದಾರೆ. ಅದಕ್ಕಾಗಿ ನಾನು ಸಂತೋಷವನ್ನು ವ್ಯಕ್ತಪಡಿಸುತ್ತಾ, ನನಗೆ ತಿಳಿದ ಕೆಲವು ವಿಚಾರಗಳನ್ನು ಈ ಮಾನ್ಯ ಸಭೆಯಲ್ಲಿ ನಿವೇದಿಸಿಕೊಳ್ಳಲು ಇಚ್ಛಿಸುತ್ತೇನೆ.

ಈ ಜತ್ತಿ ಸಮಿತಿಯವರು ವರದಿಯನ್ನು ತಯಾರಿಸುವಾಗ ಗೇಣಿ ಶಾಸನಕ್ಕೆ ಸಂಬಂಧಪಟ್ಟಂತೆ, ಗೇಣಿಯ ಒಂದು ಸ್ಥಿರತೆ, ಗೇಣಿ ಮೊಬಲಗು, ಭೂಮಾಲೀಕರು ತಾವು ಸ್ವಂತ ಸಾಗುವಳಿ ಸಲುವಾಗಿ ಗೇಣಿದಾರರಿಂದ ಎಷ್ಟು ಜಮೀನು ವಾಪಸು ತೆಗೆದುಕೊಳ್ಳಬಹುದು, ಗೇಣಿದಾರರಿಗೆ ಭೂಮಾಲೀಕರಿಂದ ಜಮೀನನ್ನು ಕೊಂಡುಕೊಳ್ಳುವ ಹಕ್ಕನ್ನು ಎಷ್ಟರಮಟ್ಟಿಗೆ ಕೊಡಬೇಕು, ಹಾಗೆ ಕೊಡಬೇಕಾದ ಪಕ್ಷದಲ್ಲಿ, ಈ ಪರಿಹಾರದ ಹಣವನ್ನು ಯಾವ ರೀತಿಯಿಂದ ಪಾವತಿ ಮಾಡಬೇಕು, ಅದಕ್ಕೆ ಎಷ್ಟು ಮೊಬಲಗನ್ನು ನಿರ್ಧರಿಸಬೇಕು, ಇದರಲ್ಲಿ ಯಾರ್ಯಾರಿಗೆ ಏನೇನು ರಿಯಾಯಿತಿಗಳನ್ನು ಕೊಡಬೇಕು ಎಂಬ ಈ ಅಂಶಗಳನ್ನು ವಿಮರ್ಶೆ ಮಾಡುವಂತೆ ಸರ್ಕಾರದವರು ಸೂಚನೆ ಕೊಟ್ಟಿದ್ದರು. ಈ ಒಂದು ಚೌಕಟ್ಟಿನಲ್ಲಿ ಜತ್ತಿ ಸಮಿತಿಯವರು ವರದಿಯನ್ನು ತಯಾರಿಸಿ ನಮ್ಮ ಮೆಚ್ಚುಗೆಯನ್ನು ಪಡೆದಿದ್ದಾರೆ.

ಬಹಳ ಮಟ್ಟಿಗೆ ಮಾತನಾಡಿದ ಮಾನ್ಯ ಸದಸ್ಯರೆಲ್ಲರೂ ಕೂಡ ಈ ವಿಷಯದಲ್ಲಿ ಒಂದು ರೀತಿಯಾದ ಗೇಣಿ ಶಾಸನವನ್ನು ತರತಕ್ಕದೆಂದು ಒಪ್ಪಿದರೂ ಕೂಡ, ಹೆಚ್ಚಾಗಿ ವಿವಾದಕ್ಕೆ ಆಸ್ಪದ ಕೊಟ್ಟಂಥ ಒಂದು ವಿಷಯವೆಂದರೆ ಕುಟುಂಬಕ್ಕೆ ನಿರ್ದಿಷ್ಟವಾಗಿ ಎಷ್ಟು ಜಮೀನನ್ನು ನಿಗದಿ ಮಾಡಬೇಕು, ಎನ್ನುವ ವಿಷಯ. ಆ ವಿಷಯದಲ್ಲಿ ಅನೇಕ ರೀತಿಯ ಸೂಚನೆಗಳು ಬಂದವು. ಈ ಕುಟುಂಬ ಹಿಡುವಳಿ ಮಿತಿ ವಿಷಯದಲ್ಲಿ ವಿರೋಧವಾಗಿ ಮಾತನಾಡಿದ ಮಹನೀಯರೆಲ್ಲರೂ ಕೂಡ ಈ ವರದಿಯನ್ನು ಅಂಕಿ ಅಂಶಗಳ ಮುಖಾಂತರ ಜರಿದಿದ್ದರೆ ಎಷ್ಟು ಜಮೀನು ಕುಟುಂಬ ಹಿಡವಳಿಯಾಗುತ್ತಿತ್ತೆಂದು ಗೊತ್ತಾಗುತ್ತಿತ್ತು. ಸ್ವಲ್ಪ ಮಟ್ಟಿಗೆ ಲೆಕ್ಕ ಹಾಕಿದರೆ 3,600 ರೂಪಾಯಿ ಗ್ರಾಸ್ ಇನ್‌ಕಮ್ ಅಂದರೆ ಒಟ್ಟು ಉತ್ಪನ್ನ ಎಂದು ಹೇಳಿದರೆ ಒಂದು (ಫ್ಯಾಮಿಲಿ ಹೋಲ್ಡಿಂಗ್) ಕುಟುಂಬದ ಹಿಡುವಳಿಯು ಆಗಿರಬೇಕು ಮತ್ತು ಇದರ ಮೂರರಷ್ಟು ಒಂದು ಕುಟುಂಬ ಹಿಡುವಳಿ ಮಿತಿ (ಫ್ಯಾಮಿಲಿ ಸೀಲಿಂಗ್) ಆಗಿರಬೇಕು, 3,600 ರೂಪಾಯಿನ ನಾಲ್ಕುವರೆಯಷ್ಟು ಒಂದು ಸಂಸಾರದ ಸ್ವಂತ ಬೇಸಾ

ಯಕ್ಕೆ ಅವಕಾಶವಿರಬೇಕು; ಅದರ ಎರಡರಷ್ಟು ಅವಿಭಕ್ತ ಕುಟುಂಬದ ಸ್ವಂತ ಬೇಸಾಯಕ್ಕೆ ಕೊಡುವುದಕ್ಕೆ ಜತ್ತಿ ಸಮಿತಿ ವರದಿಯಲ್ಲಿ ಸಲಹೆ ಮಾಡಿದ್ದಾರೆ.

ಉತ್ಪನ್ನವನ್ನು ಲೆಕ್ಕ ಹಾಕಲು 1952-53 ನೆಯ ಸಾಲಿನ ಧಾನ್ಯಗಳ ಬೆಲೆಯನ್ನು ನಿಗದಿಯಾಗಿ ಇಟ್ಟುಕೊಳ್ಳಬೇಕು ಎಂದು ಹೇಳಿದ್ದಾರೆ. ಒಂದು ಎಕರೆ ಖುಷ್ಕಿ ಜಮೀನಿನಲ್ಲಿ ಸುಮಾರು ಮೂರು ಪಲ್ಲ ದಿನಸಿ ಎಂದು ಇಟ್ಟು ಲೆಕ್ಕಹಾಕಿ ನೋಡಿದರೆ, ಒಂದು ಎಕರೆಗೆ ಮೂರು ಪಲ್ಲ ಎಂದರೆ, 75 ರೂಪಾಯಿ ಆಗುತ್ತದೆ. ಅಲ್ಲಿಗೆ 144 ಎಕರೆ ಖುಷ್ಕಿ ಜಮೀನು ಆಗುತ್ತದೆ. ಅವಿಭಕ್ತ ಕುಟುಂಬಕ್ಕೆ 288 ಎಕರೆ ಆಗುತ್ತದೆ. ಒಂದು ಸಂಸಾರದ ಸ್ವಂತ ಸಾಗುವಳಿಗೆ 216 ಎಕರೆ ಜಮೀನು ಬರುತ್ತದೆ. ಅದೇ ರೀತಿಯಾಗಿ, ಅದರ ಎರಡರಷ್ಟು, ಅಂದರೆ 432 ಎಕರೆ ಜಮೀನನ್ನು ಒಂದು ಅವಿಭಕ್ತ ಕುಟುಂಬದ ಸ್ವಂತ ಸಾಗುವಳಿಗೆ ಕೊಡಬಹುದು ಎಂದು ಜತ್ತಿ ಸಮಿತಿಯವರು ಶಿಫಾರಸು ಮಾಡಿದ್ದಾರೆ.

ಆ ದೃಷ್ಟಿಯಿಂದ ನೋಡುವುದಾದರೆ ಇದರಿಂದ ಎಷ್ಟು ಜನಕ್ಕೆ ತೊಂದರೆಯಾಗುತ್ತದೆ ಅಥವಾ ಎಷ್ಟು ಜನ ಜಮೀನ್‌ದಾರರು ಈ ವರದಿಯ ಪರಿಮಿತಿಯಲ್ಲಿ ಬರುತ್ತಾರೆ ಎಂಬುದನ್ನು ಲೆಕ್ಕ ಹಾಕಿದರೆ ಅವರು ಕೊಟ್ಟಿರತಕ್ಕ ಅಂಕಿ ಅಂಶಗಳ ಪ್ರಕಾರ 200, 300 ಎಕರೆವರೆಗೂ 1,673 ಜನ ಹಿಡುವಳಿದಾರರು ಇದ್ದಾರೆ. ಹಾಗೆಯೇ 300 ರಿಂದ 500 ಎಕರೆ ವರೆಗೂ 838 ಜನ ಇದ್ದಾರೆ, 500 ರಿಂದ ಸಾವಿರದ ವರೆಗೂ 379 ಜನ ಇದ್ದಾರೆ. 1,000 ಎಕರೆ ಇರುವವರು 153 ಜನ ಇದ್ದಾರೆ. ಇಲ್ಲಿರುವ ರೀತಿಯಲ್ಲಿ ಕಾನೂನು ಮಾಡಿದ್ದೇ ಆದರೆ ಇಷ್ಟು ಜನಕ್ಕೆ ಇದು ಅಳವಡಿಸುತ್ತದೆ ಎಂದು ನನ್ನ ಭಾವನೆ. ಈ ರೀತಿ ಆಗುವುದರಿಂದ ಈ ವರದಿ ಪ್ರಗತಿಪರವಾಗಿಯೋ ಅಥವಾ ಇನ್ನು ಹಿಂದಕ್ಕೆ ಹೋಗಿದೆಯೋ ಎಂದು ಹೇಳಿದರೆ, ಹೈದರಾಬಾದು, ಮುಂಬೈ ಕರ್ನಾಟಕದಲ್ಲಿ ಏನು ಗೇಣೀ ಕಾನೂನು ಮಾಡಿದ್ದಾರೋ ಅದಕ್ಕಿಂತ ಬಹಳ ಹಿಂದೆ ಹೋಗಿದೆ ಎಂದು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಮತ್ತು ಈ ರೀತಿಯಾಗಿ ಒಂದು ಕುಟುಂಬಕ್ಕೆ ನಾವು 216 ಎಕರೆ ಮತ್ತು ಅವಿಭಕ್ತ ಕುಟುಂಬಕ್ಕೆ 432 ಎಕರೆ ಖುಷ್ಕಿ ಜಮೀನನ್ನು ಕೊಡುವುದಾದರೆ ನೀವು ಯಾವ ರೀತಿಯಲ್ಲೂ ಕೂಡ ಗೇಣಿದಾರರಿಗಾಗಲೀ, ಗೇಣಿಯನ್ನು ಅವಲಂಬಿಸಿಕೊಂಡಿರತಕ್ಕ ಜನಗಳಿಗೆ ಯಾವ ವಿಧವಾದ ಸೌಕರ್ಯವನ್ನೂ ಕೂಡ ಒದಗಿಸಿಕೊಟ್ಟಂತೆ ಆಗುವುದಿಲ್ಲ. ಇದು ಅಂತಹ ಪ್ರಗತಿಪರವಾದ ಕಾಯಿದೆ ಆಗುವುದಿಲ್ಲ ಎಂದು ಹೇಳುತ್ತೇನೆ. ಈ ರೀತಿ ಗೇಣೀ ಶಾಸನವನ್ನು ಮಾಡಿದ್ದೇ ಆದರೆ ದೇಶದಲ್ಲಿ ಅಲ್ಲೋಲ ಕಲ್ಲೋಲವಾಗುತ್ತದೆ ಮತ್ತು ನಾವು ಜನಕ್ಕೆ ಏನು ಭರವಸೆ ಕೊಟ್ಟು ಬಂದಿದ್ದೇವೆಯೋ ಅದನ್ನು ಈಡೇರಿಸಿದ ಹಾಗಾಗುವುದಿಲ್ಲ. ಕಾಂಗ್ರೆಸ್‌ನವರು ಮೊದಲನೆ ಚುನಾವಣೆ ಘೋಷಣೆಯಲ್ಲಿ ಹೇಳಿದ್ದಾರೆ, ಎರಡನೆ ಚುನಾವಣೆ ಘೋಷಣೆಯಲ್ಲಿ ಹೇಳಿದ್ದಾರೆ, ನಾವು ಇಂಡಿವಿಜ್ಯುಯಲ್ ಹೋಲ್ಡಿಂಗ್‌ನ ಮೇಲೆ ಸೀಲಿಂಗ್ ಹಾಕುತ್ತೇವೆಂದು ಹೇಳಿ ಇವತ್ತಿನ ದಿವಸ ಕಾಂಗ್ರೆಸ್‌ನವರಾದ ನಾವು ಈ ರೀತಿ ಕಾನೂನು ತರುವುದಾದರೆ ಆಹಾರದ ಉತ್ಪಾದನೆಗೆ ಅಡಚಣೆಯಾಗುತ್ತದೆ. ದೇಶದಲ್ಲಿ ಆಹಾರ ಪರಿಸ್ಥಿತಿ ಇನ್ನೂ ಕೆಳಮಟ್ಟಕ್ಕೆ ಹೋಗುತ್ತದೆ ಎನ್ನುವ ವಾದ ಸರಿ ಎಂದು ಸ್ವಲ್ಪಮಟ್ಟಿಗೆ ಕಂಡರೂ ಒಂದು ವಿಷಯ ಹೇಳಬೇಕಾಗಿದೆ. ಶ್ರೀಮಾನ್ ಚನ್ನಬಸಪ್ಪನವರು ಮಾತನಾಡುವಾಗ ಕೆಲವು ಅಂಕಿ ಅಂಶಗಳನ್ನು ಕೊಟ್ಟರು. ಆ ಅಂಕಿ ಅಂಶ ಕೊಡುವಾಗ ಅವರು ಬಹಳ ಬುದ್ಧಿವಂತರು, ಅನುಭವಶಾಲಿಗಳು ಮತ್ತು ಸ್ವತಃ ಭೂಮಿಯನ್ನು ಅವಲಂಬಿಸಿಕೊಂಡಿರತಕ್ಕವರು. ಅವರು ಹೆಚ್ಚು ಭೂಮಿಯನ್ನು ಅವಲಂಬಿಸಿಕೊಂಡಿದ್ದರೂ ಸಹ ನಾನೂಕೂಡ ಅವರಂತೆಯೇ ಸಣ್ಣದಾಗಿ ಭೂಮಿಯನ್ನವಲಂಬಿಸಿಕೊಂಡಿರತಕ್ಕ ರೈತನ ಮಗ. ಇವತ್ತೂಕೂಡ ರೈತನಾಗಿ ಜೀವನ ನಡೆಸುತ್ತಿರುವವನು. ಜಪಾನ್, ಚೈನಾ, ಇಂಡಿಯಾ ಇಲ್ಲೆಲ್ಲಾ ಯಾವ ಯಾವ ಕಡೆ ಭೂಮಿಯ ಮೇಲೆ ಎಷ್ಟೆಷ್ಟು ಜನರ ಒತ್ತಡ ಇದೆ ಎಂಬುದನ್ನು ಹೇಳಿ ಅದನ್ನು ಕಮ್ಮಿ ಮಾಡದ ಹೊರತು ಉತ್ಪಾದನೆ ಹೆಚ್ಚುಮಾಡುವುದಕ್ಕಾಗುವುದಿಲ್ಲ ಎಂದು ಅವರು ಹೇಳಿದರು. ಜಪಾನ್‌ನಲ್ಲಿ ಭೂಮಿಯ ಮೇಲೆ ಹೆಚ್ಚಿನ ಒತ್ತಡ ಇರುವುದರಿಂದಲೇ ಜಪಾನ್ ಮಾದರೀ ಕಲ್ಟಿವೇಷನ್ ಅಂತ ಹೇಳಿ ಜಪಾನ್‌ನವರು ಹೆಚ್ಚು ಆಹಾರ ಬೆಳೆಯನ್ನು ಮಾಡುತ್ತಾ ಇದ್ದಾರೆ. ಅದನ್ನು ನಾವು ನೋಡುತ್ತಾ ಇದ್ದೇವೆ. ಅವರ ಜನಸಾಂದ್ರತೆ ಹೆಚ್ಚಾಗಿರುವುದರಿಂದ ಬೆಳೆಯನ್ನು ಯಾವ ರೀತಿ ಹೆಚ್ಚು ಮಾಡುವುದಕ್ಕೆ ಸಾಧ್ಯವಾಗುತ್ತದೆಯೋ ಅಂತಹ ಸಾಧನೆಯನ್ನು ಕಂಡುಹಿಡಿದು ಅದರ ಪ್ರಕಾರ ಹೆಚ್ಚು ಉತ್ಪಾದನೆ ಮಾಡುವುದಕ್ಕೆ ಅವರು ಪ್ರಯತ್ನಮಾಡಿದ್ದಾರೆ. ಇಲ್ಲೂ ಕೂಡ ನಾನು ಅಂಕಿ ಅಂಶ ಕೊಟ್ಟ ರೀತಿಯಲ್ಲಿ ಹೆಚ್ಚು ಜಮೀನು ಇರತಕ್ಕವರು ಜಮೀನು ಸಾಗುವಳಿ ಮಾಡದೇ ಹಾಗೆಯೇ ಬಿಟ್ಟು ಬಂಜರು ಬಿದ್ದಿರುವುದರಿಂದ ಇವತ್ತು ಆಹಾರದ ಉತ್ಪಾದನೆಗೆ ಧಕ್ಕೆ ಬಂದಿದೆ. ಇಂಥಾ ಪರಿಸ್ಥಿತಿಯನ್ನು ಅವರು ಹೀಗೆಯೇ ಇಟ್ಟುಕೊಂಡು ಹೋಗಿ ಎಂದು ಹೇಳುತ್ತಾರೆಯೇ?

Sri H. M. CHANNABASAPPA (Krishnarajanagar).—It is not correct to say that where there is pressure of population the production will increase. I did not make that statement. I want the Hon'ble Member to quote me correctly.

ಶ್ರೀ ಬಿ. ರಾಚಯ್ಯ.—ಅವತ್ತು ಅವರು ಹೇಳಿದ ರೀತಿಯಲ್ಲಿ ಒಂದು ಎಕರೆ ಜಮೀನಿನಲ್ಲಿ ಎಷ್ಟು ಜನ ಸಂದಣಿ ಇದೆ ಎನ್ನುವ ಅಂಕಿಅಂಶ ಕೊಟ್ಟರು. ನಾನು ಅರ್ಥಮಾಡಿಕೊಂಡದ್ದು ಜನಸಂದಣಿ ಹೆಚ್ಚಾಗಿದ್ದು ಅದು ಭೂಮಿಯ ಮೇಲೆ ಒತ್ತಡ ಜಾಸ್ತಿಯಾಗುತ್ತದೆ. ಆದ್ದರಿಂದ ಅಲ್ಲಿ ಹೆಚ್ಚು ಬೆಳೆಯನ್ನು ಉತ್ಪಾದನೆ ಮಾಡುವುದಕ್ಕೆ ನಾನಾ ರೀತಿಯಲ್ಲಿ ಸಾಧನಗಳನ್ನು ಕಂಡುಹಿಡಿದು ಪ್ರಯತ್ನಮಾಡಿದರು.

Sri H. M. CHANNABASAPPA.—In China the pressure of population is much greater than elsewhere. Still it produces less per acre while Japan produces more per acre.

ಶ್ರೀ ಬಿ. ರಾಚಯ್ಯ.—ಅವರು ಕೊಟ್ಟಿರತಕ್ಕ ಅಂಕಿ ಅಂಶದ ಪ್ರಕಾರ ಜಪಾನಿನಲ್ಲಿ 300 ಜನ ಇದ್ದಾರೆ, ಚೈನಾದಲ್ಲಿ 200 ಜನ ಇದ್ದಾರೆ, ಇಂಡೋ ಚೈನಾದಲ್ಲಿ 126 ಜನ ಇದ್ದಾರೆ, ಕೇರಳದಲ್ಲಿ 160 ಜನ ಇದ್ದಾರೆ, ಆಂಧ್ರದಲ್ಲಿ 81 ಜನ ಇದ್ದಾರೆ, ಮೈಸೂರಿನಲ್ಲಿ 60ಜನ ಇದ್ದಾರೆ ಎಂದು ಹೇಳಿದರು. ಆದ್ದರಿಂದ ಚೈನಾದಲ್ಲಿ ಜಪಾನ್‌ಗಿಂತ ಹೆಚ್ಚಾಗಿಲ್ಲ. ಇವತ್ತಿನ ದಿವಸ ಜಪಾನ್‌ನಲ್ಲೇ ಹೆಚ್ಚು ಉತ್ಪಾದನೆ ಮಾಡುತ್ತ ಇರುವುದು. ಆದ್ದರಿಂದ ನಾನು ಹೇಳುವುದೇನೆಂದರೆ, ಹೆಚ್ಚು ಜಮೀ

(ಶ್ರೀ ಬಿ. ರಾಚಯ್ಯ)

ನು ಇದ್ದಷ್ಟು ಹೆಚ್ಚು ಸಾಧನಗಳ ಮುಖಾಂತರ ಹೆಚ್ಚು ಬೆಳೆಯನ್ನು ಮಾಡುತ್ತೇವೆ ಎಂದು ಹೇಳುವುದರಲ್ಲಿ ನನ್ನ ಅನುಭವ ಹೇಳುವುದಾದರೆ ಯಾವನು ಭೂಮಿಯಲ್ಲಿ ತನ್ನ ಸರ್ವಸ್ವವನ್ನು ಇಟ್ಟು ಕೆಲಸ ಮಾಡುತ್ತಾನೆಯೋ ಅಲ್ಲಿ ಹೆಚ್ಚು ಬೆಳೆಗಳನ್ನು ಮಾಡಲಿಕ್ಕೆ ಅವಕಾಶವಾಗುತ್ತದೆ. ಈ ದೃಷ್ಟಿಯಿಂದ ಕಡಿಮೆ ಜಮೀನು ಇದ್ದು ಹೆಚ್ಚು ಬೆಳೆಯನ್ನು ಉತ್ಪಾದನೆ ಮಾಡತಕ್ಕ ದಾರಿಯಲ್ಲಿ ನಾವು ಈ ಹತ್ತು ವರ್ಷಗಳಲ್ಲಿ ಹೋಗಿಲ್ಲ. ಯಾವನು ಭೂಮಿಯನ್ನು ಅವಲಂಬಿಸಿಕೊಂಡಿದ್ದಾನೆ, ಹೆಚ್ಚು ಉತ್ಪಾದನೆ ಮಾಡತಕ್ಕ ಶಕ್ತಿ ಇದೆ ಅವನ ಕೈಯಲ್ಲಿ ಭೂಮಿ ಇಲ್ಲದೆ ಹೆಚ್ಚು ಐಶ್ವರ್ಯವಂತರ ಮತ್ತು ನಾನು ಹೇಳಿದ ಅಂಕಿಅಂಶದ ಪ್ರಕಾರ ಕೆಲವೇ ಜನರ ಹಿಡಿತದಲ್ಲಿ ಭೂಮಿ ಸಿಕ್ಕಿ ಉತ್ಪಾದನಾ ಶಕ್ತಿ ಕಡಿಮೆಯಾಗಿದೆ ಎಂದು ಹೇಳಿ ಈ ಸಂದರ್ಭದಲ್ಲಿ ಸೂಚಿಸುತ್ತಾ ಇದ್ದೇನೆ. ಹೆಚ್ಚು ಭೂಮಿಯನ್ನು ಇಟ್ಟುಕೊಂಡು ಏನೂ ಕೆಲಸಮಾಡದೆ ಭೂಮಿಯಲ್ಲಿ ಸಾಗುವಳಿಮಾಡಿ ಹೆಚ್ಚು ಉತ್ಪಾದನೆಮಾಡದೇ ಹಾಗೆಯೇ ಇಟ್ಟುಕೊಂಡು ಇರಬೇಕೆಂದು ಅವರು ಹೇಳುತ್ತಾರೆಯೇ? ಅಥವಾ ಸರ್ಕಾರ ವಹಿಸಿಕೊಳ್ಳಬೇಕೆಂದು ಹೇಳ ತ್ತಾರೆಯೇ? ಈ ರೀತಿ ಹಿಡುವಳಿ ನಿಗದಿ ಮಾಡಿರುವುದರಲ್ಲಿ ಜತ್ತಿ ಸಮಿತಿಯವರು ಕೆಲವು ರಿಯಾಯಿತಿಗಳನ್ನು ತೋರಿಸಿದ್ದಾರೆ 216 ಎಕರೆ ಒಂದು ಕುಟುಂಬಕ್ಕೆ 432 ಎಕರೆ ಖುಷ್ಕಿ ಅವಿಭಕ್ತ ಕುಟುಂಬಕ್ಕೆ ಇದು ಬಹಳ ಜಾಸ್ತಿ. ಹೈದರಾಬಾದು, ಮುಂಬೈ ಕರ್ನಾಟಕದಲ್ಲಿ ಏನು ಸ್ಟ್ಯಾಂಡರ್ಡ್ ಎಕರ್ ಫಿಕ್ಸ್‌ಮಾಡಿದ್ದಾರೆ ಆ ರೀತಿ ಮಾಡಿ. ಕೆಲವು ಸದಸ್ಯರು ಈ ನಿವ್ವಳ ಆದಾಯ 1,200 ರೂಪಾಯಿ ಇರುವುದು ಕೆಲವು ಸಂದರ್ಭದಲ್ಲಿ ಹತ್ತು ಎಕರೆ ಇದ್ದರೂ ಸಹ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿದರು. ಅದಕ್ಕೇ ಈ ಮೊಬಲಗನ್ನು ನಿಗದಿ ಮಾಡುವುದರಿಂದ ಆಯಾಯಾ ಪ್ರದೇಶದ ಪರಿಸ್ಥಿತಿ ಬೇರೆ ಬೇರೆಯಾಗಿದ್ದು ಅನೇಕರಿಗೆ ತೊಂದರೆಯಾಗುತ್ತದೆ. ತರೀ ಜಮೀನಿನಲ್ಲಿ ಒಂದು ಎಕರೆಗೆ 8 ಪಲ್ಲಾದವನ ಬರುತ್ತದೆ ಎಂದು ಏನು ಹೇಳಿದ್ದಾರೆ ಅದನ್ನು ಒಂದು ಸ್ಟ್ಯಾಂಡರ್ಡ್ ಆಗಿಟ್ಟುಕೊಂಡು, ಖುಷ್ಕಿ ಜಮೀನಿನ ಸ್ಟ್ಯಾಂಡರ್ಡ್ ಹೈದರಾಬಾದು ಅಥವಾ ಮುಂಬೈ ಕರ್ನಾಟಕದಲ್ಲಿರುವುದನ್ನೇ ಸ್ವಲ್ಪ ಹೆಚ್ಚು ಕಮ್ಮಿ ಮಾಡಿಕೊಂಡು ಇಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ಸೂಚನೆ ಕೊಡುತ್ತ ಇದ್ದೇನೆ. ಶ್ರೀಮಾನ್ ಚನ್ನಬಸಪ್ಪನವರ ಡೆಫಿನಿಷನ್ ಪ್ರಕಾರ ಪರ್ಸನಲ್ ಕಲ್ಟಿವೇಷನ್‌ಗೆ ತಾನಾಗಲೀ ತನ್ನ ಕುಟುಂಬವಾಗಲೀ ಅಥವಾ ಕೂಲಿಯಿಂದ ಮಾಡಿಸಿದರಾಗಲೀ ಅದಕ್ಕೆ ಸೀಲಿಂಗ್ ಲಿಮಿಟ್ ಇಡಕೂಡದೆಂದು ಅವರು ಸೂಚನೆ ಮಾಡುತ್ತಾರೆ. ಹೀಗೆ ಮಾಡುವುದಾದರೆ ತಾವೂ ಸ್ವಂತ ಸಾಗುವಳಿ ಮಾಡದೇ, ಇತರರಿಗೂ ಜಮೀನನ್ನು ಕೊಡದೆ ಆಹಾರ ಉತ್ಪಾದನೆ ಕಮ್ಮಿಯಾಗುವುದಕ್ಕೆ ಅವಕಾಶವಾಗುತ್ತದೆ. ಆ ದೃಷ್ಟಿಯಿಂದ ಪರ್ಸನಲ್ ಕಲ್ಟಿವೇಷನ್‌ಗೂ ಕೂಡ ಕಾಂಗ್ರೆಸ್ ಮ್ಯಾನಿಫೆಸ್ಟೋನಲ್ಲಿ ಹೇಳಿರುವ ಪ್ರಕಾರ ಸೀಲಿಂಗ್ ಹಾಕುವುದನ್ನು ಒಪ್ಪಲೇಬೇಕು. ಜತ್ತಿ ಸಮಿತಿಯವರು ಹೇಳಿರುವ ರೀತಿಯಲ್ಲಿಯಾದರೂ ಕುಟುಂಬ ಹಿಡುವಳಿ ಇಡೀ ದೇಶದಲ್ಲಿ ಎಷ್ಟು ಜನಗಳಿಗೆ ಇದು ಅನ್ವಯವಾಗುತ್ತದೆ ಎಂದು ಹೇಳುವುದಾದರೆ ಕೆಲವೆ ಜನರು ನಾನಾ ರೀತಿಯಲ್ಲಿ ಮೆಮೋರ್ಯಾಂಡಂಗಳು ಮನವಿಗಳನ್ನು ಸರ್ಕಾರದವರಿಗೆ ಸಲ್ಲಿಸುತ್ತ ಇದ್ದಾರೆ. ಈ ಸೀಲಿಂಗ್ ಲಿಮಿಟ್ ತರೀ, ಬಾಗಾಯ್ತು, ಕಾಫೀ ಮತ್ತು ರಬ್ಬರು ಪ್ಲಾಂಟೇಷನ್ ಇವೆಲ್ಲಕ್ಕೂ ಅನ್ವಯವಾಗುತ್ತದೆ ಎಂತಲೇ ನಿನ್ನೆ ದಿವಸ ಶ್ರೀಮಾನ್ ಮಲ್ಲಪ್ಪನವರು ಮಾತನಾಡುವುದಕ್ಕೆ ಮುಂಚೆ ನನ್ನ ಅಭಿಪ್ರಾಯ ಇತ್ತು. ಅವರು ಮಾತನಾಡುತ್ತ ಹೇಳಿದರು. ಹಿಂದೆ 1788ರಲ್ಲಿ ಸುಮಾರು 3 ಲಕ್ಷ ಎಕರೆ ಇದ್ದಂಥ ಕಾಫೀ ಎಸ್ಟೇಟನ್ನು ಇವತ್ತಿನ ದಿವಸ ಬಹಳ ಕಡಿಮೆ ಭಾಗಗಳಾಗಿ ಮಾಡಿ, ಕಾಫಿ ಎಸ್ಟೇಟ್ಸ್‌ನಲ್ಲಿ ಸಾಗುವಳಿಗೆ ಜಮೀನು ಇಲ್ಲದ ಹಾಗೆ ಮಾಡಿದ್ದಾರೆ. ಅದು ಅಲ್ಲದೆ ಎಷ್ಟೋ ಕಾಫಿ ಎಸ್ಟೇಟ್‌ಗಳಲ್ಲಿ ಸುಮಾರು 80 ಲಕ್ಷ ರೂಪಾಯಿಗಳ ವರೆಗೂ ಸರ್ಕಾರಕ್ಕೆ ವರಮಾನ ತೆರಿಗೆ ಬರುತ್ತ ಇದೆ. ಕಾಫಿಯನ್ನು ಬೆಳೆಯಬೇಕಾದರೆ, ಇದರಲ್ಲಿ chance ಎಂದು ಹೇಳುವ ಹಾಗೆ, ಬೆಳೆಯಬೇಕೇ ಹೊರತು ಸ್ವಾಭಾವಿಕವಾಗಿ ಬೆಳೆಯುವಹಾಗಿಲ್ಲ. ಡಾಲರ್ ಸಂಪಾದನೆಯ ಉದ್ದೇಶದಿಂದ ಕೇರಳ, ಮದರಾಸು ಮತ್ತು ಇತರ ಎಲ್ಲ ಕಡೆಗಳಲ್ಲಿಯೂ ಪರಿಮಿತಿಯನ್ನಿಡದೆ ವ್ಯವಸಾಯ ವರಮಾನ ತೆರಿಗೆಯನ್ನು ಹೆಚ್ಚು ಹಾಕಿದ್ದಾರೆ. ಇದರಲ್ಲಿ ವ್ಯವಸಾಯಗಾರರು ಮತ್ತು ಗೇಣಿದಾರರು ಎಂದಿಲ್ಲ, ಜಮೀನ್ದಾರರಿದ್ದಾರೆ, ಕೂಲಿಗಾರರಿದ್ದಾರೆ. ಗೇಣಿದಾರರು ಮತ್ತು ಜಮೀನಿಗೆ ಸಂಬಂಧಪಟ್ಟವರ ಸಂಬಂಧವೇನಿದೆಯೋ ಅದನ್ನು ಯೋಚನೆ ಮಾಡಬೇಕಾಗಿದೆ. ಎಲ್ಲಿ ಗೇಣಿದಾರ ಜಮೀನ್ದಾರನೆಂದಿಲ್ಲವೋ ಅಲ್ಲಿಗೆ ಇದು ಅನ್ವಯಿಸುವುದಿಲ್ಲವೆಂದು ಹೇಳಿ, ಈಗಿರುವ ಕಾಫಿ ಎಸ್ಟೇಟುಗಳಿಗೆ ವಿನಾಯಿತಿ ಕೊಟ್ಟು ಮುಂದೆ ಅಕ್ವೈರ್ ಆಗುವ ಕಾಫಿ ಎಸ್ಟೇಟುಗಳಿಗೆ ಮಾತ್ರ ಮೂರು ಫ್ಯಾಮಿಲಿ ಹಿಡುವಳಿಯ ಮಿತಿ ಅನ್ವಯಿಸುತ್ತದೆಂದು ಹೇಳಿದ್ದಾರೆ. ಈ ವಿಷಯದಲ್ಲಿ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಈಗ ಸಾಧ್ಯವಿಲ್ಲ. ಏಕೆಂದರೆ ನಾನು ಪೂರ್ಣವಾಗಿ ಪರಿಶೀಲಿಸಿ ಸ್ಪಷ್ಟವಾದ ಅಭಿಪ್ರಾಯಕ್ಕೆ ಬಂದಿಲ್ಲ. ಕಾನೂನು ಮಾಡುವಾಗ, ಈ ವಿಷಯದಲ್ಲಿ ಬಹುಮಂದಿಯ ಅಭಿಪ್ರಾಯ ಯಾವ ರೀತಿ ಇರುತ್ತದೆಯೋ ಆ ರೀತಿ ಮಾಡಬಹುದು.

ಗೇಣಿ ಮೂರನೆಯ ಒಂದು ಭಾಗ ಗೊತ್ತುಮಾಡಬೇಕೆಂದು ಶ್ರೀ ಚನ್ನಬಸಪ್ಪನವರು ತಿಳಿಸಿದರು. ಬೊಂಬಾಯಿ, ಹೈದರಾಬಾದು, ಮದರಾಸು, ಕೊಡಗು ಮತ್ತು ಹಳೆಯ ಮೈಸೂರು ಈ ಐದು ಭಾಗಗಳಲ್ಲಿರುವ ಪರಿಸ್ಥಿತಿಗಳನ್ನೂ ಗಮನಿಸಿದರೆ, ಜತ್ತಿ ಸಮಿತಿಯವರ ಸಲಹೆಯನ್ನು ಒಪ್ಪಿಕೊಳ್ಳುವುದು ನ್ಯಾಯ. ಏಕೆಂದರೆ, ಗೇಣಿಯನ್ನು ಕೊಡುವಾಗ ಗೇಣಿಗೆಮಾಡತಕ್ಕ ಜನ ವ್ಯವಸಾಯದ ಖರ್ಚನ್ನೂ ಹಾಕಿಕೊಳ್ಳಬೇಕಾಗಿದೆ. ಖರ್ಚನ್ನು ಕಳೆದು ಮೂರನೆಯ ಒಂದು ಭಾಗ ಕೊಡಬೇಕೆಂದು ಮಾಡಿದರೆ ನನ್ನ ಅಭ್ಯಂತರವಿಲ್ಲ. ಉಳಿಯತಕ್ಕ ಭೂಮಿಯನ್ನು ಗೇಣಿದಾರನಿಗೆ ಕೊಡುವುದಕ್ಕೆ ಏನು ಏರ್ಪಾಡಾಗಬೇಕು, ಸರ್ಕಾರದಲ್ಲಿ ಹಣವಿಲ್ಲದೆ, ಬಾಂಡುಗಳನ್ನು ಕೊಡುವುದಕ್ಕೆ ಬದಲು ಒಂದೇ ಸಾರಿ ಹಣವನ್ನು ಜಮೀನ್ದಾರರಿಗೆ ಕೊಡುವ ಏರ್ಪಾಡಾಗಬೇಕೆಂದು ಅನೇಕರು ಹೇಳಿದರು. ಸಣ್ಣ ಪುಟ್ಟ ಜಮೀನ್ದಾರರಿಗೆ ಆಗತಕ್ಕ ತೊಂದರೆಗಳ ವಿಚಾರ ಹೇಳಿದರು. ಈ ವರದಿಯ ಪ್ರಕಾರ 200 ಎಕರೆವರೆಗೆ ಮಿತಿ ಹೋಗುವುದರಿಂದ ಇವರೆಲ್ಲರೂ ಸಣ್ಣಪುಟ್ಟ ಜಮೀನ್ದಾರರು ಎಂದು ನಾನು ಭಾವಿಸುವುದಿಲ್ಲ. ರಾಜ್ಯಾಂಗವಿಧಿಯ ಪ್ರಕಾರ ಪರಿಹಾರವಿಲ್ಲದೆ ಜಮೀನನ್ನು ವಶಪಡಿಸಿಕೊಳ್ಳುವುದಕ್ಕಾಗುವುದಿಲ್ಲ. ಹೀಗಿರುವಾಗ ಸಮಿತಿಯವರು ಸೂಚಿಸಿರುವ ರೀತಿಯಲ್ಲಿ ಪರಿಹಾರವನ್ನು ಲೆಕ್ಕಹಾಕಿಕೊಡುವುದಕ್ಕೆ ಬದಲು ಆ ಜಮೀನಿನ ಮಾರ್ಕೆಟ್ ರೇಟಿನ ಶೇಕಡ 50ರಷ್ಟು ಕಡಮೆ ಕೊಡಬೇಕೆಂದು ಮಾಡಲಿ. ಕೆಲವು ಕಡೆ ಮಾರ್ಕೆಟ್ ರೇಟು ಕಡಮೆ ಇರುತ್ತದೆ, ಕೆಲವು ಕಡೆ ಹೆಚ್ಚಾಗಿರುತ್ತದೆ.

ಆದುದರಿಂದ ಮಾರ್ಕೆಟ್ ರೇಟಿನ ಶೇಕಡ 50 ರಷ್ಟು ಕಡಮೆ ಗೊತ್ತುಮಾಡಿ ಒಟ್ಟು ಮೊತ್ತವನ್ನು ಒಂದೇ ಸಾರಿ ಕೊಡಲು ಸಾಲವನ್ನೆತ್ತಿ ಕೊಡಲು ಪ್ರಯತ್ನ ಮಾಡುವುದಕ್ಕೆ ನನ್ನ ಅಭ್ಯಂತರವಿಲ್ಲ.

Sri H. M. CHANNABASAPPA.—What is the justification for fixing the compensation 50 per cent less than the market rate ?

ಶ್ರೀ ಬಿ. ರಾಚಯ್ಯ.—ಮಾರ್ಕೆಟ್ ಬೆಲೆಯ ಶೇಕಡ 50ರಷ್ಟು ಕೊಡಬೇಕೆಂದು ಏಕೆ ಹೇಳುತ್ತೇನೆಂದರೆ, ಆ ಜಮೀನನ್ನು ಬಹುಶಃ 25 ವರ್ಷಗಳಿಂದ ಅನುಭವಿಸಿರುತ್ತಾನೆ. ಯಾವ ಯಾವ ರೀತಿಯಲ್ಲೋ, ಯಾವ ಯಾವ ದರದಲ್ಲೋ ಆ ಜಮೀನನ್ನು ತೆಗೆದುಕೊಂಡಿರುತ್ತಾರೆ. ಇದನ್ನೆಲ್ಲಾ ಗಮನಿಸಿದರೆ, ನಾನು ಈಗ ಸೂಚಿಸಿದಷ್ಟು ಕೂಡ ಜಾಸ್ತಿಯಾಗುತ್ತದೆ. ಆದರೂ ಅವರು ಜಮೀನಿಗೆ ಮಾಡಿರುವ ಅಭಿವೃದ್ಧಿ ಕೆಲಸಗಳಿಗಾಗಿ ಸ್ವಲ್ಪ ಹೆಚ್ಚು ಕೊಡಬೇಕೆಂದು ನಾನು ಸೂಚಿಸಿದ್ದೇನೆ. ಹೀಗೆ ಶೇಕಡ 50ರಷ್ಟು ಕಡಮೆ ಕೊಡಬಹುದು. ಅಲ್ಲದೆ ಟೆನೆಂಟು ತನ್ನ ಶ್ರಮದಿಂದ ಭೂಮಿ ಈಗಿನ ಸ್ಥಿತಿಗೆ ಬರಲು ಕಷ್ಟಪಟ್ಟಿರುತ್ತಾನೆ. ಆದುದರಿಂದ ಈ ರೀತಿ ಮಾರ್ಕೆಟ್ ರೇಟಿಗೆ ಶೇಕಡ 50ರಷ್ಟು ಕಡಮೆ ಕೊಡಬೇಕೆಂದು ಹೇಳಿದ್ದೇನೆ. ಈ ಸಲಹೆಯನ್ನು ಒಪ್ಪಬಹುದು ಅಥವ ಬಿಡಬಹುದು.

ಇನ್ನು ಕೆಲವು exemptions ಅಥವ ವಿನಾಯಿತಿಗಳ ವಿಚಾರ ಹೇಳಿದ್ದಾರೆ. Family holding ಕಡಮೆ ಇರುವ ಜನರಿಗೆ ಅವರು ಎಲ್ಲಿಯೇ ಇರಲಿ, ಏನೇ ಕೆಲಸದಲ್ಲಿರಲಿ, ತಮ್ಮ ಜಮೀನನ್ನು ಗೇಣಿಗೆ ಕೊಟ್ಟು ಇಟ್ಟುಕೊಳ್ಳಲು ಅವಕಾಶಮಾಡಿಕೊಡಬೇಕೆಂದು ನನ್ನ ಅಭಿಪ್ರಾಯ. ಏಕೆಂದರೆ, ಭೂಮಿಯನ್ನವಲಂಬಿಸಿಕೊಂಡಿರುವವರು ಈ ಹೊತ್ತು ಕಾರಣಾಂತರಗಳಿಂದ ಬೇರೆ ಕೆಲಸದಲ್ಲಿರಬಹುದು, ನಾಳೆ ವ್ಯವಸಾಯಕ್ಕೇ ಬರಬಹುದು. ಉದಾಹರಣೆಗೆ, ನಾನು ರೈತರ ಮಗ ಸರ್ಕಾರಿ ನೌಕರಿಗೆ ಅಥವ ವಕೀಲಿ ವೃತ್ತಿಗೆ ಈ ಹೊತ್ತು ಬಂದಿದ್ದೇನೆ. ಕೆಲವು ಕಾಲವಾದ ಮೇಲೆ ನನ್ನ ಹಿರಿಯರು ಮಾಡಿರುವ ಜಮೀನಿಗೇ ಹೋಗಬೇಕೆಂದು ಇಚ್ಛಿಸಿದರೆ, ಜಮೀನನ್ನು ಪಡೆಯಲು ಅವಕಾಶವಿರಬೇಕು. ಗೇಣಿ ಮೂಲಕ ವಾರದ ಮೂಲಕ ಸಾಗುವಳಿಗೆ ಕೊಟ್ಟು ಕೊಂಡಿರುವುದಕ್ಕೆ ಅವಕಾಶವಿರಬೇಕು. ಉಳುವವನೇ ಜಮೀನಿನ ಒಡೆಯ ಎನ್ನುವ slogan ಕೂಗು ಕಿವಿಗೆ ಇಂಪಾಗಿರಬಹುದು. ನಾನು ಹೇಳುವುದು ಕಮ್ಯೂನಿಸ್ಟಿಕ್ ತತ್ವವೇನಲ್ಲ. ಸಣ್ಣಪುಟ್ಟ ಹಿಡುವಳಿಗಳನ್ನಿಟ್ಟುಕೊಂಡಿರುವ ಜನರಿಗೆ, ಅವರು ತಮ್ಮ ಜಮೀನಿನ ಮೇಲೆ ಹೋಗಬೇಕೆಂದು ಇಚ್ಛೆಪಟ್ಟರೆ, ಅದಕ್ಕೆ ಅವಕಾಶವಿರುವುದು ಒಳ್ಳೆಯದು. ಆದುದರಿಂದ ಇಂಥಾ ವಿನಾಯಿತಿಯನ್ನಿಟ್ಟುಕೊಂಡಿರುವುದು ಒಳ್ಳೆಯದು.

ಇನ್ನು resumption for personal cultivation ವಿಷಯ. ಕೆಲವು ಟೆನೆಂಟುಗಳು ಜಮೀನ್ದಾರರಿಗಿಂತ ದೊಡ್ಡವರಾಗಿದ್ದಾರೆ. ಒಬ್ಬ ಮನುಷ್ಯ ಗುಮಾಸ್ತನೋ, ಪ್ರೈಮರಿ ಶಾಲೆಯ ಉಪಾಧ್ಯಾಯನೋ ಆಗಿರಬಹುದು. ಆತ ತನಗಿರುವ ಒಂದೆರಡು ಎಕರೆ ಭೂಮಿಯನ್ನು ತನ್ನ ಪಕ್ಕದಲ್ಲಿರುವ ಜಮೀನ್ದಾರನಿಗೆ ವ್ಯವಸಾಯಕ್ಕೆ ಕೊಟ್ಟಿರುತ್ತಾನೆ. Family holding ಮತ್ತು personal cultivation ಗೆ ಎಷ್ಟು ಜಮೀನು ಬಿಡಬೇಕೋ ಅಷ್ಟು ಜಮೀನು ಮಾತ್ರ ಗೇಣಿದಾರನಿಗಿರಬೇಕು.

ಶ್ರೀ ಡಿ. ಮೂಕಪ್ಪ (ಸಾಗರ).—ಗೇಣಿದಾರನಿಗೆ ಜಮೀನು ಹೆಚ್ಚಾಗಿದೆ ಎಂದು ಹೇಳಿದಿರಿ, ಅವನ ಆರ್ಥಿಕ ಮಟ್ಟ ಹೆಚ್ಚಾಗಿದೆಯೋ ಅಥವ ಜಮೀನು ಮಾತ್ರ ಹೆಚ್ಚಾಗಿದೆಯೋ ?

ಶ್ರೀ ಬಿ. ರಾಚಯ್ಯ.—ನನ್ನ ಅನುಭವದಲ್ಲಿ, ದೊಡ್ಡ ಜಮೀನ್ದಾರರು ತೀರಾ ಬಡವರಾಗಿರುವವರಾಗಿದ್ದಾರೆ. ಗೇಣಿದಾರರಿಗೆ ಒಂದು ಮಿತಿ ಇಡದೇ ಇದ್ದರೆ, ಗೇಣಿದಾರರು ದೊಡ್ಡ ಜಮೀನ್ದಾರರಾಗುತ್ತಾರೆ. ಈ ದೃಷ್ಟಿಯಿಂದ ಗೇಣಿದಾರನಿಗೆ personal cultivation ಮತ್ತು ಕುಟುಂಬ ಹಿಡುವಳಿ ಸೀಲಿಂಗ್ ಗೊತ್ತುಮಾಡಬೇಕು.

ಇನ್ನು security of tenure, ಎಂದರೆ ಸ್ಥಿರತೆಯಿಲ್ಲದಿದ್ದರೆ, ಭೂಮಾಲೀಕನಿಗೂ ಗೇಣಿದಾರನಿಗೂ ಹೆಚ್ಚು ಉತ್ಪತ್ತಿ ಮಾಡುವುದಕ್ಕೆ ಅವಕಾಶವಿರುವುದಿಲ್ಲ. ಗೇಣೀದಾರನಿಗೆ ತನಗೆ ಕೊಟ್ಟಿರುವ ಜಮೀನನ್ನು ಬೇಗ ಬಿಡಿಸಿಕೊಳ್ಳುತ್ತಾನೆಂಬ ಭಯ ಬರುತ್ತದೆ. ಇದರಿಂದ ಜಮೀನಿನಲ್ಲಿ ಉತ್ಪತ್ತಿ ಕಡಮೆ ಬರುತ್ತದೆ. ಈ ದೃಷ್ಟಿಯಿಂದ ಸ್ಥಿರತೆ ಇರಬೇಕು.

2-30 P.M.

ಮಾನ್ಯ ಮಿತ್ರರು ಅನೇಕರು ದೊಡ್ಡ ದೊಡ್ಡ ಹಿಡುವಳಿಗಳನ್ನು ಇಟ್ಟುಕೊಂಡಿದ್ದಾರೆ. ಅವರು ಎಲ್ಲರೂ ಸ್ವಂತ ಸಾಗುವಳಿ ಮಾಡುತ್ತಾರೆಯೇ? ಅಂಥವರು ಇನ್ನೂ ದೊಡ್ಡ ಲ್ಯಾಂಡ್‌ಲಾರ್ಡ್ ಆಗುವದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಯಾರು ಭೂಮಿಯನ್ನು ಜೀವನಾಧಾರವಾಗಿ ಅವಲಂಬಿಸಿಕೊಂಡಿಲ್ಲವೋ ಅಂಥವರ ಭೂಮಿಯನ್ನು ತೆಗೆದುಕೊಂಡು ಕೇವಲ ಭೂಮಿಯನ್ನೇ ಅವಲಂಬಿಸಿಕೊಂಡಿರತಕ ಅಂಥವರಿಗೆ ಪ್ರಯಾರಿಟಿ ಕೊಟ್ಟು ಭೂಮಿ ಹಂಚಿಕೊಡಬೇಕು. ಇನ್ನು ಮುಂದೆ ಕಾನೂನು ತಯಾರುಮಾಡುವಾಗ ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ಆ ರೀತಿಯಾಗಿ ಸರಕಾರದವರು ಕಾನೂನು ರಚಿಸುವರೆಂದು ನಾನು ಭಾವಿಸಿಕೊಂಡಿದ್ದೇನೆ. ಮಂಗಳೂರು ಜಿಲ್ಲೆಯ ನೆರೆಯಲ್ಲಿರುವ ಕೇರಳ ರಾಜ್ಯದಲ್ಲಿ ಕಮ್ಯುನಿಸ್ಟರು ಈ ರೀತಿ ಮಾಡುತ್ತಿದ್ದಾರೆಂದು ಕೆಲವರು ಹೇಳಿದರು. ಭೂಸುಧಾರಣೆಯನ್ನು ಕಾಂಗ್ರೆಸ್ ಸರಕಾರ ಮಾಡದೇ ಇದ್ದರೆ ಮತ್ತೆ ಯಾರು ಮಾಡುತ್ತಾರೆ? ಈ ಕಾನೂನು ಜಾರಿಗೆ ತರುವದಕ್ಕೆ ಭೂಮಾಲಿಕರು ತಡೆಗಟ್ಟಲು ಸಾಧ್ಯವಾಗುವದಿಲ್ಲ. ಆದುದರಿಂದ ಈ ಅಧಿವೇಶನ ಮುಗಿಯುವದರೊಳಗಾಗಿ ಕಾನೂನನ್ನು ರಚಿಸಿ, ಸಭೆಯ ಮುಂದೆ ತಂದು ಪಾಸಮಾಡಿ ಶೀಘ್ರವಾಗಿ ಜಾರಿಗೆ ತರಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ರತ್ನಮ್ಮ ಮಾಧವರಾವ್ (ಶಿವಮೊಗ್ಗ).—ಸ್ವಾಮಿ, ಭೂಸಮಸ್ಯೆಯ ಪರಿಹಾರಕ್ಕೆ ಸಲಹೆಗಳನ್ನಿತ್ತಿರುವ ಜತ್ತಿ ಸಮಿತಿ ವರದಿಯನ್ನು ನಾನು ಓದಿದ್ದೇನೆ. ಈ ವರದಿಯನ್ನು ನಾನು ಸ್ವಾಗತಿಸುತ್ತೇನೆ. ಬಹು ಪ್ರಾಚೀನ ಕಾಲದಿಂದಲೂ ನಡೆದುಕೊಂಡು ಬಂದಿರತಕ್ಕ ಸಮಾಜ ಪದ್ಧತಿ ಈಗ ಬದಲಾಗಿ ಸಮತಾವಾದ ಸಮಾಜ ಪದ್ಧತಿಯು ಸರಕಾರ ಈಗ ಅಸ್ತಿತ್ವದಲ್ಲಿ ಬಂದಿದೆ. ಈ ಸಮಸ್ಯೆಯ ವಿಚಾರದಲ್ಲಿ ನಮ್ಮ ಸರಕಾರ ಪ್ರಗತಿಪರ ಮಾರ್ಗದಲ್ಲಿ ಮುಂದುವರಿದಿದೆಯೋ ಎಂಬುದನ್ನು ಈಗ ವಿಮರ್ಶೆಮಾಡಬೇಕಾಗಿದೆ. ಬಡವ, ಬಲ್ಲಿದ, ಶ್ರೀಮಂತ, ನಿರ್ಗತಿಕ, ವಿದ್ಯಾವಂತ, ಅವಿದ್ಯಾವಂತ, ಉದ್ಯೋಗಿ, ನಿರುದ್ಯೋಗಿ ಹೀಗೆ ನಾನಾತರದ ವ್ಯತ್ಯಾಸಗಳುಂಟಾಗಿ ಇಂದು ಸಮಾಜದಲ್ಲಿ ಅಶಾಂತಿ ಹಬ್ಬಿದೆ. ಸಮತಾವಾದ ಸಮಾಜ ರಚನೆಯ ಮೂಲ

(ಶ್ರೀಮತಿ ರತ್ನಮ್ಮ ಮಾಧವರಾವ್)

ತತ್ವದ ಆಧಾರದ ಮೇಲೆ ಇಂದು ಹೊಸ ಸಮಾಜ ರಚನೆಯಾಗಬೇಕಾಗಿದೆ. ಇದೊಂದು ದೊಡ್ಡ ರಾಷ್ಟ್ರ ಕಾರ್ಯವಾಗಿದೆ. ಈಗ ಪ್ರಜೆಗಳಲ್ಲಿ ಜಾಗ್ರತಿಯುಂಟಾಗಿದೆ. ಈ ಕಾರಣದಿಂದ ಸಮಾಜದಲ್ಲಿ ಅಶಾಂತಿಯುಂಟಾಗಿದೆ. ಇದಕ್ಕೆಲ್ಲಾ ಮೂಲ ಕಾರಣವಾದ ಸಮಾಜದಲ್ಲಿಯ ಆರ್ಥಿಕ ಪರಿಸ್ಥಿತಿಯ ವ್ಯತ್ಯಾಸ ದೂರವಾಗಬೇಕು. ಹಾಗೆ ಆಗದೇ ಹೋದರೆ ಈ ಸಮಾಜಕ್ರಾಂತಿ ವಿಕಾರಸ್ವರೂಪತಾಳದೇ ಬಿಡುವದಿಲ್ಲ. ಆದಕಾರಣ ಆರ್ಥಿಕ ಪರಿಸ್ಥಿತಿಯ ಬದಲಾವಣೆ ಆಗಬೇಕಾದುದು ಅಗತ್ಯ. ಈ ಕಾರಣಕ್ಕೋಸ್ಕರ ನಮ್ಮ ಪ್ರಜಾಸರಕಾರದವರು ಈ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿ ಪರಿಹಾರೋಪಾಯಗಳ ಸಲಹೆಗಳನ್ನು ಕೊಡಲು ಒಂದು ವರದಿಯನ್ನು ಒಪ್ಪಿಸಬೇಕೆಂದು ಜತ್ತಿ ಸಮಿತಿಯನ್ನು ನೇಮಕಮಾಡಿದರು. ಬಹುಕಾಲದಿಂದ ವ್ಯವಸಾಯ ಕ್ಷೇತ್ರದಲ್ಲಿ ಸುಧಾರಣೆ ಮಾಡಬೇಕೆಂದು ನಮ್ಮ ಸರಕಾರ ಪ್ರಯತ್ನಮಾಡುತ್ತಿರುವುದು ಶ್ಲಾಘನೀಯವಾಗಿದೆ. ಹಣಸಂಪಾದನೆಗಾಗಿ ಕೆಲವು ಜನರು ಕೆಲವೊಂದು ಕ್ಷೇತ್ರಗಳನ್ನು ಆರಿಸಿಕೊಳ್ಳುತ್ತಾರೆ. ಸ್ಥೂಲವಾಗಿ ಹೇಳುವದಾದರೆ ವ್ಯವಸಾಯಕ್ಷೇತ್ರ, ಕೈಗಾರಿಕಾಕ್ಷೇತ್ರ, ವಾಣಿಜ್ಯಕ್ಷೇತ್ರ ಸರಕಾರಿ ಉದ್ಯೋಗ, ಖಾಸಗಿ ಉದ್ಯೋಗ— ಇವೇ ಮುಖ್ಯವಾದವುಗಳು. ಸಮಾಜದಲ್ಲಿ ಶಾಂತಿ ನೆಲೆಸಿ ಪ್ರತಿಯೊಬ್ಬನೂ ಸುಖದಿಂದ ಜೀವನ ಸಾಗಿಸುವಂತೆ ಆಗಬೇಕಾದುದು ಪ್ರಾಮುಖ್ಯ. ಹಣ ಸಂಪಾದನೆ ಹೇಗೆ ಮಾಡಬೇಕು ಎಂಬ ದನ್ನು ದೀರ್ಘವಾಗಿ ಆಲೋಚನೆ ಮಾಡಬೇಕಾಗಿದೆ. ಉದಾಹರಣೆಗಾಗಿ ಒಂದು ಸಂಸಾರದವಿಷಯ ತೆಗೆದುಕೊಳ್ಳೋಣ. ಒಂದು ಕುಟುಂಬದಲ್ಲಿ ನಾಲ್ಕು ಜನ ಸಹೋದರರು ಇದ್ದಾರೆಂದು ತಿಳಿದುಕೊಳ್ಳೋಣ. ಒಬ್ಬನು ವಿದ್ಯಾವಂತನಾಗಿ ಚೀಫ್ ಎಂಜನಿಯರನಾಗಿ ಒಂದು ವರ್ಷಕ್ಕೆ 15 ಸಾವಿರ ರೂಪಾಯಿ ಸಂಪಾದಿಸುತ್ತಾನೆ. ಮತ್ತೊಬ್ಬನು ಹೈಕೋರ್ಟ ಜಡ್ಜನಾಗಿ ವರ್ಷಕ್ಕೆ 36,000 ರೂಪಾಯಿ ಗಳಿಸುತ್ತಾನೆ. ಇನ್ನೊಬ್ಬನು ಒಂದು ಉನ್ನತ ಪದವಿಯನ್ನು ಪಡೆದು ಅವನಿಗೆ ವರ್ಷಕ್ಕೆ ಎಂಟು ಸಾವಿರ ರೂಪಾಯಿ ಸಿಗಬಹುದು. ನಾಲ್ಕನೇಯವನು ವ್ಯವಸಾಯ ಕ್ಷೇತ್ರದಲ್ಲಿ ಸೇರಿ 24,000 ರೂಪಾಯಿ ಸಂಪಾದನೆ ಮಾಡಬಹುದು. ವ್ಯವಸಾಯ ಕ್ಷೇತ್ರದಲ್ಲಿ ಇದ್ದವನು ಆಧುನಿಕ ರೀತಿಯಿಂದ ವ್ಯವಸಾಯಮಾಡಿ ದೇಶದ ಸಂಪತ್ತನ್ನು ಹೆಚ್ಚಿಸಬೇಕಾದರೆ ಜಮೀನನ್ನು ತನ್ನ ಜೀವನೋಪಾಯವೆಂದು ಇಟ್ಟುಕೊಂಡರೆ ಅದರಿಂದ ಅವನ ಜೀವನಾಧಾರವಾಗುತ್ತಿದೆಯೇ ಎಂಬದನ್ನು ಆಲೋಚನೆ ಮಾಡಬೇಕಾಗಿದೆ. ಈ ರೀತಿ ಶ್ರದ್ಧೆ ವಹಿಸಿ ವ್ಯವಸಾಯ ಮಾಡುತ್ತಾ ಹಣ ಸಂಪಾದನೆ ಮಾಡಬೇಕೆಂದು ತಿಳಿದುಕೊಂಡಿದ್ದರೆ ಅವನ ಪರಿಸ್ಥಿತಿ ಏನಾಗುತ್ತದೆ ಎಂಬುದನ್ನು ಜತ್ತಿ ಸಮಿತಿಯವರು ಯೋಚನೆಮಾಡಿರುವರೇನು ? ವ್ಯವಸಾಯ ಕ್ಷೇತ್ರದಲ್ಲಿರುವವರು ಹಣ ಸಂಪಾದನೆ ಮಾಡಬೇಕೆಂಬ ಆಶೆಯನ್ನು ಮೊಟಕು ಮಾಡಲು ಕಾರಣವೇನು? ಎಲ್ಲಾ ಕ್ಷೇತ್ರಗಳಲ್ಲಿ ಪರಿಮಿತಿ ಹಾಕದೆ, ವ್ಯವಸಾಯ ಕ್ಷೇತ್ರಗಲ್ಲ ಮಾತ್ರ ಪರಿಮಿತಿ ಹಾಕುವದಕ್ಕೆ ಪ್ರಯತ್ನಪಟ್ಟರೆ ದೇಶದಲ್ಲಿ ಕ್ರಾಂತಿಯುಂಟಾಗುತ್ತದೆಂದು ನಾನು ಹೇಳುತ್ತೇನೆ. ವ್ಯವಸಾಯ ಕ್ಷೇತ್ರದಲ್ಲಿ ಮಾತ್ರ ಪರಿಮಿತಿ ವಿಧಿಸುವುದು ಇದು ಯಾವ ಧರ್ಮ? ಯಾವ ನ್ಯಾಯ? ಈ ಅಂಶವನ್ನು ಗಮನಕ್ಕೆ ತೆಗೆದುಕೊಳ್ಳದೆ ಈ ಸಮಸ್ಯೆಯನ್ನು ಪರಿಹರಿಸುವಾಗ ಈ ಅಂಶವನ್ನು ಬದಿಗೆ ಒತ್ತಿದರೆ ರೈತರ ಹಕ್ಕುಬಾಧ್ಯತೆಗಳಿಗೆ ಗದಾಪ್ರಹಾರ ಮಾಡಿದಂತಾಗುವುದು ಎಂಬುದು ತುಂಬಾ ಶೋಚನೀಯ. ಮೈಸೂರು ದೇಶದಲ್ಲಿರುವ ವ್ಯವಸಾಯ ಪದ್ಧತಿಯನ್ನು ನೋಡಿದರೆ ಭೂಸಮಸ್ಯೆ ಯಾವ ರೀತಿಯಾಗಿದೆ ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ನಮ್ಮ ದೇಶದಲ್ಲಿ ಗೇಣಿದಾರರು ನೂರಕ್ಕೆ ಒಂಭತ್ತರಷ್ಟು ಇದ್ದಾರೆ. ಹಿಡುವಳಿ ಪ್ರಮಾಣದಲ್ಲಿ ನೂರು ಎಕರೆ ಜಮೀನು ಇರತಕ್ಕ ರೈತರ ಸಂಖ್ಯೆ ಬಹಳ ಕಡಿಮೆ ಇದೆ. ಸಣ್ಣ ಹಿಡುವಳಿದಾರರ ಸಂಖ್ಯೆ ಶೇಕಡ 80ರ ಮೇಲೆ ಇದೆ. ಈ ರೀತಿಯಾಗಿ ನಿಜಪರಿಸ್ಥಿತಿ ಇರುವದರಿಂದ ಭೂಸುಧಾರಣೆ ಎಂಬ ಸಮಸ್ಯೆಗೆ ಬಣ್ಣ ಕೊಟ್ಟು ಭೂತಾಕಾರವಾಗಿ ಮಾಡುವುದು ಬಹಳ ಆಶ್ಚರ್ಯ. ಭೂಮಾಲೀಕ ಭೂಮಿಯ ಒಡೆತನವನ್ನು ರೈತನಿಗೆ ಬಿಟ್ಟುಬಿಡಬೇಕು ಎಂದು ಜತ್ತಿ ಸಮಿತಿ ವರದಿಯಲ್ಲಿ ಹೇಳಿರುವುದು ಅಂಗೀಕಾರಮಾಡಲು ಯೋಗ್ಯವಾಗಿಲ್ಲ. ಯೋಗ್ಯ ಪರಿಹಾರವಿಲ್ಲದೆ ಜಮೀನು ಬಿಟ್ಟುಕೊಡುವದಕ್ಕಾಗುವದಿಲ್ಲ. ಈ ಅಂಶದ ಬಗ್ಗೆ ಕಾನೂನಿನಲ್ಲಿ ವಿಸ್ತಾರವಾಗಿ ಸ್ಪಷ್ಟೀಕರಣವಿರಬೇಕು. ವ್ಯವಸಾಯಗಾರನಿಗೆ ಸ್ವಶಕ್ತಿಯಿಂದ ದುಡಿಮೆಮಾಡುವುದಕ್ಕೆ ಎಷ್ಟು ಜಮೀನು ಆವಶ್ಯಕವೋ ಅಷ್ಟನ್ನು ಕೊಡಬೇಕು. ಹಾಗೆ ಮಾಡುವಾಗ ಒಂದು ಷರತ್ತಿನ ಮೇಲೆ ಒಂದು ನಿಯಮದ ಮೇರೆಗೆ ಸಾಗುವಳಿಗೆ ಜಮೀನನ್ನು ಕೊಡಬಹುದು. ಹಾಗೆ ಮಾಡಿದರೆ ವ್ಯವಸಾಯಕ್ಷೇತ್ರದಲ್ಲೂ ಇತರ ಕ್ಷೇತ್ರಗಳಲ್ಲಿರುವಂತೆ ಹಣ ಸಂಪಾದನೆ ಮಾಡಲು ಸಮಾನ ಅವಕಾಶ ಸಿಕ್ಕಿದ ಹಾಗಾಗುತ್ತದೆ. ಒಂದು ವೇಳೆ ಅವನು ಸಾಗುವಳಿ ಮಾಡಲು ಅಶಕ್ತನಾದರೆ ಸರ್ಕಾರಕ್ಕೆ ಜಮೀನನ್ನು ವಾಪಸು ಕೊಡಬೇಕಾಗುತ್ತದೆ. ಆದಕಾರಣ ಧರ್ಮ ಮತ್ತು ನ್ಯಾಯಗಳಿಗನುಗುಣವಾಗಿ ಏರ್ಪಾಡುಮಾಡಬೇಕೇವಿನಾ ಪರಮಾವಧಿ ಉತ್ಪತ್ತಿ ನಿಗದಿಮಾಡಬೇಕೆಂದು ಸಮಿತಿ ಮಾಡಿರುವ ಸಲಹೆ ಒಪ್ಪುವುದಕ್ಕಾಗುವುದಿಲ್ಲ ಎಂದು ಬಹಳ ಸವಿನಯದಿಂದ ಹೇಳುತ್ತೇನೆ.

ಜತ್ತಿ ಸಮಿತಿ ಕಾಫಿ, ಏಲಕ್ಕಿ, ರಬ್ಬರ್ ಇತ್ಯಾದಿ ಬೆಳೆಯುವ ಭೂಮಿಗೆ ಪರಮಾವಧಿ ವಿಚಾರದಲ್ಲಿ ವಿನಾಯಿತಿ ಕೊಟ್ಟು ಹೆಚ್ಚಾಗಿ ಕಷ್ಟಪಟ್ಟು ವಿಶೇಷ ಹಣ ಖರ್ಚುಮಾಡಿ ಬೆಳೆಸಿರುವ ಅಡಿಕೆ ತೋಟಗಳಿಗೆ ವಿನಾಯಿತಿ ಕೊಟ್ಟಿಲ್ಲದಿರುವುದು ಬಹಳ ಆಶ್ಚರ್ಯಕರವಾಗಿದೆ. ಮಲೆನಾಡಿನಲ್ಲಿ ಬಹಳ ಅಡಿಕೆ ತೋಟಗಳಿವೆ. ವ್ಯವಸಾಯಗಾರರು ತಮ್ಮ ಸ್ವಶಕ್ತಿಯಿಂದ ಇತರ ಕ್ಷೇತ್ರಗಳಲ್ಲಿ ಹಣ ಸಂಪಾದಿಸುವಂತೆ ತಾವೂ ಸಂಪಾದಿಸುವುದಕ್ಕೆ ಅವಕಾಶವಿರಬೇಕು. ಅಡಿಕೆ ತೋಟಗಳಿಗೆ ವಿನಾಯಿತಿಯಿರಬೇಕಾದ್ದೂ ಅತ್ಯಾವಶ್ಯಕ. ವರಮಾನದ ಮೇಲೆ ಮಿತಿಯಿರಬಾರದು. ನಿಯಮಗಳನ್ನು ಗೊತ್ತುಮಾಡಿ ಅದರಂತೆ ನಡೆದುಕೊಳ್ಳದಿದ್ದರೆ ಜಮೀನನ್ನು ಪರಿಹಾರವಿಲ್ಲದೆ ಸರ್ಕಾರ ವಶಪಡಿಸಿಕೊಳ್ಳುವುದಕ್ಕೆ ಕಾನೂನಿನಲ್ಲಿ ಅವಕಾಶವಿರಬೇಕು. ಕಾಫಿ, ಏಲಕ್ಕಿ, ರಬ್ಬರ್ ಇತ್ಯಾದಿಗಳಿಗೆ ತೋರಿಸಿರುವಂತೆ ಅಡಿಕೆ ಬೆಳೆಗೂ ವಿನಾಯಿತಿ ತೋರಿಸಬೇಕು. ಸರ್ಕಾರದ ವಶದಲ್ಲಿರುವ ಲಕ್ಷಾಂತರ ಎಕರೆ ಜಮೀನನ್ನು ಜಮೀನಿಲ್ಲದಿರುವವರಿಗೆ, ವ್ಯವಸಾಯದ ಕೂಲಿಗಾರರಿಗೆ ಹಂಚಿ ಅವರು ವ್ಯವಸಾಯದಲ್ಲಿ ನಿರತರಾಗುವಂತೆ ಮಾಡಬೇಕು. ಈಗಿನ ವಿಶೇಷ ಪರಿಸ್ಥಿತಿಯನ್ನು ಗಮನಿಸಿ ಈ ಕಾರ್ಯಕ್ರಮದಲ್ಲಿ ಆದರ್ಶ ಮನೋಭಾವನೆಯನ್ನು ತೋರಿಸಿ, ಜಾಗ್ರತೆ ಸೂಕ್ತಕ್ರಮ ಕೈಕೊಳ್ಳಬೇಕು. ದೇಶದಲ್ಲಿರುವ ಆಹಾರದ ಅಭಾವ ಪರಿಸ್ಥಿತಿಯನ್ನು ಗಮನಿಸಿ ಹೆಚ್ಚು ಆಹಾರ ಬೆಳೆಯುವುದಕ್ಕೆ ಸರಿಯಾದ ಮಾರ್ಗವನ್ನನುಸರಿಸಬೇಕು. ಈ ವಿಚಾರದಲ್ಲಿ ಅನೇಕ ಮಿತ್ರರು ಸಲಹೆಮಾಡಿದ್ದಾರೆ. ಜತ್ತಿಸಮಿತಿ ವರದಿಯ

ಆಧಾರದ ಮೇಲೆ ಕಾನೂನು ಮಾಡುವಾಗ ಮಾನ್ಯ ಸದಸ್ಯರ ಸಲಹೆಗಳನ್ನು ಗಮನಿಸಿ ಹೆಚ್ಚು ಆಹಾರ ಬೆಳೆಯುವುದಕ್ಕೆ ಅವಕಾಶಮಾಡಬೇಕೆಂದು ಸವಿನಯದಿಂದ ಪ್ರಾರ್ಥನೆ ಮಾಡುತ್ತೇನೆ.

ಮಾನ್ಯ ಮಿತ್ರರಾದ ಶ್ರೀಮತಿ ನಾಗರತ್ನಮ್ಮನವರು ಈ ಸಮಿತಿಗೆ ಹೆಣ್ಣುಮಕ್ಕಳನ್ನು ತೆಗೆದುಕೊಂಡಿಲ್ಲವೆಂದು ಆಕ್ಷೇಪಿಸಿದರು. ತೆಗೆದುಕೊಳ್ಳದಿದ್ದರೂ ಪರವಾಗಿಲ್ಲ, ಅನಿವಾರ್ಯದಿಂದ ತೆಗೆದುಕೊಳ್ಳದಿರಬಹುದು, ಹೆಣ್ಣುಮಕ್ಕಳು ಈಗ ಸಲಹೆಮಾಡಿರುವುದನ್ನಾದರೂ ಗಮನಕ್ಕೆ ತೆಗೆದುಕೊಂಡು ಅದರಂತೆ ವ್ಯವಸ್ಥೆಮಾಡಿದರೆ ಅವರನ್ನು ತೆಗೆದುಕೊಂಡಂತಾಗುತ್ತದೆ ಎಂದು ಅರಿಕೆಮಾಡಿ ನಾನು ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

[Sri M. S. KAMTIKAR (Humnabad) spoke in Hindi; his speech is printed in the Appendix number to this volume.]

Sri MAHMOOD SHARIFF (Broadway).—On a point of information. Is there any arrangement to translate speeches made in Hindi or Urdu to English?

Mr. SPEAKER.—There is no arrangement. I am sorry because it is extremely difficult.

Sri MAHMOOD SHARIFF.—There are so many people here in Bangalore who can undertake the work of translating.

Mr. SPEAKER.—Simultaneous translation is a difficult thing. Anything spoken on the floor of the House will have to be translated immediately.

Sri J. H. SHAMSUDDIN (Honawar).—Are the speeches made recorded?

Mr. SPEAKER.—If the Hon'ble Members give prior notice arrangements can be made to record the speeches.

Sri J. H. SHAMSUDDIN.—May I know whether prior notice has to be given on the day or for the session?

Mr. SPEAKER.—On the day, not for the session.

An HON'BLE MEMBER.—Is it not a fact that in the Parliament the members who speak different languages are asked to give a resume of their speeches for being recorded.

Mr. SPEAKER.—Any person who speaks in any other language than Kannada has to give a gist of his speech beforehand. Of course I have not insisted on that. Here, the Reporters approach the concerned members who have made the speech in Hindi or Marathi and the members give a substance of the speech.

Sri J. P. SARWESH (Serum).—Is it not possible to make arrangements for recording the Hindi and Marathi speeches by appointing Reporters?

Mr. SPEAKER.—Very few members speak in those languages and it is not possible. Moreover it is very costly.

[Sri N. O. SAMAJI Belgaum II *spoke in Marathi.*]

Mr. SPEAKER.—He wants to know why I have not made last year's arrangement. Last time I had made a special request to the Bombay Government to send a Marathi Reporter. We were giving him only daily allowance and the Bombay Government used to pay his regular salary. Now they have written that it is not possible to send a Marathi Reporter. We have to make arrangements but so far I have not been able to get a suitable person.

Sri J. P. SARWESH.—If the same request is made to Hyderabad Government they will be able to send.

Mr. SPEAKER.—If the Hon'ble Member is able to suggest anybody, I shall consider it.

Now the House will rise for Tea and meet after half an hour.

The House adjourned for Lunch at Three of the Clock and re-assembled at Thirty Minutes past Three of the Clock.

[MR. SPEAKER in the Chair]

[Sri L. B. BIRJE (Khanapur) spoke in Marathi; his speech is printed in the Appendix number to this volume.]

ಶ್ರೀ ಎ. ಆರ್. ಬದರಿ ನಾರಾಯಣ್ (ತೀರ್ಥಹಳ್ಳಿ).—ಮಾನ್ಯ ಸಭಾಪತಿಗಳೆ, ಭೂಸುಧಾರಣೆ ಮತ್ತು ಗೇಣಿ ಕಾನೂನಿನ ವಿಚಾರದಲ್ಲಿ ಭಾರತ ಸರ್ಕಾರದವರೂ ಪ್ಲಾನಿಂಗ್ ಕಮಿಷನವರೂ ನಮ್ಮ ಸರ್ಕಾರದವರೂ ಶ್ರದ್ಧೆವಹಿಸಿ, ಈ ಕೆಲಸವನ್ನು ಜರೂರಾಗಿ ಕೈಗೊಳ್ಳಬೇಕು, ಭೂಸುಧಾರಣೆಯ ವಿಚಾರದಲ್ಲಿ ಜನಾಭಿಪ್ರಾಯ ಬಹಳ ಮುಂದುವರಿದಿದೆ ಎಂಬುದನ್ನು ಮನಗಂಡಿದ್ದಾರೆ. ನಮ್ಮ ಸರ್ಕಾರದವರು ಮೈಸೂರು ರಾಜ್ಯದಲ್ಲಿ ಜತ್ತಿಸಮಿತಿಯನ್ನು ನೇಮಕ ಮಾಡಿದರು. ಜತ್ತಿ ಸಮಿತಿಯ ಕಾರ್ಯಕಲಾಪಗಳು ಬಹಳ ಯಶಸ್ವಿಯಾಗಿ ನಡೆದು ಅವರ ವರದಿ ಈಗ ನಮ್ಮ ಮುಂದೆ ಚರ್ಚೆಯಾಗುತ್ತಿದೆ. ಈ ಜತ್ತಿ ಸಮಿತಿಯ ವರದಿಯನ್ನು ನಾನು ಸ್ವಾಗತಮಾಡುತ್ತಾ

(ಶ್ರೀ ಎ. ಆರ್. ಬದರಿ ನಾರಾಯಣ್)

ಇದರಲ್ಲಿರತಕ್ಕ ಅನೇಕ ನ್ಯೂನತೆಗಳನ್ನು ಈ ಸಭೆಯ ಗಮನಕ್ಕೆ ತರಲು ಅಪೇಕ್ಷೆಪಡುತ್ತೇನೆ. ಭೂಸುಧಾರಣೆಯ ವಿಷಯದಲ್ಲಿ ಅನೇಕ ವಿಧವಾದ ಹಾಗೂ ಉಗ್ರವಾದ ಟೀಕೆ ಟಿಪ್ಪಣಿಗಳು ದೇಶದಲ್ಲಿ ಬಂದಿವೆ. ಯಾವ ಒಂದು ಆಸ್ತಿಯನ್ನು ಸ್ಥಿರ ಆಸ್ತಿ ಎಂದು ಜನರು ತಿಳಿದುಕೊಂಡಿದ್ದರೋ ಅದು ಈದಿನ ಅಸ್ಥಿರವಾಗಿದೆ. ಹಳ್ಳಿಗಳಲ್ಲಿ ಜಮೀನಿನಿಂದಲೇ ಜೀವನವನ್ನು ನಡೆಸಿಕೊಂಡು ಹೋಗುತ್ತಿರುವ ಜನರ ಸಂಬಂಧವಾಗಿಯೇ ಇದು ಬಂದಿದೆ. ಸಮಾಜವಾದ ನಮಗೆ ಬೇಕು; ಸಮಾಜ ಒಳ್ಳೆಯ ರೀತಿಯಲ್ಲಿ ರಚನೆಯಾಗಬೇಕೆಂಬ ಕಾಲದಲ್ಲಿ ಇಂಥಾ ಒಂದು ಕಾನೂನನ್ನು ಕೇವಲ ಹಳ್ಳಿಗಳಲ್ಲಿ ಜಮೀನಿನಿಂದ ಜೀವನ ಮಾಡುತ್ತಿರುವ ಜನರ ವಿಚಾರದಲ್ಲಿ ಮಾತ್ರ ತರುವುದು ಉಚಿತವೆ, ಪಟ್ಟಣಗಳಲ್ಲಿ ವಾಸಮಾಡುತ್ತಾ ಇರುವ ದೊಡ್ಡ ದೊಡ್ಡ ವರ್ತಕರು, ದೊಡ್ಡ ದೊಡ್ಡ ಮನೆಗಳು ಮತ್ತು ಕಾರ್ಖಾನೆಗಳನ್ನಿಟ್ಟುಕೊಂಡಿರುವವರಿಗೆ ಅನ್ವಯಿಸದೆ ಕೇವಲ ಹಳ್ಳಿಗಳಲ್ಲಿರುವವರಿಗೆ ಮಾತ್ರ ಏಕೆ ಇಂಥಾ ಕಾನೂನನ್ನು ತಂದರು ಎಂಬುದನ್ನು ತಿಳಿಯುವುದಕ್ಕೆ ಮಾರ್ಗವಿಲ್ಲವಾಗಿದೆ. ಈಗ ಸಾಮಾನ್ಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿರುವವರು ಎಷ್ಟೇ ದೊಡ್ಡ ಜಮೀನ್ದಾರರಾದರೂ ಒಂದು ಕಾರನ್ನಿಟ್ಟುಕೊಳ್ಳುವುದಕ್ಕೇ ಆಗಲಿ ದೊಡ್ಡ ಬಂಗಲೆಯನ್ನು ಕಟ್ಟಿಕೊಳ್ಳುವುದಕ್ಕೇ ಆಗಲಿ ಅಥವ ಇತರ ಸುಖಸಂಪತ್ತುಗಳನ್ನನುಭವಿಸುವುದಕ್ಕೇ ಆಗಲಿ ಸೌಕರ್ಯವಿಲ್ಲವೆಂಬುದು ಎಲ್ಲರಿಗೂ ಗೊತ್ತಿದೆ. ಆದರೆ ದೊಡ್ಡ ಪಟ್ಟಣಗಳಲ್ಲಿರುವವರು ಬಹಳ ಸುಖವಾಗಿ ಸಂತೋಷದಿಂದ ಇರತಕ್ಕದ್ದನ್ನು ನೋಡುತ್ತಿದ್ದೇವೆ. ಹಳ್ಳಿಗಳಲ್ಲಿ ಕೆಲವು ಜನ ಮಾತ್ರ ಚೆನ್ನಾಗಿದ್ದರೂ ಅದು ಹಳ್ಳಿಗಳ ಸುಖಕ್ಕೆ ಮತ್ತು ಹಳ್ಳಿಗಳ ಅಭಿವೃದ್ಧಿಗೆ ಅನುಕೂಲವಾಗುತ್ತದೆ ಎನ್ನುವುದನ್ನು ನಾವು ತಿಳಿಯಬೇಕು. ಹೀಗಿರುವಾಗ ಈಗ ತರಬೇಕೆಂದಿರುವ ಕಾನೂನನ್ನು ಕೇವಲ ಹಳ್ಳಿಗಳಿಗೆ ಮಾತ್ರ ಅನ್ವಯಿಸಿ ಜಾರಿಗೆ ತರಲು ಪ್ರಯತ್ನಪಡುವುದರಿಂದ ಹಳ್ಳಿಗಳಲ್ಲಿ ಈಗ ಅಲ್ಪ ಸ್ವಲ್ಪ ಅನುಕೂಲವಾಗಿರುವವರೂ ಕೂಡ ದುಸ್ಥಿತಿಗೆ ಬಂದು ಪಟ್ಟಣಗಳಲ್ಲಿರುವವರ ಆಶ್ರಯಕ್ಕೊಳಗಾಗುವ ಪರಿಸ್ಥಿತಿ ಬರುತ್ತದೆ ಎಂದು ಶಂಕೆಪಡಬೇಕಾಗಿದೆ. ಆದುದರಿಂದ ಸಮಾಜವಾದ ಬೇಕು, ಎಲ್ಲರೂ ಒಂದೇ ಮಟ್ಟದಲ್ಲಿರಬೇಕು ಎಂಬ ಅಭಿಪ್ರಾಯವಿರುವುದಾದರೆ, ಈ ರೀತಿ ಹಳ್ಳಿಗಳಲ್ಲಿರುವವರಿಗೆ ಒಂದು ರೀತಿಯ ಕಾರ್ಯಕ್ರಮ, ಪಟ್ಟಣಗಳಲ್ಲಿರುವವರಿಗೇ ಒಂದು ರೀತಿಯ ಕಾರ್ಯಕ್ರಮ ತೆಗೆದುಕೊಂಡು ಕಾನೂನು ಮಾಡಿದರೆ, ಇದರ ಪರಿಣಾಮವಾಗಿ ಹಳ್ಳಿಗಳಲ್ಲಿರುವವರೆಲ್ಲರೂ ಪಟ್ಟಣಗಳಲ್ಲಿರುವವರ ಆಶ್ರಯಕ್ಕೊಳಗಾಗುತ್ತಾರೆಂಬುದನ್ನು ಮರೆಯಬಾರದು. ಈ ದೃಷ್ಟಿಯಿಂದ ಈ ರೀತಿಯ ಒಂದು discrimination ಅಥವ ಭೇದಮಾಡಬಾರದು ಎಂದು ತಿಳಿಸುತ್ತೇನೆ. ಈ ಸಮಾಜವಾದ ಎಲ್ಲಕ್ಷೇತ್ರಗಳಲ್ಲಿಯೂ ಬರುವ ಹಾಗೆ ಮಾಡಬೇಕೆಂದು ಈ ಸಂದರ್ಭದಲ್ಲಿ ಸೂಚಿಸುತ್ತೇನೆ. ಈ ಜತ್ತಿಸಮಿತಿ ಸೂಚಿಸಿರುವ ಪ್ರಕಾರ ಭೂಸುಧಾರಣೆಯನ್ನು ಮಾಡಲು, ಹಳ್ಳಿಯಲ್ಲಿರುವವರಿಗೆಲ್ಲರಿಗೂ ಸಾಧ್ಯವಾದಷ್ಟು ಮಟ್ಟಿಗೆ ಜಮೀನು ದೊರೆಯಬೇಕು, ವ್ಯವಸಾಯ ಅಭಿವೃದ್ಧಿಯಾಗಬೇಕು ಎಂಬ ಉದ್ದೇಶದಿಂದ ಭೂಸುಧಾರಣಾ ಕಾನೂನನ್ನು ಜಾರಿಗೆ ತರಬೇಕೆಂದು ಯೋಚನೆ ಮಾಡಿದ್ದಾರೆ. ಆದರೆ ಇದರಿಂದ ಪರಿಣಾಮವೇನಾಗುತ್ತದೆ ಎನ್ನುವುದನ್ನು ವಿಮರ್ಶೆ ಮಾಡಬೇಕು. ಹಳ್ಳಿಯಲ್ಲಿರುವವರಿಗೆ ಆಸಕ್ತಿ ಮತ್ತು ಶ್ರದ್ಧೆಯಿಂದ ಚೆನ್ನಾಗಿ ದುಡಿಮೆಮಾಡಿ ವ್ಯವಸಾಯ ಮಾಡುವವರಿಗೆ ಯಾವಾಗ ಸ್ಥಿರಆಸ್ತಿಯಾದ ಜಮೀನಿನ ಮೇಲಿರಲು ಅವಕಾಶವಿರುವುದಿಲ್ಲವೋ ಆಗ ಅವರು ಪಟ್ಟಣಗಳನ್ನು ಸೇರುವುದಕ್ಕವಕಾಶವಾಗುತ್ತದೆ ಇದನ್ನು ಮರೆಯಬಾರದು. ವೈಯಕ್ತಿಕವಾಗಿ ನನಗೆ ಗೊತ್ತಿರುವ ಹಾಗೆ, ಬುದ್ಧಿವಂತರೂ, ಸಮರ್ಥರೂ ದಕ್ಷರೂ ಹಾಗೂ ಆಸಕ್ತಿಯುಳ್ಳವರೂ ಹಳ್ಳಿಗಳನ್ನು ಬಿಟ್ಟು ಪಟ್ಟಣಗಳಿಗೆ ವಲಸೆ ಬರುತ್ತಾ ಇರುವುದನ್ನು ನೋಡುತ್ತಿದ್ದೇನೆ. ಸುಖವಾಗಿ ಜೀವನಮಾಡುವುದಕ್ಕೆ ಯೋಗ್ಯವಾದಷ್ಟು ಪರಿಮಿತಿಯನ್ನು ಇದರಲ್ಲಿ ಗೊತ್ತುಮಾಡದೇ ಹೋದರೆ, ಪ್ರಗತಿಮನೋಭಾವ ಉಳ್ಳವರಿಗೆ ನಿರುತ್ಸಾಹವಾಗಿ ಅವರು ಅಲ್ಲಿರಲು ಅವಕಾಶವಿಲ್ಲದ ಹಾಗಾಗುತ್ತದೆ. ಈ ದೃಷ್ಟಿಯಿಂದ ಈ ಕಡೆ ಗಮನಕೊಡಬೇಕೆಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಈ ವಿಚಾರದಲ್ಲಿ ಈಗಾಗಲೇ ಅನೇಕ ಅಭಿಪ್ರಾಯಗಳು ಹೊರಪಟ್ಟಿವೆ.

ಹಿಡುವಳಿಗಳ ವಿಚಾರವನ್ನು ವಿಮರ್ಶಿಸುವುದಾದರೆ, ಐದೆಕರೆವರೆಗಿರತಕ್ಕದ್ದು ಸುಮಾರು ಶೇಕಡ 10ರಷ್ಟು; ಐದರಿಂದ 10 ಎಕರೆವರೆಗಿರುವುದು 14; 10ರಿಂದ 15 ಎಕರೆವರೆಗಿರುವುದು ಸುಮಾರು 12; 15ರಿಂದ 30 ಎಕರೆವರೆಗಿರುವುದು ಸುಮಾರು 30ರಷ್ಟು. ಒಟ್ಟಿನಲ್ಲಿ 30 ಎಕರೆವರೆಗಿರುವುದು ಸುಮಾರು ಶೇಕಡ 60ರಷ್ಟಾಗುತ್ತದೆ. ಅನೇಕ ಜನರು ತಮ್ಮ ಜಮೀನನ್ನು ಬೇರೆಯವರಿಗೆ ಗೇಣಿಗೆ ಕೊಟ್ಟು ಅದರಿಂದ ಬರುವ ವರಮಾನ ಜೀವನಕ್ಕೆ ಸಾಲದೆ ಇತರ ವ್ಯವಹಾರಗಳಿಂದ ಸರಿತೂಗಿಸಿಕೊಂಡು ತಮ್ಮ ಸಂಸಾರಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

4 P.M.

ಜಮೀನುದಾರ ಮತ್ತು ಗೇಣೀದಾರ ಈ ಸಂಬಂಧ ಹೊರಟುಹೋಗಬೇಕು. 30 ಎಕರೆಗಿಂತ ಕಡಿಮೆಯಾಗಿರುವ ಸಣ್ಣ ಹಿಡುವಳಿದಾರರು ಜಾಸ್ತಿಯಾಗಿದ್ದಾರೆ ಅವರಿಗೆ ಎಷ್ಟು ತೊಂದರೆಯಾಗುತ್ತದೆ ಎಂಬುದನ್ನು ಯೋಚನೆಮಾಡಬೇಕು. ಇವತ್ತಿನ ದಿವಸ ಅಂಥವರಲ್ಲಿ ಕೆಲವರು ಸರಕಾರಿ ನೌಕರಿಯಲ್ಲಿ ಇರಬಹುದು, ವ್ಯಾಪಾರದಲ್ಲಿ ಇರಬಹುದು. ಅಂಥವರಿಗೆ ಜಮೀನು ಇದ್ದಲ್ಲಿ ಹೋಗಿ ಇರಬೇಕೆಂದು ಹೇಳಿದರೆ ಕಾನೂನ ಪ್ರಕಾರ ಅದಕ್ಕೆ ಅವಕಾಶವಿಲ್ಲ. ಈ ಕಾನೂನ ಪ್ರಕಾರ ಅಂಥವರ ಜಮೀನು ಕಿತ್ತುಕೊಂಡುಬಿಟ್ಟರೆ ಸಣ್ಣ ವ್ಯವಸಾಯಮಾಡಿಕೊಂಡು ಇರತಕ್ಕಂಥ ಅಶಕ್ತರಿಗೆ ಬಹಳ ತೊಂದರೆಯುಂಟಾಗುತ್ತದೆ. ತನ್ನ ಜಮೀನನ್ನು ಸ್ವತಃ ಸಾಗುವಳಿ ಮಾಡುವದಕ್ಕೆ ಪರಿಮಿತಿಗಿಂತ ಹೆಚ್ಚಾಗಿ ಇರುವದನ್ನು ತೆಗೆದುಕೊಳ್ಳಬಹುದು ಎಂದು ಇದೆ. ಈ ರೀತಿ ಜಮೀನನ್ನು ಬಿಡಿಸಿಕೊಳ್ಳುವುದಾದರೆ ಗೇಣಿದಾರನ ಪರಿಸ್ಥಿತಿ ಏನಾಗುತ್ತದೆ ಎಂಬುದನ್ನು ಆಲೋಚನೆ ಮಾಡಬೇಕು. ಈ ದೃಷ್ಟಿಯಿಂದ ಗೇಣಿದಾರರೊಡನೆ ಸಮಾಲೋಚನೆ ಮಾಡಬೇಕು. ನೀವು ಮಾಡತಕ್ಕಂಥ ಜಮೀನನ್ನು ಬಿಡಿಸಿಕೊಂಡರೆ ನಿಮ್ಮ ಪರಿಸ್ಥಿತಿ ಏನು ಆಗುತ್ತದೆ ಎಂದು ಕೇಳಬೇಕು. ನಮ್ಮನ್ನು ಬಿಡಿಸಬಾರದು, ಸಾಗುವಳಿ ಮಾಡತಕ್ಕ ನಮ್ಮ ಹಕ್ಕನ್ನು ಕಿತ್ತುಕೊಳ್ಳಬಾರದು ಎಂದು ಅವರು ಹೇಳುತ್ತಾರೆ. ತನ್ನ ಜೀವನ ನಡೆಸಿಕೊಂಡು ಹೋಗುವದಕ್ಕೆ ಅವಕಾಶ ಇರುವಂತೆ ಆಗಬೇಕು. ಮೂಲಗೇಣಿಯ ಪದ್ಧತಿಯ ಪ್ರಕಾರ ಮೂಲಗೇಣಿ ಹಕ್ಕನ್ನು ಕೊಟ್ಟರೆ, ವ್ಯವಸಾಯಗಾರನಿಗೆ ಜಮೀನ ಮೇಲೆ ಒಂದು ಆಸಕ್ತಿ ಉಂಟಾಗುತ್ತದೆ. ಅದರಿಂದ ಉತ್ಪತ್ತಿಯೂ ಚೆನ್ನಾಗಿ ಆಗುತ್ತದೆ. ಆದುದರಿಂದ

ಗೇಣಿದಾರನಿಗೆ ಮೂಲಗೇಣಿ ಹಕ್ಕನ್ನು ಉಂಟುಮಾಡಬೇಕೆಂದು ನನ್ನ ಅಭಿಪ್ರಾಯ. ಮೂಲ ಗೇಣಿ ಹಕ್ಕನ್ನು ಉಂಟುಮಾಡಿದರೆ ಅನೇಕ ಸಮಸ್ಯೆಗಳು ಸುಲಭವಾಗಿ ಪರಿಹಾರವಾಗಬಹುದು ಎಂದು ನನಗೆ ಅನಿಸುತ್ತದೆ. ಶೇಕಡಾ 60ರಷ್ಟು ಸಣ್ಣ ಹಿಡುವಳಿದಾರರು ಇದ್ದಾರೆ. ಅಂಥವರಿಂದ ಜಮೀನು ಬಿಡಿಸಿಕೊಂಡರೆ ಈ ಭೂಸುಧಾರಣೆಗೆ ಅವರು ಒಪ್ಪಲಾರರು ಇನ್ನು ಹೆಚ್ಚಿನ ಕಠಿಣ ಪರಿಸ್ಥಿತಿಯುಂಟಾಗುತ್ತದೆ.

ಇನ್ನು ಮಲೆನಾಡಿನ ಜಮೀನ ವಿಚಾರವಾಗಿ ನಾನು ಹೇಳುತ್ತೇನೆ. ಮಲೆನಾಡಿನಲ್ಲಿ ಹೆಚ್ಚು ಮಳೆಯು ಆಗುತ್ತಿದ್ದರೂ ಕೂಡ ಹೆಚ್ಚು ಪ್ರಮಾಣದಲ್ಲಿ ಜಮೀನು ವ್ಯವಸಾಯವಾಗುತ್ತಿಲ್ಲ. ಮೈದಾನ ಜಮೀನಿಗೂ ಮಲೆನಾಡಿನಲ್ಲಿಯ ಜಮೀನಿಗೂ ವ್ಯತ್ಯಾಸವಿದೆ. ಎಲ್ಲಾ ಜಮೀನುಗಳಿಗೂ ಹೆಚ್ಚು ಅವಕಾಶ ಕೊಡಬೇಕು ಎನ್ನತಕ್ಕಂಥ ಈ ಸಂದರ್ಭದಲ್ಲಿ ಮಲೆನಾಡಿನ ವಿದ್ಯಮಾನಗಳನ್ನು ಈಗ ನಾನು ತಿಳಿಸುತ್ತೇನೆ. ಕಾಫಿ ಪ್ಲಾಂಟೇಷನ್, ಟೀ ಪ್ಲ್ಯಾಂಟೇಷನ್‌ಗಳಿಗೆ ಈ ಸೀಲಿಂಗ ಪರಿಮಿತಿಯಿಂದ ವಿನಾಯಿತಿ ಮಾಡಿದ್ದಾರೆ. ಕಾರಣವೇನೆಂದರೆ ಈ ಪ್ಲ್ಯಾಂಟೇಷನ್ನುಗಳಿಗೆ ಸ್ಪೆಷಲ್ಲಾಗಿ ಬೇಕಾದಷ್ಟು ದುಡ್ಡು ಖರ್ಚುಮಾಡುತ್ತಾರೆ. ಇದನ್ನು special ಆಗಿ treat ಮಾಡಬೇಕು ಎಂದು ಹೇಳಿದ್ದಾರೆ. ಈ ಸಂದರ್ಭದಲ್ಲಿ ನಾನು ಹೇಳುವದೇನೆಂದರೆ ಅಡಿಕೆ ತೋಟ ಸಹ ಇದೇ ಸಾಲಿಗೆ ಬರುತ್ತದೆ. ತೆಂಗಿನ ತೋಟದಲ್ಲಿ ಸಹ ಇಂದು ಹಾಕಿದ ಸಸಿ ಫಲ ಕೊಡಲು 15 ವರ್ಷಗಳು ಬೇಕಾಗುತ್ತದೆ. ಅಡಿಕೆ ತೆಂಗಿನ ತೋಟ ಸಹ ಕಾಫಿ, ಟೀ ಪ್ಲ್ಯಾಂಟೇಷನ್ ವರ್ಗದಲ್ಲಿ ಬರುತ್ತವೆ. ಸಾಮಾನ್ಯವಾಗಿ ಅಡಿಕೆ ತೋಟ ಮಾಡತಕ್ಕಂಥವರು ಶೇಕಡಾ 95 ಭಾಗ ಮಾಲೀಕರೇ ಮಾಡುತ್ತಾರೆ. ಕೇವಲ ಶೇಕಡ ಐದು ಭಾಗ ಮಾತ್ರ ಗೇಣಿದಾರರಿಗೆ ಕೊಟ್ಟಿದ್ದಾರೆ.

ಈ ದೃಷ್ಟಿಯಿಂದ ವಿಚಾರ ಮಾಡಿದರೆ ಅಡಿಕೆಯ ಬಾಗಾಯತ ತೆಂಗಿನ ತೋಟಗಳನ್ನು ಬಹಳ ಕಷ್ಟಪಟ್ಟು ಮಕ್ಕಳನ್ನು ಜೋಪಾನ ಮಾಡಿದಂತೆ ಈ ತೋಟಗಳನ್ನು ಸಂರಕ್ಷಿಸುತ್ತಾರೆ. ವರ್ಷೇ ವರ್ಷ ತೋಟಗಳ ಅಭಿವೃದ್ಧಿಗೆ ಬಹಳ ದುಡ್ಡು ಖರ್ಚುಮಾಡುತ್ತಾರೆ. ಬಹಳ ಚೆನ್ನಾಗಿ ಫಸಲು ಬರತಕ್ಕ ಕಾಲದಲ್ಲಿ ಕಾಫಿ ತೋಟಗಳಿಗೆ ವಿನಾಯಿತಿ ಕೊಟ್ಟಹಾಗೆ ಅಡಿಕೆ ತೆಂಗಿನ ತೋಟಗಳಿಗೂ ಸಹ ಅದೇರೀತಿಯಾಗಿ ವಿನಾಯಿತಿ ಮಾಡಬೇಕು ಎಂದು ನಾನು ಹೇಳುತ್ತೇನೆ.

ಇನ್ನು ಈ ಕಾಂಪೆನ್‌ಸೇಷನ್ ಅಂದರೆ ಪರಿಹಾರದ ವಿಚಾರದಲ್ಲಿ ಶ್ರೀಮತಿ ನಾಗರತ್ನಮ್ಮನವರು ಹೇಳಿದ ಹಾಗೆ ಶೇರುಗಳಿಗೆ ಯಾವ ರೀತಿಯಾಗಿ ಸದ್ಯದ ಮಾರ್ಕೆಟ್ ಬೆಲೆಯ ಪ್ರಕಾರ ಪರಿಹಾರ ಕೊಡಲಾಗಿದೆಯೋ ಅದೇ ರೀತಿಯಾಗಿ ಇಂದಿನ ಮಾರ್ಕೆಟ್ ಬೆಲೆಗೆ ಅನುಗುಣವಾಗಿ, ಪರಿಸ್ಥಿತಿಗೆ ಅನುಸಾರವಾಗಿ, ಧಾರಾಳವಾಗಿ ಪರಿಹಾರಕೊಡಬಹುದು. ಅಪ್ಪ ಅಜ್ಜನ ಕಾಲದಿಂದ ಬಂದಂಥ ಈ ಆಸ್ತಿಯ ಮೇಲಿನ ಹಕ್ಕನ್ನು ಬಿಟ್ಟುಕೊಡುವ ಸಂದರ್ಭದಲ್ಲಿ ಧಾರಾಳವಾಗಿ ಸದ್ಯಕ್ಕಿರುವ ಮಾರ್ಕೆಟ್ ಬೆಲೆಗೆ ಅನುಗುಣವಾಗಿ ಪರಿಹಾರ ಕೊಡುವಂತಾಗಬೇಕು. ಬಹುಶಃ ಜಮೀನಿನಿಂದ ಹೊರಗೆ ಹಾಕತಕ್ಕಂಥ ಈ ಮಾಲೀಕರುಗಳಿಗೆ ಬೇರೆ ಜೀವನೋಪಾಯವನ್ನು ಹುಡುಕಿಕೊಂಡು ಹೋಗಿ ಅದರ ಮೇಲೆ ಅವಲಂಬಿಸಿಕೊಂಡಿರಲು ಈ ಪರಿಹಾರದಿಂದ ಅನುಕೂಲವಾಗುತ್ತದೆ. ಈ ರೀತಿ ಒಂದು ಅವಕಾಶ ಇರುವ ಹಾಗೆ ಮಾಡಬೇಕು. ಇಷ್ಟೇ ಅಲ್ಲದೆ ಕೊಡತಕ್ಕಂಥ ಈ ಪರಿಹಾರವನ್ನು ಮಾರ್ಕೆಟ್ ಬೆಲೆಗೆ ಅನುಸಾರವಾಗಿ ನಗದು ಹಣದ ರೂಪದಲ್ಲಿ ಅದಷ್ಟು ಬೇಗ ಕೊಡಬೇಕು. ಈ ರೀತಿಯಾಗಿ ನಗದು ಹಣ ಕೊಟ್ಟು ಮಾಲೀಕರುಗಳು ಸ್ಥಳಬಿಟ್ಟು ಬೇರೆ ಕಡೆಗೆ ಹೋಗಿ ಸರಿಯಾದ ರೀತಿ ನೆಲೆಸುವಂತೆ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ತಿಳಿಸುತ್ತೇನೆ. ಇನ್ನೊಂದು ವಿಷಯ ಜಮೀನುದಾರರೂ ಸಹ ಬಡವರಾಗಿದ್ದಾರೆ. ಸುಮಾರು 20-25-30 ಎಕರೆ ಭೂಮಿಯನ್ನು ಇಟ್ಟುಕೊಂಡವರಾಗಿದ್ದಾರೆ. ಗೇಣೀದಾರರು ಅದ ಮಾತ್ರಕ್ಕೆ ಹೆಚ್ಚು ಜಮೀನು ಇಟ್ಟುಕೊಳ್ಳಬಹುದು, ಆದರೆ ಜಮೀನುದಾರರು ಮಾತ್ರ ಹಾಗೆ ಹೆಚ್ಚು ಜಮೀನು ಇಟ್ಟುಕೊಳ್ಳಬಾರದು ಎಂದು ಹೇಳುವುದು ಸರಿಯಲ್ಲ. ಸಮತಾವಾದ ಗೇಣೀದಾರರಿಗೂ ಅನ್ವಯಿಸುತ್ತದೆ. ಜಮೀನುದಾರರಿಗೂ ಅನ್ವಯಿಸುತ್ತದೆ. ಎಲ್ಲರಿಗೂ ಸಮನಾಗಿ ಅನ್ವಯಿಸುತ್ತದೆ.

ರೈತನಿಗೆ ಹೆಚ್ಚಿನ ಒಂದು ಸೌಕರ್ಯವನ್ನು ಕಲ್ಪಿಸಿಕೊಡಬೇಕೆಂದು ಹೇಳಿದ್ದಾರೆ. ಅವನ ಜವಾಬ್ದಾರಿ ಏನೆಂದು ಹೇಳಿಲ್ಲ. ಒಂದು ವೇಳೆ ಒಳ್ಳೆಯ ರೈತನಾಗಿದ್ದರೆ, ಚೆಂದಾಗಿ ಕೃಷಿಮಾಡುತ್ತಾನೆ. ಸರಿಯಾಗಿ ಕೆಲಸಮಾಡದೆ ಇರತಕ್ಕಂಥ ಗೇಣಿದಾರನಿಗೆ ಏನು ನಿರ್ಬಂಧಗಳನ್ನು ಸಮಿತಿಯವರು ಹಾಕಿದ್ದಾರೆಂಬುದನ್ನು ಸ್ವಲ್ಪ ಯೋಚನೆಮಾಡಿ ನೋಡೋಣ. ಈಗ ಶಿಫಾರಸು ಮಾಡಿರುವ ಸುಧಾರಣೆ ಏಕಪಕ್ಷವಾದ ಕಾನೂನು ಆಗುವಂಥಾದ್ದು. ಆದ್ದರಿಂದ ಈ ಶಾಸನದಲ್ಲಿ ಗೇಣಿದಾರನ ಜವಾಬ್ದಾರಿಯನ್ನೂ ನಿಗದಿಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ.

ಅಲ್ಲದೆ ಒಂದು ಜಮೀನಿನ ಸೀಲಿಂಗ್ ನಿಗದಿ ಮಾಡಬೇಕಾಗಿದ್ದರೆ, ಅದರ ವರಮಾನದ ಆಧಾರದ ಮೇಲೆ ನಿಗದಿ ಮಾಡಬಹುದೆಂದು ಸಲಹೆ ಮಾಡಿದೆ, ಬಹುಶಃ ಈ ದೃಷ್ಟಿ ಸರಿಯಾಗಿಲ್ಲ. ಒಂದು ಎಕರೆಯಲ್ಲಿ ಒಬ್ಬ ಎಷ್ಟು ದವಸವನ್ನು ಬೆಳೆಯಬಹುದೋ ಅಷ್ಟನ್ನು ಇನ್ನೊಬ್ಬ 15 ಎಕರೆಯಲ್ಲೂ ಬೆಳೆಯದೆ ಇರಬಹುದು. ಒಂದು ವರಮಾನದ ಆಧಾರದ ಮೇಲೆ ಹಿಡುವಳಿಯನ್ನು ನಿಗದಿ ಮಾಡಿದರೆ, ಬರಬರುತ್ತಾ ಒಂದು ಜಮೀನು ಅಭಿವೃದ್ಧಿಯಾಗಬಹುದು; ಆಗದಿರಬಹುದು. ಈ ದೃಷ್ಟಿಯಿಂದ ಹಿಡುವಳಿ ಎಂದರೆ ಎಷ್ಟು ಎಕರೆಗಳ ವಿಸ್ತೀರ್ಣವುಳ್ಳದ್ದು ಎಂದು ನಿಗದಿ ಮಾಡುವುದು ಸೂಕ್ತ.

ಒಂದು ಸಂಸಾರಕ್ಕೆ ಸುಮಾರು 30 ಎಕರೆ ಜಮೀನು ಕೊಟ್ಟರೆ ಅಷ್ಟರಿಂದ ಆ ಸಂಸಾರ ಜೀವನ ಮಾಡುವುದಕ್ಕೆ ಸರಿಹೋಗುತ್ತದೆಂದು ನಾನು ತಿಳಿದುಕೊಂಡಿದ್ದೇವೆ. ಒಂದು ಜಾಯಿಂಟ್ ಫ್ಯಾಮಿಲಿಗೆ ಪರಮಾವಧಿಯನ್ನು ಡಬಲ್‌ಮಾಡಬಹುದು ಎಂದು ಸಮಿತಿಯವರು ಹೇಳಿದ್ದಾರೆ. ಹಾಗೆ ಆಗಬಾರದು. ಒಂದು ಜಾಯಿಂಟ್ ಫ್ಯಾಮಿಲಿಯಲ್ಲಿ 5-10-20 ಸಂಸಾರಗಳವರೆಗೆ ಇರಬಹುದು. ಎಷ್ಟು ಸಂಸಾರಗಳಿರುತ್ತವೆಯೋ ಅಷ್ಟಕ್ಕೆ proportionate ಆಗಿ ಪರಮಾವಧಿಯನ್ನು ಹೆಚ್ಚಿಸಬೇಕು.

ಅದೂ ಅಲ್ಲದೇನೆ ಕೆಲವು ಸಂದರ್ಭಗಳಲ್ಲಿ ಗೇಣಿದಾರರು ತಾವೇ ಸ್ವಂತ ಸಾಗುವಳಿ ಮಾಡುವುದಿಲ್ಲ. ಅವರು ಯಾರನ್ನೋ ಇಟ್ಟುಕೊಂಡು ಜಮೀನಿನ ಸಾಗುವಳಿಮಾಡಿಸುತ್ತಾ ಇರುತ್ತಾರೆ. ಆದ್ದರಿಂದ ಈ ಮಧ್ಯವರ್ತಿ ಜಮೀನ್‌ದಾರರನ್ನೂ (ಏಜೆಂಟರು) ಗೇಣಿದಾರರಾಗಿ ಮಾಡಕೂಡದು. ಈ ವಿಚಾರವನ್ನೂ ಯೋಚನೆ ಮಾಡಬೇಕು.

(ಶ್ರೀ ಎ. ಆರ್. ಬದರಿ ನಾರಾಯಣ್)

ಕಾಲಧರ್ಮಕ್ಕನುಸಾರವಾಗಿ ಅನುಸರಿಸಿಕೊಂಡು ಎಲ್ಲರೂ ಹೊಂದಿಕೊಂಡು ಹೋಗಬೇಕು, ಎಲ್ಲರಿಗೂ ಕೂಡ ದೊಡ್ಡ ಪ್ರವಾಹ ಬಂದಿದೆ. ಇಂದಿನ ಸಂದರ್ಭದಲ್ಲಿ ಜಮೀನುದಾರರಾಗಿದ್ದು ಹೆಚ್ಚಿನ ಜಮೀನನ್ನು ಅವಲಂಬಿಸಿಕೊಂಡು ಇರಬಹುದು. ಈ ಹೊಸ ವಾತಾವರಣವನ್ನು ಕಲ್ಪಿಸುವಾಗ ಅವರು ಕಾಲ ಧರ್ಮಕ್ಕೆ ಹೊಂದಿಕೊಂಡು ಹೋಗುವುದು ಸೂಕ್ತ. ಆದರೆ ಹಾಗೆ ಹೊಂದಿಕೊಂಡುಹೋಗುವುದರಲ್ಲಿ, ಜಮೀನು ಬಿಟ್ಟುಹೋಗತಕ್ಕವರಿಗೆ ಹೆಚ್ಚು ತೊಂದರೆಯಾಗದಂಥ ರೀತಿಯಲ್ಲಿ ಕಾನೂನು ರಚನೆಮಾಡಿದರೆ ಒಳ್ಳೆಯದು. ಒಬ್ಬರಿಗೆ ಅನುಕೂಲಮಾಡುವುದಕ್ಕೆ ಹೋಗಿ ಇನ್ನೊಬ್ಬರಿಗೆ ಅನಾನುಕೂಲಮಾಡುವುದು ಭಾರತ ಸರ್ಕಾರದ ಧ್ಯೇಯವಾಗಿಲ್ಲ. ಈ ದೃಷ್ಟಿಯಿಂದ ಒಂದು ಮಟ್ಟದಲ್ಲಿ ಒಂದು ಸ್ಥಾನಮಾನದಲ್ಲಿ, ಒಂದು ರೀತಿಯಲ್ಲಿ, ಒಂದು ಜೀವನಮಟ್ಟದಲ್ಲಿ ಧಾರಾಳ ಮನೋಭಾವನೆಯಿಂದ ಈ ಭೂಶಾಸನವನ್ನು ಕಲ್ಪಿಸಬೇಕು.

ಈ ಜತ್ತಿ ಸಮಿತಿಯ ವರದಿಯಲ್ಲಿ ಕೆಲವು ಮಾರ್ಪಾಟುಗಳನ್ನು ಮಾಡಿದರೆ ಒಳ್ಳೆಯದಾಗುತ್ತದೆ, ಸಾಧುವಾಗಿರುತ್ತದೆ ಎಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಎ. ಎಸ್. ಪಾಟೀಲ್ (ನರಗುಂದ್).—ಸ್ವಾಮಿ, ಈ ಜತ್ತಿ ಸಮಿತಿಯವರ ವರದಿಯಲ್ಲಿ ಅಡಕವಾಗಿರುವ ಸಲಹೆಗಳನ್ನು ಸ್ವಾಗತಿಸಿ, ಇದರಲ್ಲಿರುವ ಕೆಲವು ವಿಚಾರಗಳನ್ನು ಈ ಸಭೆಯ ಮುಂದಿಡಲು ಇಚ್ಛಿಸುತ್ತೇನೆ.

ಈಗ ಈ ಭೂಸುಧಾರಣೆಗಳು ನಮ್ಮ ಭಾಗದಲ್ಲಿ, ಎಂದರೆ ಧಾರವಾಡ, ಬೆಳಗಾಂ, ಬಿಜಾಪುರ ಮತ್ತು ಕಾರವಾರ ಜಿಲ್ಲೆಗಳಲ್ಲಿ, 1939ನೆಯ ಇಸವಿಯಿಂದ ಎಂದರೆ ಈಗಾಗಲೇ 18-19 ವರ್ಷಗಳಿಂದ ಜಾರಿಯಲ್ಲಿವೆ. ಅಲ್ಲಿ ಒಳ್ಳೆಯ ಜಮೀನು ರೈತನಿಗೆ ಸಾಗುವಳಿಗೋಸ್ಕರ ಬಂದುಹೋಗಿ, ಎಷ್ಟೋ ಜಮೀನುದಾರರಿಗೂ ಗೇಣಿದಾರರಿಗೂ ಸಂಬಂಧವಿರುವುದಿಲ್ಲ. 1939ನೆ ಇಸವಿಯಲ್ಲಿ ನಮ್ಮ ಭಾಗದಲ್ಲಿ ಟೆನೆನ್ಸಿ ಆಕ್ಟ್ ಬಂದಿತು. ಅಂದಿನಿಂದಾಗಾಯಿತು ಒಳ್ಳೆಯ ಜಮೀನು ಮಾಲೀಕರು ತಮ್ಮ ಜಮೀನುಗಳನ್ನು ಮಾರಿಕೊಂಡು, ಎಲ್ಲಾ ಜಮೀನುಗಳನ್ನು ಗೇಣಿದಾರರಿಗೆಕೊಟ್ಟು, ಅವರನ್ನು ಮಾಲಕರನ್ನಾಗಿಮಾಡಿ, ಒಂದು ತರಹದ ಸಂತಸ ನೆರೆಗೊಂಡಿದೆ.

ಈ ಮೈಸೂರು ಭಾಗದಲ್ಲಿ ಏನೋ ಒಂದು ರೀತಿಯಾಗಿ ಭಾವಿಸಿಕೊಂಡಿದ್ದಾರೆ. ಅದು ಮಾತ್ರ ನಮ್ಮ ಭಾಗದಲ್ಲಿಲ್ಲ.

ಎರಡನೆಯದಾಗಿ ಸೀಲಿಂಗ್‌ನ ಬಗ್ಗೆ ಹೇಳಬೇಕಾದರೆ ನಮ್ಮಲ್ಲಿ 48 ಎಕರೆ ಎಂದು ಇದ್ದುದನ್ನು ಜತ್ತಿ ಸಮಿತಿಯವರು ಇಲ್ಲಿನ ಅಂಶಗಳನ್ನೂ ನೋಡಿಕೊಂಡು ಈಗ ಸ್ವಂತಸಾಗುವಳಿ ಮಾಡುತ್ತಿರುವವರಿಗೆ 5,400 ರೂಪಾಯಿ ಪರಮಾವಧಿ ಪರಿಮಿತಿ ಎಂಬುದನ್ನು ನಾವೇನಾದರೂ ಮುಂದೆ ಜಮೀನುಗಳನ್ನು ತೆಗೆದುಕೊಳ್ಳುವಲ್ಲಿ 3,600 ರೂಪಾಯಿಗಳ ಪರಿಮಿತಿಯನ್ನೂ ನಮೂದು ಮಾಡಿದ್ದಾರೆ, ಮುಂಬೈರಾಜ್ಯದಲ್ಲಿ ಸುಧಾರಣೆಗಳ ಬಗ್ಗೆ ಕಾನೂನು ರಚನೆಯಾಗುತ್ತಿತ್ತು. ಆವೇಳೆಯಲ್ಲಿ ನಮ್ಮ ಕರ್ಣಾಟಕಭಾಗದವರಿಂದ ಅಲ್ಲಿಯ ನಿರ್ಧಾರದಲ್ಲಿ ಬರುವ ಭೂಮಿಯ ಸಾಗುವಳಿ ಮಾಡುವ ಸಲುವಾಗಿಸಾಲದು, ಇನ್ನೂ ಹೆಚ್ಚು ಇರ ಬೇಕೆಂಬ ವಾದವಿತ್ತು. ಶ್ರೀ ಮಾರ್ಜತ್ತಿಯವರು ಮುಂಬೈ ಪ್ರಾಂತದಲ್ಲಿ ಕೆಲಸ ಮಾಡಿದವರು, ಉಪಮಂತ್ರಿಗಳಾಗಿದ್ದವರು, ಅನುಭವಿಗಳು, ಮತ್ತು ಅಲ್ಲಿಯ ವಿಷಯಗಳಲ್ಲಿ ಪರಿಜ್ಞಾನವಿದ್ದವರು. ಅವರು ದೇಶದಲ್ಲಿ ಸಂಚಾರಮಾಡಿ ಇತರಭಾಗಗಳಲ್ಲಿಯ ವಿಷಯಗಳನ್ನೂ ತಿಳಿದು ಇಂಥ ಉತ್ತಮವಾದ ವರದಿಯನ್ನು ಸಲ್ಲಿಸಿದ್ದಾರೆ. ಇಷ್ಟಾದರೂ ಸಹಿತ ಈ ವರದಿಯು ಬಹಳ ಅವಸರದಿಂದ ಮಾಡಲ್ಪಟ್ಟಿತು ಎಂದು ಕೆಲವರು ಹೇಳುತ್ತಾರೆ. ಸೀಲಿಂಗ್ ಬಗ್ಗೆ ನಾನಾರೀತಿಯ ಅನೇಕ ಟೀಕೆಗಳನ್ನು ಮಾಡಿದುದನ್ನು ನಾನು ಕೇಳಿದೆನು. ಸೀಲಿಂಗ್ ಇಟ್ಟು, ಜಮೀನನ್ನು ಕಸಿದುಕೊಂಡು ಬಡರೈತರಿಗೆ ಆ ಜಮೀನನ್ನು ಕಂತಿಗೆ ಕೊಡುತ್ತಾರೆ ಎನ್ನುವ ಸಮಾಚಾರ ಇದರಲ್ಲಿದೆ. ಅದು ತಪ್ಪು. ಜಮೀನು ಮಾಲಕರಿಗೆ ಸಾಕಷ್ಟು ಪರಿಹಾರ ಕೊಟ್ಟು ಜಮೀನನ್ನು ಪಡೆಯಬೇಕು. ಇದರೊಳಗೆ ಪರಿಹಾರವು ಉತ್ಪನ್ನದ 15 ಪಟ್ಟು ಅಥವಾ ಮಾರ್ಕೆಟ್ ಬೆಲೆಯ ಅರ್ಧಕೊಡಬೇಕು ಎಂದಿದೆ. ಈ ರೀತಿ ಇರುವುದರಲ್ಲಿ ಸ್ವಲ್ಪ ಬದಲಾವಣೆ ಅಗತ್ಯವೆಂದು ನನ್ನ ಸೂಚನೆ ಇದೆ. ಕೆಲವರಿಗೆ ಲಾವಣಿಯ 15 ಪಟ್ಟು ಅಥವ ಲಾವಣಿ ನಿರ್ಧಾರದ ನಗದಿ ಉತ್ಪನ್ನದ 15 ಪಟ್ಟು ಎಂದರೆ ಎಷ್ಟೋ ಜನರಿಗೆ ಲುಕ್ಸಾನಾಗುತ್ತದೆ. ಅದು ಕೊನೆಪಕ್ಷ 20 ಪಟ್ಟಿನಷ್ಟು ಇರಬೇಕು. ಇಷ್ಟನ್ನು ಕೊಟ್ಟು ಜಮೀನು ತೆಗೆದುಕೊಳ್ಳಲಿಕ್ಕೆ ಅಡ್ಡಿ ಇಲ್ಲ.

ಇನ್ನು ಜಮೀನನ್ನು ಪಡೆದು ರೈತರಿಗೆ ಹಂಚತಕ್ಕದ್ದು ಒಂದು ಪ್ರಶ್ನೆ. ಜಮೀನನ್ನು ಕೊಳ್ಳುವ ಕಾಲಕ್ಕೆ ಜಮೀನು ಮಾಲಿಕರಿಗೆ ಪರಿಹಾರದ ಹಣವನ್ನು ಕಂತುಗಳಲ್ಲಿ ಕೊಡುವುದರಿಂದ ಅನೇಕ ರೀತಿಯಿಂದ ತೊಂದರೆ ಮತ್ತು ತ್ರಾಸ ಆಗುತ್ತದೆ. ಇದ್ದ ಸ್ವಾಸ್ಥ್ಯವನ್ನು ಮಾರಿ, ಹಣ ಒಂದೇ ಗಂಟಿನಲ್ಲಿ ಮುಟ್ಟದೆ ಕಂತಿನಿಂದ ಬಂದರೆ ಜಮೀನು ಮಾಲೀಕರಾಗಿದ್ದವರು ಸಹ ಬಡವರಾಗುವ ಪ್ರಸಂಗಬರುತ್ತದೆ. Land Mortgage Bank ಅಥವ ಸರ್ಕಾರ ಒಂದೇಗಂಟಿನಿಂದ ಹಣವನ್ನು ಮುಟ್ಟಿಸುವ ವ್ಯವಸ್ಥೆಯನ್ನು ತಪ್ಪದೆ ಮಾಡಬೇಕು. ಈಗಿರತಕ್ಕ State Land Mortgage Bank ಸಾಕಷ್ಟು ಹಣವನ್ನುಒದಗಿಸಿ ರೈತರು ಜಮೀನು ಮಾಲಕರಿಂದ ಹೊಲವನ್ನು ಕೊಳ್ಳುವ ಕಾಲಕ್ಕೆ ಸಾಕಷ್ಟು ಸಾಲಸಿಕ್ಕುವಂತೆ ಮತ್ತು ಅದನ್ನು 15-20 ಕಂತುಗಳಲ್ಲಿ ಹಿಂದಕ್ಕೆ ಕೊಡುವಂಥ ಯೋಜನೆಯನ್ನು ಕಾನೂನಿನಲ್ಲಿ ಒಳಪಡಿಸತಕ್ಕದ್ದು ಎಂದು ನನ್ನ ಸೂಚನೆ ಇದೆ.

ನಮ್ಮ ಹಿಂದುಸ್ಥಾನ ದೇಶದೊಳಗೆ ಬಹಳ ಜನರು ಐದು ಎಕರೆಗಿಂತ ಕಡಮೆ ಭೂಮಿಉಳ್ಳವರು. ನಮ್ಮ ಭರತಖಂಡದೊಳಗೆ ಭೂಮಿಕಡಮೆ, ಜನಸಂಖ್ಯೆ ಹೆಚ್ಚಿಗಿದ್ದು ಒತ್ತಡಜಾಸ್ತಿ ಇದೆ ಎನ್ನುವುದು ಸಿದ್ಧವಾದ ಮಾತು. ನಮ್ಮ ಮೈಸೂರು ಪ್ರಾಂತದಲ್ಲಿ ಎರಡು ಎಕರೆಯಷ್ಟು ಜಮೀನು ಒಬ್ಬೊಬ್ಬರಿಗೆ ಹಂಚಿಕೊಟ್ಟರೆ ಆಗಬಹುದು ಆದರೆ ಎಲ್ಲರೂ ಒಕ್ಕಲುತನ ಮಾಡುತ್ತಾರೆ, ಅದೇ ಉದ್ಯೋಗವನ್ನು ಕೈಕೊಳ್ಳುತ್ತಾರೆ ಎಂದು ಹೇಳುವ ಹಾಗಿಲ್ಲ. ಒಕ್ಕಲುತನವನ್ನು ಕೈಕೊಳ್ಳಬಹುದಾದವರಿಗೆ ಜಮೀನನ್ನು ಹಂಚಿಕೆ ಮಾಡಿದರೂ 3-4 ಎಕರೆಗಳಿಗಿಂತ ಹೆಚ್ಚಿಗೆ ಬರಲಾರದು. ಆದರೂ ಸಹ ಇಡೀ ಪ್ರಶ್ನೆಯನ್ನು ನೋಡಿದರೆ ಎಲ್ಲರಿಗೂ ಬಡತನವನ್ನು ಹಂಚಬೇಕಾಗುತ್ತದೆ, ಉತ್ಪನ್ನ ಕಡಮೆಯಾಗುತ್ತದೆ, ಆಹಾರೋತ್ಪನ್ನಕ್ಕೆ ದೊಡ್ಡ ಅಡಚಣೆಯಾಗುತ್ತದೆ, ಭೂಮಿಯನ್ನು ಹಂಚುವುದರಿಂದ ಲುಕ್ಸಾನು ಆಗುತ್ತದೆ ಎನುವುದರಲ್ಲಿ ಅರ್ಥವಿಲ್ಲ. ನಿಜವಾಗಿಯೂ ಸಣ್ಣ ಸಣ್ಣದಾಗಿ ಮೂರು ಎಕರೆ, ಆರು ಎಕರೆ ಹೀಗೆ ಭೂಮಿ

ಇದ್ದರೆ ಹೆಚ್ಚು ಗೊಬ್ಬರ ಹಾಕಿ, ಹೆಚ್ಚು ಮನಸ್ಸು ಮಾಡಿ, ವಿಶೇಷ ರೀತಿಯಿಂದ, ಉತ್ತಮ ರೀತಿಯಲ್ಲಿ ಉತ್ಪನ್ನ ಮಾಡಿಕೊಂಡ, 20 ಎಕರೆ, 30 ಎಕರೆ ಭೂಮಿಯಲ್ಲಿ ಸಾಮಾನ್ಯರೀತಿಯಲ್ಲಿ ಮಾಡುವಂಥ ಒಕ್ಕಲುತನದಲ್ಲಿ ಬರತಕ್ಕ ಫಾಯಿದೆಗಿಂತಲೂ ಹೆಚ್ಚು ಉತ್ಪನ್ನ ಬರುವಂಥಾದ್ದು ಶತಸಿದ್ಧ. ಬಹಳ ದೊಡ್ಡ ಜಮೀನಿದ್ದರೆ, ಉತ್ತಮ ರೀತಿಯಲ್ಲಿ economic unit ಆಗುವಂಥಾದ್ದು ಸಹಜವಿದೆ. ಆದರೆ ಮೂರು ಎಕರೆ, ಆರು ಎಕರೆ, ಒಂದು ಕುಟುಂಬ ಹಿಡುವಳಿಯು ಪ್ರಾದರೆ ಅದರ ಉತ್ಪನ್ನ ಎಷ್ಟು ಬರುತ್ತದೆ ಎನ್ನುವುದು ವರದಿಯಲ್ಲಿ ಗೊತ್ತಾಗುತ್ತದೆ. 1,200 ರೂಪಾಯಿ ಉತ್ಪನ್ನ ಕನಿಷ್ಠ ಪಕ್ಷ ಬರುವಂತೆ ಇರಬೇಕು ಎಂದು ನಿರ್ಧಾರವನ್ನು ಕೊಟ್ಟಿದ್ದಾರೆ. ಅದು ಯೋಗ್ಯವಾದದ್ದಿದೆ. ಇದರಿಂದ ಐದು ಜನರು ಉತ್ತಮ ರೀತಿಯಲ್ಲಿ ಜೀವನ ಮಾಡಲಿಕ್ಕೆ ಬೇಕಾದಂಥ ಭೂಮಿ ಲಭಿಸಿದಂತಾಗುತ್ತದೆ. ಒಕ್ಕಲುತನದಲ್ಲಿರತಕ್ಕವರಿಗೆ ಸರಿಯಾಗಿ ಭೂಮಿ ಸಿಕ್ಕುತ್ತದೆನ್ನುವುದು ನನ್ನ ಅಭಿಪ್ರಾಯ.

ಇನ್ನು ಕೆಲವೊಂದು ಭಾಗದಲ್ಲಿ ಎಂದರೆ ಅಲ್ಪ ವಯಿಗಳು, ವಿಧವೆಯರು, ದುರ್ಬಲರು, ಯಾವುದೇ ಕೆಲಸ ಮಾಡಲಿಕ್ಕೆ ಸಾಧ್ಯವಿಲ್ಲದ ಸಣ್ಣ ಹಿಡುವಳಿದಾರರಿಗೆ ಸಾಧ್ಯವಾದಷ್ಟು ಲಾವಣಿ ಇರತಕ್ಕದ್ದು. ಇಂಥ ಪ್ರಸಂಗದಲ್ಲಿ ರೈತಸಾಗುವಳಿ ಮಾಡಲಿಕ್ಕೆ ಒಂದು ವಿನಾಯಿತಿ ಮಾಡಬೇಕೆನ್ನುವುದು ಸಹಜವಿದೆ. ಎಷ್ಟೋ ಜನರು ಈರೀತಿ ಇದ್ದಾರೆ. ಈ ತರಹ ಜನರಿಗೆ ಜಮೀನು ಉಳಿಯಬೇಕು. ಅಲ್ಪವಯಿಗಳು ವಯಸ್ಸಿಗೆ ಬಂದನಂತರ, ಅಥವ ವಿಧವೆಯರು ಬೇರೆಯವರಿಂದ ಮತ್ತು ನಿರಾಶ್ರಿತರಾದವರು ಒಕ್ಕಲುಮನೆತನದಲ್ಲಿ ಹುಟ್ಟಿದ, ಅವರ ಬಗ್ಗೆ ಆದಷ್ಟು ಪ್ರೀತಿ ಇದ್ದಂಥ ಮನುಷ್ಯರ ಮಕ್ಕಳು ಮರಿಗಳನ್ನು ಸೇರಿಸಿಕೊಂಡು ಸ್ವಂತಸಾಗುವಳಿ ಮಾಡಿಸುವುದಕ್ಕೆ ಅವಕಾಶಕೊಡಬೇಕು.

ಇನ್ನು Rent ಬಗ್ಗೆ ಹೇಳಬೇಕಾದರೆ, ಇವರು ನಿರ್ದಿಷ್ಟಪಡಿಸಿರುವುದು ಕಡಮೆ ಇದೆ. ಆದರಲ್ಲೂ ಅಲ್ಪವಯಿಗಳು, ವಿಧವೆಯರು, ದುರ್ಬಲರು ಇವರುಗಳಿಗಂತೂ 1/5 ಭಾಗ ಲಾವಣಿ ಎಂದು ನಿರ್ದಿಷ್ಟಪಡಿಸಿರತಕ್ಕದ್ದು ಸ್ವಲ್ಪ ಕಡಮೆಯೇ ಆಯಿತು ಅವರುಗಳು ಸರ್ಕಾರಕ್ಕೆ ಕೊಡತಕ್ಕ charges ವಗೈರೆ ಇದರಿಂದಲೇ ಕೊಡಬೇಕು. ಆದುದರಿಂದ ಅವರಿಗೆ ಲಾವಣಿಯು 1/3 ಭಾಗವಿರಬೇಕೆಂದು ನನ್ನ ಸೂಚನೆ.

4-30 P.M.

ಇನ್ನು ಲ್ಯಾಂಡ್ ಕಮಿಷನ್ ಬಗ್ಗೆ ಕೆಲವೊಂದು ರೀತಿಯ ಸಲಹೆ ಬಂದಿವೆ. ಈ ಕಮಿಷನ್‌ನಲ್ಲಿ ಪ್ರತ್ಯೇಕ ಅಧಿಕಾರಿಗಳಿರಬೇಕು, ಇಂಥವರಿರಬೇಕು ಎಂದು ಹೇಳಿದ್ದಾರೆ. ವರದಿಯಲ್ಲಿ ಅಸಿಸ್ಟೆಂಟ್ ಕಮಿಷನರ ದರ್ಜೆಯವರಿರಬೇಕೆಂದು ಸೂಚಿಸಿದೆ. ಆದರೆ ಅವರನ್ನು ಯಾವಕಡೆಯಿಂದ ರೆಕ್ರೂಟ್ ಮಾಡಬೇಕೆಂದು ಸ್ಪಷ್ಟವಾಗಿ ಹೇಳಿಲ್ಲ. ರೆವೆನ್ಯೂ ಅಧಿಕಾರಿಗಳು ಇಂಥ ಕಮಿಷನ್‌ನಲ್ಲಿರಬಾರದೆಂಬ ಸೂಚನೆಯಿದೆ. ಏಕೆಂದರೆ ಆ ಕಮಿಷನ್‌ನಿಂದ ನ್ಯಾಯ ತೀರ್ಪು ದೊರೆಯಬೇಕು, ಆದ್ದರಿಂದ ಈ ಕಮಿಷನ್ನಿಗೆ ಜ್ಯುಡಿಷಿಯಲ್ ಇಲಾಖೆಯವರನ್ನು ರೆಕ್ರೂಟ್ ಮಾಡಬೇಕು. ರೆವೆನ್ಯೂ ಅಧಿಕಾರಿಗಳಿಗೆ ಅವಕಾಶವಿರಬಾರದು. ಈವರೆಗೆ ರೆವೆನ್ಯೂ ಅಧಿಕಾರಿಗಳನ್ನು ನೇಮಿಸಿರುವ ಬೋರ್ಡುಗಳು ವ್ಯವಹಾರಗಳನ್ನು ತೀವ್ರವಾಗಿ ಬಗೆಹರಿಸುತ್ತಿಲ್ಲ; ಇದಲ್ಲದೆ ಲಂಚರುಷುವತ್ತುಗಳಿಗೆ ಅವಕಾಶವಾಗಿದೆ. ನಿಜವಾಗಿಯೂ ರೆವೆನ್ಯೂ ಅಧಿಕಾರಿಗಳಿರುವ ಕಡೆ ನ್ಯಾಯ ದೊರೆಯುವುದಿಲ್ಲ, ನಿಧಾನವಾಗುತ್ತದೆ ಎಂಬುದು ಪ್ರತಿಯೊಬ್ಬರಿಗೂ ಗೊತ್ತಿರುವ ವಿಷಯ. ಆದ್ದರಿಂದ ಲ್ಯಾಂಡ್ ಕಮಿಷನ್ನಿಗೆ ಜುಡಿಷಿಯಲ್ ಇಲಾಖೆ ಅಧಿಕಾರಿಗಳನ್ನೇ ಹಾಕಬೇಕೆಂಬ ಸೂಚನೆಯಿದೆ. ಈ ಎಲ್ಲಾ ಸೂಚನೆಗಳನ್ನಿತ್ತು ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈ ದಿವಸ ವಾಯಿದೆ ಆಗುವುದರಲ್ಲಿ 5 ಜನರಿಗೆ ಅವಕಾಶ ಕೊಡಬೇಕೆಂದಿದ್ದೇನೆ. ಶ್ರೀಯುತರಾದ ಮೂಡಲಗಿರಿ ಗೌಡರು, ದೇವರಾಜ ಅರಸ್‌ರವರು, ವೀರಪ್ಪನವರು ಮತ್ತು ಇನ್ನೊಬ್ಬರು ಯಾರಿಗಾದರೂ ಅವಕಾಶ ಕೊಡುತ್ತೇನೆ, ಮಾತನಾಡುವವರು ಆದಷ್ಟು ಕಡಿಮೆ ಮಾತನಾಡಿ ಕಾಲ ಉಳಿತಾಯ ಮಾಡಿದರೆ ಒಳ್ಳೆಯದು.

*ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಗುಬ್ಬಿ).—ಸ್ವಾಮಿ, ಹಿಂದೂಸ್ಥಾನದಲ್ಲಿ ಇಂಗ್ಲೀಷಿನವರನ್ನು ಈ ದೇಶದಿಂದ ಹೊರಡಿಸಲು ಯಾವರೀತಿ ಚಳುವಳಿ ನಡೆಯಿತೋ ಅದೇ ರೀತಿಯಲ್ಲಿ ಜಟಿಲವಾದಂಥ ಈ ಭೂ ಸಮಸ್ಯೆಯ ಪರಿಹಾರಕ್ಕೂ ಕೂಡ ಭೂ ಸುಧಾರಣೆಯಾಗಬೇಕೆಂದು ಹಿಂದೂಸ್ಥಾನದಲ್ಲೂ ಹಾಗೂ ಮೈಸೂರಿನಲ್ಲೂ ಚಳುವಳಿ ನಡೆದಿರುವುದು ಎಲ್ಲರಿಗೂ ಗೊತ್ತಿರುವ ವಿಷಯ. ಪ್ರಜಾ ಪ್ರಭುತ್ವ ಬಂದು ಹತ್ತು ವರ್ಷಗಳಾದಮೇಲೆ ಕಾಂಗ್ರೆಸ್ ಅಧಿಕಾರಕ್ಕೆ ಬಂದಮೇಲೆ ದೇಶದ ಸರ್ವತೋಮುಖವಾದ ಅಭಿವೃದ್ಧಿ ಸಾಧಿಸಬೇಕು ಮತ್ತು ದೇಶದಲ್ಲಿರುವ ಅಸಂತೃಪ್ತಿಯನ್ನು ಹೋಗಲಾಡಿಸಬೇಕು ಎಂದು ಮೈಸೂರು ಸರ್ಕಾರದವರು ಜತ್ತಿ ಸಮಿತಿಯನ್ನು ನೇಮಕ ಮಾಡಿದರು. ಈ ಸಮಿತಿ ನೇಮಕ ಮಾಡಿದಮೇಲೆ ಎಷ್ಟು ದಿವಸಗಳಿಗೆ ವರದಿ ಬಂತು ಎಂಬುದು ಬಹಳ ಸೋಜಿಗದ ಮಾತು. ಏಳು ತಿಂಗಳಲ್ಲಿ ಹುಟ್ಟಿದ ಮಗು ಬದುಕುವುದಿಲ್ಲ, ಪ್ರವರ್ಧಮಾನಕ್ಕೆ ಬರಲಾರದು ಎಂಬ ನಾಣ್ಣುಡಿಯಿದೆ. ಅದರಂತೆ ಮೂರು ತಿಂಗಳಲ್ಲಿ ಬಂದ ಈ ವರದಿ ಎಷ್ಟರ ಮಟ್ಟಿಗೆ ಜನರ ಕಷ್ಟ ಸುಖ ಪರಿಹಾರ ಮಾಡುವುದಕ್ಕೆ ಪ್ರಯತ್ನ ಮಾಡಿದೆ, ಎಷ್ಟರ ಮಟ್ಟಿಗೆ ಅದು ವಿವರಗಳನ್ನು ಒದಗಿಸಿದೆ ಅಂದರೆ ನನಗಂತೂ ಅಧಿಕಾರದಲ್ಲಿರುವ ನನ್ನ ಸ್ನೇಹಿತರು ಜತ್ತಿ ಸಮಿತಿ ವರದಿಯಲ್ಲಿರುವ ಎಲ್ಲಾ ಲೋಪದೋಷಗಳನ್ನೂ ಒತ್ತಟ್ಟಿಗಿಟ್ಟು ಅದರಲ್ಲಿರುವ ಒಳ್ಳೆಯದನ್ನಾದರೂ ಜಾರಿಗೆ ತರುವುದಕ್ಕೆ ಮನಸ್ಸು ಅವರಿಗಿದೆಯೆ ಎಂದು ನನ್ನ ಮನಸ್ಸಿನಲ್ಲಿ ದುಗುಡ ಪ್ರಾರಂಭವಾಗಿದೆ. “ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಲೇಸು” ಎಂದು ಒಬ್ಬ ಕವಿ ಹೇಳಿದ್ದಾನೆ. ಕೋಟಿ ವಿದ್ಯೆ ಬಲ್ಲ ಭಾರತ ಮೇಟಿ ವಿದ್ಯೆ ಬಲ್ಲುದಾಗಬೇಗು. ಯಾವ ರೈತ ವ್ಯವಸಾಯವನ್ನು ನಂಬಿಕೊಂಡು ಭೂಮಿಯ ಅವಲಂಬನ ಮಾಡಿಕೊಂಡಿರುವಾಗ ಅನೇಕ ದೊಡ್ಡ ಜಮೀನುದಾರರು ತಮ್ಮ ಸ್ಥೂಲಕಾಯವನ್ನು ಬೆಳೆಸಿಕೊಂಡು ಮದ್ರಾಸು, ಬೊಂಬಾಯಿ, ಶೃಂಗೇರಿಗಳಲ್ಲಿದ್ದಾರೆ. ಮುರ್ಘಿ ಮಠಾಧೀಶ್ವರರು, ಸಿದ್ಧಗಂಗಾ ಮಠಾಧೀಶ್ವರರು ಮುಂತಾದ ದೊಡ್ಡ ದೊಡ್ಡ ಮಠಾಧೀಶ್ವರರು ಇವರೆಲ್ಲ ಎಲ್ಲಿದ್ದಾರೆ? ಇವರೆಲ್ಲಾ ಮೈನ್ಗೆ ಕೆಸರು ಮಾಡಿಕೊಂಡು ಬಾಯಿ ಮೊಸರು ಮಾಡಿಕೊಂಡಿದ್ದಾರೆಯೆ? ಬೇರೆಯವರ ಕೈ ಕೆಸರುಮಾಡಿ ಅವರು ಊಟ ಮಾಡುತ್ತಿದ್ದಾರೆ. ಇದನ್ನು ಕೂಲಂಕಷವಾಗಿ ಯೋಚನೆ ಮಾಡಿದರೆ ನಿಜವಾಗಿಯೂ ಜತ್ತಿ ಸಮಿತಿಯವರು ಒಂದು ಹೆಜ್ಜೆ ಮುಂದೆ ಹೋಗಿದ್ದಾರೆಂದು ಅನ್ನಿಸುತ್ತದೆ. ಈಗ ಈ ಸಭೆಯ ಮುಂದಿರುವ ಸಮಿತಿ ವರದಿ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಚರ್ಚೆಮಾಡುವಾಗ ಅನೇಕ ಜನರು ಅನೇಕ ರೀತಿಯಲ್ಲಿ ಮಾತನಾಡಿದ್ದಾರೆ. ಮೂರು ಗಂಟೆ ಕಾಲ ಎರಡು ಗಂಟೆ ಕಾಲ, ಒಂದೂವರೆ ಗಂಟೆ ಕಾಲ ಹೀಗೆಲ್ಲಾ ಮಾತನಾಡಿದ್ದಾರೆ. ಆದರೆ ಅವರೆಲ್ಲರೂಕೂಡ ವೆಸ್ಟೆಡ್ ಇಂಟರೆಸ್ಟ್‌ನಿಂದ ತಮ್ಮನ್ನು ತಾವು ಕಾಪಾಡಿಕೊಳ್ಳುವ ಒಂದೇ ದೃಷ್ಟಿಯಿಂದ ಮಾತನಾಡಿದ್ದಾರೆಯೇಹೊರತು ದೇಶದಲ್ಲಿ ದುಡಿಯುವ ಮೂಕಪ್ರಾಣಿಯ ಕಡೆ ಗಮನ ಕೊಟ್ಟಿಲ್ಲ. ಶ್ರೀಮತಿ ನಾಗರತ್ನಮ್ಮನವರು ಮೊನ್ನೆ ಮಾತನಾಡಿ ಅವರಿಗೆ ತಾಳಿ ಮಾಡಿಸಿಕೊಡಬೇಕು ಎಂದೇನೋ ಕೆಲವು ಮಾತನ್ನು ಹೇಳಿದರು. ಅವರು ಮದುವೆಯಾಗಿರುವುದುಂಟು. ಆದರೆ ಮದುವೆ ಯಾದಾಗ ಮಾಡಿರುವ ಸಾಲ ಈ ದಿವಸದವರೆಗೂ ತೀರಿಲ್ಲ. ಇದನ್ನು ಅರ್ಥಮಾಡಿಕೊಳ್ಳುವುದಾದರೆ ರೈತನಿಗಿರುವ ಕಷ್ಟ, ನೇಗಿಲಯೋಗಿಗಿರುವ ಕಷ್ಟ, ಜಮೀನುದಾರರ ಕೈಲಿ ಸಿಕ್ಕಿ ಪಡುವ ಕಷ್ಟ ಶ್ರೀಮಂತರ ಕೈಲಿ ಸಿಕ್ಕಿರುವ ಸಾಲಗಾರನಿಗಿಂತ ಹೆಚ್ಚು. ಈ ವಿಷಯವನ್ನು ಸಂಪೂರ್ಣವಾಗಿ ಮತ್ತು ದೀರ್ಘವಾಗಿ ಚರ್ಚೆಮಾಡಿ ಪರಿಹಾರ ಮಾಡದಿದ್ದರೆ ಶ್ರೀ ಶ್ರೀನಿವಾಸ ಶೆಟ್ಟರು ಹೇಳಿದಹಾಗೆ ಕಮ್ಯೂನಿಸಂ ಬರುತ್ತದೆ, ದೇಶದಲ್ಲಿ ಅನಾಹುತವಾಗುತ್ತದೆ. ಜಮೀನು ಮಾಲೀಕರಿಗೆ ಪರಿಹಾರ ಕೊಡಲು ಹಣವಿಲ್ಲದೆ, ಲ್ಯಾಂಡ್ ಬ್ಯಾಂಕ್ ಎಲ್ಲದೆ ಎಂದು ಶ್ರೀ ಚನ್ನಬಸಪ್ಪನವರು ಪ್ರಶ್ನೆ ಮಾಡಿದರು ; ನಿಜ. ಈ ದೇಶದಿಂದ ಬ್ರಿಟಿಷರನ್ನು ಓಡಿಸುವಾಗ ಕಾಂಗ್ರೆಸ್ಸಿನಲ್ಲಿ ಬ್ಯಾಂಕ್ರಪ್ಟ್‌ಸಿ ಇದೆ, ಆ ಸಂಸ್ಥೆಯವರು ಕೆಲಸಕಾರ್ಯ ಕೊಡಲಿಲ್ಲವೆಂದು ಚಳುವಳಿಮಾಡುತ್ತಾರೆ ಎಂದು ಹೇಳುತ್ತಿದ್ದರು. ಇಂಥ ಒಂದು ಉಗ್ರವಾದ ಪರಿಸ್ಥಿತಿ ಬಂದಾಗ ಹಣಕಾಸನ್ನು ಹೇಗೆ ಒದಗಿಸಬೇಕು, ಸಮಸ್ಯೆಯನ್ನು ಹೇಗೆ ಪರಿಹಾರಮಾಡಬೇಕು ಎಂಬುದನ್ನು ಎಲ್ಲರೂ ಸೇರಿ ತೀರ್ಮಾನಿಸಬೇಕು. ತನ್ನ ಸುಖ ದೇಶದ ಸುಖ, ತನ್ನ ಕಷ್ಟ ದೇಶದ ಕಷ್ಟ ಎಂದು............

Sri H. M. CHANNABASAPPA.—He is misquoting.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಶ್ರೀ ಚನ್ನಬಸಪ್ಪನವರು ಹೇಳುವುದರಲ್ಲಿ ಕೆಲವನ್ನು ನಾನು ಒಪ್ಪುತ್ತೇನೆ. ಬರೀ ಭೂ ಸುಧಾರಣೆ ಏಕೆ ಮಾಡುವುದು ? ಉಳುವವನಿಗೆ ಭೂಮಿ ಕೊಡುವಹಾಗೆ ಮನೆಯನ್ನೂ ಒದಗಿಸಬೇಡವೆ ಎಂಬುದನ್ನು ಯೋಚನೆಮಾಡಬೇಕಾಗಿದೆ. ಭೂ ಸುಧಾರಣೆ ಮಾಡುವಾಗ ಕಾಂಗ್ರೆಸ್‌ನಲ್ಲಿ ಒಂದು ತತ್ವವಿಲ್ಲ. ಒಂದು ಹೆಜ್ಜೆ ಮುಂದೆ ಹೋಗಿ ಮೊದಲು ಭೂ ಸುಧಾರಣೆ, ಆಮೇಲೆ ಶ್ರೀಮಂತರ ಮನೆ, ಆಮೇಲೆ ಫ್ಯಾಕ್ಟರಿಗಳನ್ನು ನ್ಯಾಷನಲೈಜ್ ಮಾಡುವುದು ಇದನ್ನೆಲ್ಲಾ ಮಾಡಬೇಕೆಂದು ಮನಸ್ಸುಮಾಡಿ. ಅದು ಸರಿಯೆ, ತಪ್ಪೆ ಎಂಬುದನ್ನು ದೇಶದ ಮುಂದಿಟ್ಟು ತುಲನಮಾಡಬೇಕು.

ಇದನ್ನು ಏಕೆ ಹೇಳುತ್ತೇನೆ ಎಂದರೆ ಈ ಭೂ ಸುಧಾರಣೆಗೆ ನೀವು ಪರಿಷ್ಕೃತವಾದ ಒಂದು solution ಕಂಡುಹಿಡಿಯುವಾಗ, ಜಮೀನು ಇಲ್ಲದೆಇರುವವನಿಗೆ ಜಮೀನನ್ನು ಹಂಚುವಾಗ ಏನೇನು ಸಮಸ್ಯೆಗಳು ಬರುತ್ತವೆ, ಯಾವಯಾವ ತೊಡಕುಗಳು ಬರುತ್ತವೆ ಅವನ್ನು ಎದುರಿಸುವಾಗ ಎಷ್ಟುಮಟ್ಟಿಗೆ ಬುದ್ಧಿ, ಚಾಕಚಕ್ಯತೆಯನ್ನು ಉಪಯೋಗಿಸುತ್ತೀರೋ ಹಾಗೆಯೇ 20 ಸಾವಿರ, 25 ಸಾವಿರ, 50 ಸಾವಿರ ರೂಪಾಯಿ ಮನೆಬಾಡಿಗೆ ಬರತಕ್ಕವರ ಮೇಲೆ ಯಾವ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಿ ಎಂಬುದನ್ನು ಹೇಳಿಲ್ಲ. ಅನೇಕ ಜನ ಸ್ನೇಹಿತರು ಹೇಳಿದರು. ಅಗ್ರೇರಿಯನ್ ರಿಫಾರಮ್ಸ್ ಆಗಬೇಕೆಂದು ಅನೇಕ ವರ್ಷಗಳಿಂದ ವಾದ ನಡೆಯುತ್ತಾಇದೆ. ಇದು ನಿಜ. ಒಪ್ಪಿಕೊಳ್ಳುತ್ತೇನೆ. ಅದು ಬರುವ ಹೊತ್ತಿಗೆ ಈ ಶ್ರೀಮಂತರಲ್ಲಿರತಕ್ಕ ಶ್ರೀಮಂತಿಕೆಯ ಸುಲಿಗೆಮಾಡಲು ಏಕೆ ಪ್ರಯತ್ನಮಾಡಲಿಲ್ಲ ? ಅವರು ಸರ್ಕಾರಕ್ಕೆ ಸೇಲ್ಸ್ ಟ್ಯಾಕ್ಸ್, ಇನ್‌ಕಂಟ್ಯಾಕ್ಸ್, ಸೂಪರ್‌ಟ್ಯಾಕ್ಸ್ ಮುಂತಾದುವುಗಳನ್ನೆಲ್ಲಾ ಕೊಡುತ್ತಾರೆ ಎಂದು ಕೆಲವರು ಹೇಳಿದರು. ಯಾರ ದುಡ್ಡನ್ನು ಅವರು ಕೊಡುತ್ತಾರೆ ? ಧರ್ಮದರ್ಶಿಗಳ ಸ್ವರೂಪದಲ್ಲಿ ಭೂಮಿಯ ಮೇಲೆ ಕಷ್ಟಪಟ್ಟು ದುಡಿದು ಬೆವರು ಸುರಿಸಿ ಆಹಾರ ಬೆಳೆಯುತ್ತಾನೆಯಲ್ಲಾ ಅವನ ಉತ್ಪಾದನೆಯಿಂದ ಬರತಕ್ಕ ಹಣವನ್ನು ಕೊಡುತ್ತಾಇದ್ದಾರೆ. ಸರ್ಕಾರದವರು 60 ಕೋಟಿ ರೂಪಾಯಿಗಳ ಹಣವನ್ನು ಖರ್ಚು ಮಾಡುವುದಾದರೆ, ಅವರು ಆ ಧರ್ಮದರ್ಶಿಗಳಿಗಾಗಿ ಮಾಡುತ್ತಾಇದ್ದಾರೆ. ಶ್ರೀಮಂತರು ಕೊಟ್ಟಿರತಕ್ಕ ಸೇಲ್ಸ್‌ಟ್ಯಾಕ್ಸ್ ನಮ್ಮದು, ಇನ್‌ಕಂಟ್ಯಾಕ್ಸ್ ನಮ್ಮದು, ಅವರು ಕಟ್ಟಿರತಕ್ಕ ಮನೆಮಠಗಳೆಲ್ಲವೂ ನಮ್ಮದೇ, ಎಂದಮೇಲೆ ಶ್ರೀಮಂತರ ಕೈಯಲ್ಲಿರತಕ್ಕ ಭಾರಿಭಾರಿ ಹಿಡುವಳಿಗಳೂ ನಮ್ಮದೇ. ಅಂತಹ ದೊಡ್ಡದೊಡ್ಡ ಹಿಡುವಳಿಗಳನ್ನು ಛಿದ್ರಮಾಡಬೇಕು. ಶ್ರೀ ಚನ್ನಬಸಪ್ಪನವರು ಆರೀತಿ ಛಿದ್ರ, ಛಿದ್ರಮಾಡಿದರೆ ಆಹಾರದ ಉತ್ಪನ್ನಕ್ಕೆ ಕುಂದಕ ಬರುತ್ತದೆಎಂದು ಹೇಳಿದರು. ಅಮೆರಿಕಾದಲ್ಲಿ ನಮ್ಮಲ್ಲಿ 100ಕ್ಕೆ 85 ಜನ ರೈತರು ಇದ್ದರೆ, 13 ಜನ ಇದ್ದಾರೆ. ಅಲ್ಲಿ ಎಷ್ಟು ಆಹಾರಧಾನ್ಯಗಳನ್ನು ಬೆಳೆಯುತ್ತಾಇದ್ದಾರೆ ಎಂಬುದನ್ನು ಅವರೇ ಹೇಳಿದರು. ಅಂತಹ ಒಂದು ಪರಿಸ್ಥಿತಿ ನಮ್ಮ ದೇಶದಲ್ಲೂ ನಾಳೆ ಬರಬಹುದು. ಪ್ರಕೃತ ಸಂದರ್ಭದಲ್ಲಿ ನಮ್ಮ ದೇಶದಲ್ಲಿರತಕ್ಕ ಜನ ಎಂತಹ ಒಂದು ಉಗ್ರವಾದ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ ಅದಕ್ಕೆ ಅನುಕೂಲವಾದ ಏನಾದರೂ ಒಂದು solution ಕಂಡುಹಿಡಿಯಬೇಕೇ ಹೊರತು ಮುಂದೆ 100 ವರ್ಷಗಳಾದ ಮೇಲೆ, 200 ವರ್ಷಗಳಾದ ಮೇಲೆ ಏನಾಗುತ್ತದೆ ಎಂಬುದನ್ನು ಇವತ್ತು ನಮ್ಮ ಚರ್ಚೆಯಲ್ಲಿ ಹಾಕಿಕೊಳ್ಳಬೇಕಾಗಿಲ್ಲ.

ಇಷ್ಟುಮಾತ್ರ ಹೇಳುತ್ತೇನೆ. ಜತ್ತಿ ಸಮಿತಿಯವರು ಮಾಡಿರತಕ್ಕ ಈ ವರದಿ ನಿಜವಾಗಿಯೂ, ಈ ದೇಶದಲ್ಲಿ ಯಾವ ಜನರನ್ನು ಇವತ್ತು ಇಲ್ಲಿ ಪ್ರತಿನಿಧಿಸುತ್ತಾ ಇದ್ದಾರೆ, ಯಾವ ಜನಗಳಿಗಾಗಿ ಇಲ್ಲಿ ಕೂತು ರಾಜ್ಯಭಾರ ಮಾಡುತ್ತಾಇದ್ದಾರೆ, ಯಾರ ಸ್ಥಿತಿಯನ್ನು ಉತ್ತಮಪಡಿಸಬೇಕೆಂದು ಹೇಳುತ್ತಾ ಇದ್ದಾರೆ ಅವರ ಸ್ಥಿತಿಯನ್ನು ಉತ್ತಮಪಡಿಸಬೇಕೆಂದು ತಂದಿರತಕ್ಕ ಸಂದರ್ಭದಲ್ಲಿ ಮುಂದೆ ಯಾವಾಗ ಇದರ ಮೇಲೆ ಬಿಲ್ ತಂದು ಆಕ್ಟ್ ಮಾಡುತ್ತೀರೋ ಏನೋ ಗೊತ್ತಿಲ್ಲ, ಅಂತೂ ಬಿಲ್ ತಂದು, ಅಂಗೀಕಾರಮಾಡಿ ಆಕ್ಟ್ ಆದರೆ ನಾಳೆ ಮುಂದಿನ ಜನಾಂಗದವರು ನೀವು ಅಧಿಕಾರಕ್ಕೆ ಬಂದಮೇಲೆ ಈಗ ಏನುಮಾಡುತ್ತೀರೋ ಈ ಕೆಲಸವನ್ನು ಬಹಳವಾಗಿ ಶ್ಲಾಘಿಸುತ್ತಾರೆ. ಇದರ ಕೀರ್ತಿ ಆಚಂದ್ರಾರ್ಕವಾಗಿ ನಿಮಗೆ ಉಳಿಯುತ್ತದೆ.

ಇನ್ನು ಈ ಜತ್ತಿ ಸಮಿತಿಯ ವರದಿಯಲ್ಲಿರತಕ್ಕ ವಿವರಗಳು ಏನಿವೆ, ಈ ಸೀಲಿಂಗ್ ಹೀಗೆಯೇ ಇರಬೇಕು ಎನ್ನುವುದು ಏನಿದೆ ಇದೇರೀತಿ birth control ಆಗಬೇಕು. ಸೀಲಿಂಗ್ on land, ಸೀಲಿಂಗ್ on expenditure ಈ ರೀತಿ ಎಲ್ಲಕ್ಕೂ ಸೀಲಿಂಗ್ ಹಾಕಿದ್ದೇಆದರೆ ಜನಗಳ ಮನಸ್ಸಿನಲ್ಲಿ ಸಂತುಷ್ಟಿ ಬೆಳೆಯುತ್ತದೆ. ಬಡವ ಬಲ್ಲಿದ ಎಂಬ ತಾರತಮ್ಯ ಹೋಗುತ್ತದೆ. ಆ ಸೀಲಿಂಗ್ ಲಿಮಿಟ್‌ನಲ್ಲಿ ಅವನು

ಪರಮಾವಧಿ ಎಷ್ಟು ಸಂಪಾದನೆ ಮಾಡಿಕೊಳ್ಳ ಬಹುದೋ ಅಷ್ಟು ಸಂಪಾದನೆ ಮಾಡಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಇಲ್ಲದೇಇದ್ದರೆ ತಾವು ಆವಡಿ ಅಧಿವೇಶನದಲ್ಲಿ ಏನು ಹೇಳಿದಿರಿ ಆ ಸಮತಾವಾದ ಸಮಾಜ ರಚನೆ ಬರೀ ಪುಸ್ತಕ ಬದನೇಕಾಯಿ ಆಗಿ ಯಾರಿಗೂ ಊಟಮಾಡುವುದಕ್ಕೆ ಬರುವುದಿಲ್ಲ. ಅದನ್ನು ಕೃತಿಗೆ ಇಳಿಸದೇಹೋದ ಪಕ್ಷದಲ್ಲಿ ನೀವು ದೇಶಕ್ಕೆ ದ್ರೋಹಮಾಡುತ್ತೀರಿ, ದೇಶಕ್ಕೆ ಅನ್ಯಾಯ ಮಾಡುತ್ತೀರಿ, ದೇಶದ ಜನತೆಗೆ ಕೊಟ್ಟಂಥ ವಚನ ವನ್ನು ಕಳೆದುಕೊಂಡು ವಚನಭ್ರಷ್ಟರಾಗುತ್ತೀರಿ. ಜತ್ತೀ ಸಮಿತಿಯಲ್ಲಿರತಕ್ಕ ವಿವರಗಳಿಗೆ ಹೋಗುವುದಕ್ಕೆ ಮುಂಚೆ ಅದಕ್ಕೆ ಗಮನಕೊಟ್ಟು ಮೊದಲು ಅದನ್ನು ಕಾರ್ಯರೂಪಕ್ಕೆ ತರಬೇಕು. ಆಗಮಾತ್ರ ಗಾಂಧಿ ಹೆಸರು ಹೇಳಿಕೊಂಡು ರಾಜ್ಯಭಾರ ಮಾಡುವುದಕ್ಕೆ ನೀವು ಲಾಯಕ್ಕಾಗುತ್ತೀರಿ. ಇಲ್ಲದೇಇದ್ದರೆ ಅಧಿಕಾರ ಸಿಕ್ಕಬೇಕೆಂದುಮಾತ್ರ ಗಾಂಧಿ ಹೆಸರು ಹೇಳಿಕೊಂಡು ಅಧಿಕಾರ ಸಿಕ್ಕಮೇಲೆ ಇಷ್ಟಬಂದಂತೆ ಕೆಲಸ ಮಾಡುತ್ತಿರುತ್ತೀರಿ ಎಂದು ನಾನು ಹೇಳುತ್ತೇನೆ. ಇನ್ನು ವಿವರಗಳಿಗೆ ಹೋಗುವುದಿಲ್ಲ.

ಇದರಲ್ಲಿ ಪರ್ಸನಲ್ ಕಲ್ಟಿವೇಷನ್ ಎಂದು ಇದೆ. ಇದನ್ನು ಸಮಿತಿಯವರು ಬಹಳ ವೇಗ್ ಆಗಿ ಪರಿಶೀ ಲನೆಮಾಡಿದ್ದಾರೆ. ಈ ಪರ್ಸನಲ್ ಕಲ್ಟಿವೇಷನ್ ಎನ್ನು ವುದನ್ನು ಬೇರೆಯವರು ಹೇಗೆಬೇಕಾದರೂ ಅರ್ಥಮಾಡಿ ಕೊಳ್ಳಬಹುದು. ಅಡ್ಡಗೋಡೆ ಮೇಲೆ ದೀಪ ಇಟ್ಟ ಹಾಗೆ ಇಟ್ಟಿದ್ದಾರೆ. ಬೆಳಕು ಈ ಕಡೆಯೂ ಬೀಳ ಬಹುದು, ಆ ಕಡೆಯೂ ಬೀಳಬಹುದು. ಹೀಗೆಯೇ ಇರಬೇಕೆಂದು ಕಟ್ಟುನಿಟ್ಟಾಗಿ ಅವರು ಹೇಳಿಲ್ಲ. ಆದ್ದ ರಿಂದ ಪರ್ಸನಲ್ ಕಲ್ಟಿವೇಷನ್ ಎಂದರೆ ಅದು ಹೀಗೆಯೇ ಇರಬೇಕೆಂದು ಹೇಳಬೇಕು. ಯಾವನೋ ಬೆಳಗ್ಗಿನಿಂದ ಸಾಯಂಕಾಲದವರೆಗೂ ನೇಗಿಲು ಹಿಡಿದು ಭೂಮಿಯ ಮೇಲೆ ಬೆವರು ಸುರಿಸುತ್ತಾನೆ, ಯಾವನೋ ಕಷ್ಟಪಟ್ಟು ದುಡಿಯುತ್ತಾನೆ. ತಾನು ಮಾತ್ರ ಹಾಯಾಗಿ ಛತ್ರಿ ಹಿಡಿದುಕೊಂಡು ಹಾಗೆಮಾಡ ಬೇಕು, ಹೀಗೆ ಮಾಡಬೇಕು ಎಂದು ಹೇಳುತ್ತಾ ಜಮೀ ನಿನಲ್ಲಿ ಓಡಾಡುತ್ತಿದ್ದರೆ ಅಂತಹವನೂ ಪರ್ಸನಲ್ ಕಲ್ಟಿವೇಟರು ಎಂದಹಾಗಾಗುತ್ತದೆ. ಪರ್ಸನಲ್ ಕಲ್ಟಿ ವೇಟರ್ ಎಂದರೆ ಯಾರು ಭೂಮಿಯ ಮೇಲೆ ಸ್ವತಃ ನೇಗಿಲು ಹಿಡಿದು ಉಳುತ್ತಾನೆ, ವ್ಯವಸಾಯಕ್ಕೆ ಸಂಬಂಧಪಟ್ಟ ಪ್ರತಿಯೊಂದು ಕೆಲಸವನ್ನು ಮಾಡು ತ್ತಾನೆ ಅಂತಹವನೇ ಹೊರತು ಮತ್ತೆ ಬೇರೆ ಯಾರೂ ಅಲ್ಲ. ಕೂಲಿ ಇಟ್ಟುಕೊಂಡು ವ್ಯವಸಾಯ ಮಾಡಿಸಿದರೆ ಪರ್ಸನಲ್ ಕಲ್ಟಿವೇಷನ್ ಆಗುವುದಿಲ್ಲ. ತಾನೇ ಸ್ವತಃ ಅವರೊಡನೆ ಕೆಲಸಮಾಡಬೇಕು. ಇಲ್ಲದೇಹೋದರೆ ಛತ್ರಿ ಹಿಡಿದುಕೊಂಡು ಜಮೀನಿನ ಮೇಲೆ ಓಡಾಡಿದರೆ ಹೇಗೋಹಾಗೆ ಆಗುತ್ತದೆ. ಆದ್ದರಿಂದ ಇದರಲ್ಲಿ ಪರ್ಸನಲ್ ಕಲ್ಟಿವೇಷನ್ ಎನ್ನು ವುದು ಸರಿಯಾಗಿ ಅರ್ಥವಾಗಿಲ್ಲ.

Future acquisition ದೃಷ್ಟಿಯಿಂದ ಇವತ್ತಿನ ದಿವಸ ಭೂಮಿಯನ್ನು ಮಾರಾಟಮಾಡುತ್ತಾನೆ. ನಾಳೆ ಬೆಳಿಗ್ಗೆ ಜಡ್ಜ್‌ಮೆಂಟ್ ಡೆಟರ್ಸ್ ಜಮೀನನ್ನು ಹರಾಜುಹಾಕುತ್ತಾರೆ. ಹರಾಜಾದ ಮೇಲೆ ಭೂಮಿ ಯನ್ನು ಯಾರೂ ಕೊಂಡುಕೊಳ್ಳುವವರೇ ಇರು ವುದಿಲ್ಲ. ಆ ಜಮೀನನ್ನು ಡಿಕ್ರೀ ಹೋಲ್ಡರ್ರು ಕೊಂಡುಕೊಳ್ಳಬೇಕೇ ಬಿಡಬೇಕೆ? ಅದನ್ನು ಇದರಲ್ಲಿ ಹೇಗೆ solve ಮಾಡಿದ್ದೀರಿ ಎಂಬುದು ಅರ್ಥವಾಗುವುದಿಲ್ಲ. ಜತ್ತೀ ಸಮಿತಿ ವರದಿಯನ್ನೆಲ್ಲಾ ತಿರುವಿ ಹಾಕಿದರೂ ಅದರಲ್ಲಿ ಈ ಮಾತೇ ಇಲ್ಲ. ಅದಕ್ಕೆ ಏನೂ ಪ್ರೊವಿಜನ್ ಮಾಡಿಲ್ಲ. ಏಕೆಂದರೆ ಇವತ್ತು ಸೀಲಿಂಗ್ ಎಷ್ಟೋ ಇಟ್ಟಿರುತ್ತೀರಿ. ಎಷ್ಟೋ ಲ್ಯಾಂಡ್ ಇರುತ್ತದೆ. ಒಬ್ಬ ತನಗೆ ಬರಬೇಕಾದ ಹಣಕ್ಕೆ A ಮೇಲೆ ದಾವ ಹಾಕುತ್ತಾನೆ, ಜಮೀನಿನ ಮೇಲೆ ಡಿಕ್ರೀ ಪಡೆಯುತ್ತಾನೆ. ಡಿಕ್ರೀ ಪಡೆದು ತನಗೆ ಬರಬೇಕಾದ ಹಣಕ್ಕೆ ಬದಲಾಗಿ ಜಮೀನನ್ನು ಪಡೆಯು ತ್ತಾನೆ. ಆಗ ಏನು ಮಾಡಬೇಕು? ಅವನಲ್ಲಿ ಸೀಲಿಂಗ್ ಲಿಮಿಟ್‌ಗಿಂತ ಹೆಚ್ಚು ಜಮೀನು ಬರುತ್ತದೆ. ಅಥವಾ ಅವನಲ್ಲಿ ಏನೂ ಜಮೀನು ಇಲ್ಲದೆ ಇದ್ದರೂ ಇರಬಹುದು ಅಂಥಾದ್ದಕ್ಕೆ ಇದರಲ್ಲಿ ಏನೂ ಸೂಚನೆ ಮಾಡಿಲ್ಲ. ಮೊದಲಿನಿಂದ ಕೊನೆಯವರೆಗೂ ನೋಡಿ ದ್ದರಲ್ಲಿ ಯಾವ ಒಂದು ರಿಲೀಫೂ ಅದಕ್ಕೆ ಇಲ್ಲ. ಅಂತಹ ವನು ಜಮೀನು ಇಟ್ಟುಕೊಳ್ಳಬೇಕೇ? ಬಿಡಬೇಕೇ? ಅದಕ್ಕೆ ಎಲ್ಲೂ ಕೂಡ ವಿವರಣೆಯನ್ನು ಒದಗಿಸಿಲ್ಲ. ಡ್ರಾಫ್ಟ್ ಬಿಲ್ ಬಂದಾಗ ಇದಕ್ಕೆ ಅನ್ವಯವಾಗತಕ್ಕ ಒಂದು ನಿಯಮವನ್ನು ಅದರಲ್ಲಿ ಸೇರಿಸುತ್ತೀರಿ ಎಂದು ನಾನು ತಿಳಿದುಕೊಂಡಿದ್ದೇನೆ.

ಇನ್ನೊಂದು ವಿಷಯ. ನಿಮಗೆ ಸರ್‌ಪ್ಲಸ್ ಲ್ಯಾಂಡ್ ಎಲ್ಲಿ ಸಿಕ್ಕುತ್ತದೆ? ದೇಶದಲ್ಲಿ ನೀವು ಭೂ ಸುಧಾರಣೆಯನ್ನು ತಂದು ಇಂಪ್ಲಿಮೆಂಟ್ ಮಾಡು ತ್ತೇವೆ ಎಂದು ಹೇಳುತ್ತೀರಿ. ಎಲ್ಲರೂ ಪರ್ಸನಲ್ ಕಲ್ಟಿವೇಟರ್ಸ್ ಆದರೆ ಸರ್‌ಪ್ಲಸ್ ಲ್ಯಾಂಡ್ ಎಲ್ಲಿರು ತ್ತದೆ? ದೊಡ್ಡ ದೊಡ್ಡ ಜಮೀನ್‌ದಾರರನ್ನು ಹಚಾ ಯಿಸುವುದಕ್ಕೆ ಇದನ್ನು ತರುತ್ತೇವೆ ಎಂದು ಹೇಳ ಬೇಡಿ. ಆರೀತಿ ಮಾಡಬೇಕೆಂದು ಒತ್ತಾಯ ಬರು ತ್ತಿದೆ ಎಂದು ಹೇಳಬೇಡಿ. ರಾಜ ಮಹಾರಾಜರು ಎಷ್ಟು ವರ್ಷ ಇದ್ದರು? ಅವರಿಗಿದ್ದ ವಿಶೇಷ ಹಕ್ಕು ಗಳನ್ನೆಲ್ಲಾ ಕಿತ್ತುಹಾಕಿ ಅವರನ್ನು ರಾಜಪ್ರಮುಖ ರನ್ನಾಗಿ ಮಾಡಿದಿರಿ. ಇಂತಹ ಬದಲಾವಣೆ ನೀವು ಇದ್ದರೂ ಆಗುತ್ತದೆ ಇಲ್ಲದೇ ಹೋದರೂ ಆಗುತ್ತದೆ. ಇಂತಹ ಕ್ರಾಂತಿಗಳಾಗುವುದು ಸ್ವಾಭಾವಿಕ. ದೇಶ ದಲ್ಲಿ ಮಾಡಬೇಕಾದ ಒಂದು ಒಳ್ಳೆಯ ಕೆಲಸವನ್ನು ಒಂದು ನಿಶ್ಚಲವಾದ ಕೆಲಸವನ್ನು ಒಂದು ದೃಢವಾದ ಕೆಲವನ್ನು ಧೈರ್ಯವಾಗಿ ನಿಂತುಕೊಂಡು ಮಾಡಿ.

Sri T. HANUMAIAH (Challakere).—On a point of order, Sir.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ಶ್ರೀಮಾನ್ ಹನುಮಯ್ಯನವರು ಮಂತ್ರಿಯಾದಾಗ ಹೋಗಿ ಎಂದು ಹೇಳುವುದಕ್ಕಾಗುವುದಿಲ್ಲ. ನಾನು ಹೇಳುವುದು, ಪ್ರಜಾಪ್ರಭುತ್ವದಲ್ಲಿ ಒಂದು ಸಾರಿ ಚುನಾಯಿತರಾ ದರೆ ಐದು ವರ್ಷ ಅವರಿಗೆ ಅಧಿಕಾರವಿರುತ್ತದೆ. ಮಂತ್ರಿಮಂಡಲ ಅಧಿಕಾರದಲ್ಲಿರುವಾಗ ಒಳ್ಳೆಯ ಕೆಲಸ ಮಾಡಿದರೆ ಅವರಿಗೆ ಕೀರ್ತಿ ಬರುತ್ತದೆ. ಹಾಗೆ ಮಾಡ ಲೆಂದು ಹೇಳುತ್ತಿದ್ದೇನೆಯೇ ಹೊರತು ನೀವು ಗಂಟು ಮೂಟೆ ಕಟ್ಟಿಕೊಂಡು ಹೊರಟು ಹೋಗಿ ಎಂದು ಹೇಳು ತ್ತಿಲ್ಲ.

ಮಠಗಳಿಗೆ, ದೇವಸ್ಥಾನಗಳಿಗೆ ಇಷ್ಟಿರಬೇಕೆಂದು ಹೇಳಿದ್ದಾರೆ. ಉದಾಹರಣೆಗೆ ಮಾದೇಶ್ವರನ ದೇವ ಸ್ಥಾನಕ್ಕೆ ಇಷ್ಟಿರಬೇಕೆಂದು ಕೇಳಿದರೆ, ದೇವರೇನಾ ದರೂ ಹಣ್ಣುಕಾಯನ್ನು ಹಣವನ್ನು ತಿನ್ನುತ್ತಾನೆಯೆ? ಮಾದೇಶ್ವರನ ಹೆಸರನ್ನು ಹೇಳಿ 45 ಲಕ್ಷ ರೂಪಾ ಯನ್ನು ಕೊಟ್ಟು ಒಂದು ಕೆರೆಯನ್ನು ಕಟ್ಟಿಸಲಿ, ಹಾಗೆ ಮಾಡಿದರೆ ಸರ್ಕಾರ ಪಾಪರ್ ಆಗುತ್ತದೆ ಎಂದು ಮಾದೇಶ್ವರ ಕನಸಿನಲ್ಲಿ ಹೇಳುತ್ತಾನೆಯೆ? ಆದುದ ರಿಂದ ಆ ಸಂಸ್ಥೆ ಈ ಸಂಸ್ಥೆ ಎಂದು ಇದರಲ್ಲಿ ಬೇಡ. King can do no wrong ಎಂದು ಹಿಂದೆಇತ್ತು. ಈಗ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ರಾಜನನ್ನು ಕಿತ್ತು ಹಾಕಿದರು, ರಾಜ ಎಂದರೆ ಜನ ಎಂದು ಮಾಡಿದರು. ಈರೀತಿ ಭೂಸುಧಾರಣೆ ಮಾಡುವುದರಲ್ಲಿ ಸರ್ಕಾರದ ತತ್ವ ಸರಿಯಿಲ್ಲ. ನಾನು ಹೆಚ್ಚು ವಿವರಗಳಿಗೆ ಹೋಗುವುದಿಲ್ಲ. ಎಲ್ಲ ಕ್ಷೇತ್ರಗಳಲ್ಲಿಯೂ ಸುಧಾರಣೆ ತರಬೇಕು. ಈಗ ಭೂಸುಧಾರಣೆ ತಂದಿರುವುದನ್ನು ಧೈರ್ಯವಾಗಿ ಕಾರ್ಯಗತ ಮಾಡಲಿ, ಆಗ ದೇಶದಲ್ಲಿ ಕೆಲವು ಜನರು ರಾಜ್ಯಭಾರ ಮಾಡುವುದಕ್ಕೆ ಯೋಗ್ಯರಿದ್ದಾರೆ, ಗಾಂಧಿಯವರ ಹೆಸರನ್ನು ಉಳಿಸಿದರು ಎಂದು ಜನರು ಹೇಳುತ್ತಾರೆ. ಈ ಅಧಿವೇಶನ ಮುಗಿಯುವುದರೊಳಗೆ ಈ ಸಭೆಯ ಮುಂದೆ ಮಸೂದೆಯನ್ನು ತಂದು ನಮ್ಮಿಂದಲೇ ಪಾಸು ಮಾಡಿಸಿಕೊಳ್ಳುತ್ತಾರೆಂದು ನಂಬಿದ್ದೇನೆ.

ಇನ್ನು ಪರಿಹಾರ ಕೊಡುವಾಗ ಹೇಗೆ ಕೊಡಬೇಕು ಯಾವಾಗ ಕೊಡಬೇಕು ಎಂಬ ವಿಷಯವಾಗಿ ಶ್ರೀಮಾನ್ ಚನ್ನಬಸಪ್ಪನವರು ಹೇಳಿದರು. ಜಮೀನನ್ನು ಯಾರಿಂದ ಕಿತ್ತುಕೊಳ್ಳುತ್ತೀರೋ ಅವರಿಗೆ ತಕ್ಷಣ ಪರಿಹಾರ ಕೊಡಬೇಕು. ಅದು ಬಿಟ್ಟು ಸರ್ಟಿಫಿಕೇಟ್‌ಗಳನ್ನು ಕೊಟ್ಟರೆ ಅದರ ಮೇಲೆ ಜೇನು ಹಾಕಿ ನೆಕ್ಕಬೇಕೆ! ಲ್ಯಾಂಡ್ ಬ್ಯಾಂಕ್ ಸ್ಥಾಪನೆಮಾಡಬೇಕು, ನ್ಯಾಯವಾಗಿ ಜಮೀನ್‌ದಾರರಿಂದ ಜಮೀನನ್ನು ಕಿತ್ತುಕೊಂಡರೆ ಅದಕ್ಕೆ ನಿಗದಿ ಮಾಡುವ ಪರಿಹಾರವನ್ನು ತಕ್ಷಣ ಅವರಿಗೆ ಕೊಡಬೇಕು. ಆಗ ಇದು ಒಳ್ಳೆಯ ಕಾಯಿದೆಯಾಗುತ್ತದೆ. ಆಗ ಜನರು ತಮ್ಮ ಜಮೀನನ್ನು ಕಿತ್ತುಕೊಂಡರೂ ಹಣವನ್ನು ತಕ್ಷಣ ಕೊಟ್ಟರು ಎಂದು ಸಮಾಧಾನಪಡುತ್ತಾರೆ.

ಶ್ರೀ ಎಫ್. ಎಕ್ಸ್. ಡೆನಿಸ್‌ಪಿಂಟೊ (ಕೌಪ್).—ಪರಿಹಾರ ಎಷ್ಟು ಕೊಡಬೇಕು ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಜಮೀನನ್ನು ತೆಗೆದುಕೊಂಡರೆ ಅದಕ್ಕೆ ಪರಿಹಾರ ಕೊಡಬೇಕು. ಆದರೆ ಒಂದು ವಿಷಯವನ್ನು ಗಮನಿಸಬೇಕು. ಹೆಂಚಿನ ಕಾರ್ಖಾನೆಯಲ್ಲಿ ಕೆಲಸ ಮಾಡುವವರು ಕೂಡ ಆ ಕಾರ್ಖಾನೆಯ ಮಾಲೀಕರೇ ಎನ್ನುವುದನ್ನು ಮರೆಯಬಾರದು. ದೇಶವನ್ನು ಕಟ್ಟಬೇಕು, ದೇಶದಲ್ಲಿರುವ ಬಡತನವನ್ನು ಹೋಗಲಾಡಿಸಿ, ಎಲ್ಲರನ್ನೂ ವಿದ್ಯಾವಂತರನ್ನಾಗಿ ಮಾಡಬೇಕೆಂದು ಶ್ರೀಮಂತರು ಮನಸ್ಸು ಮಾಡಬೇಕು. ತಮ್ಮಂತೆಯೇ ಎಲ್ಲರೂ ಮೋಟಾರಿನಲ್ಲಿ ತಿರುಗಲಿ ಎಂಬ ಮನೋಭಾವ ಅವರಲ್ಲಿ ಬರಬೇಕು. ಆ ದೊಡ್ಡ ಮನಸ್ಸು ಬಾರದೇ ಹೋದರೆ, ಅವರು ದೊಡ್ಡ ಕುಲಾವಿ ಹಾಕಿಕೊಂಡು ಕಾರುಗಳನ್ನು ಬಿಟ್ಟುಕೊಂಡು ಹೋಗುವವರನ್ನು ನೋಡಿದರೆ ಬಡವರಿಗೆ ಹೊಟ್ಟೆ ಉರಿಯುತ್ತದೆ. ನಿಜವಾಗಿಯೂ ಬಡವರ ವಿಷಯದಲ್ಲಿ ಶ್ರೀಮಂತರ ಮನೋಭಾವ ಬದಲಾವಣೆಯಾಗಬೇಕು. ಹಾಗಿಲ್ಲದಿದ್ದರೆ ಮಹಾತ್ಮಾ ಗಾಂಧಿ ಹೇಳಿದ ರಾಮರಾಜ್ಯ, ಆವಡಿ ಕಾಂಗ್ರೆಸ್ ಅಧಿವೇಶನದಲ್ಲಿ ಘೋಷಿಸಿದ ಸೋಷಿಯಲಿಸ್ಟಿಕ್ ಪ್ಯಾಟರ್ನ್ ಸೊಸೈಟಿ ಯಾವುದೂ ಕಾರ್ಯಗತವಾಗುವುದಿಲ್ಲ. ಇವೆಲ್ಲವೂ ಬರಿಯ ನಾಟಕವಾಗುತ್ತದೆ. ಇದನ್ನು ಮೊದಲು ಕಾರ್ಯಗತ ಮಾಡಲಿ. ಕಾಫಿ, ಅಡಿಕೆ, ತೆಂಗು, ಏಲಕ್ಕಿ ತೋಟಗಳಿಗೆ ವಿನಾಯಿತಿ ಕೊಡಿ ಎಂದು ವಾದ ಮಾಡುತ್ತಾರೆ. ಈರೀತಿ ಮಾಡಬಾರದು. ಇಂಥಾ ತೋಟಗಳನ್ನು ರಾಷ್ಟ್ರೀಕರಣ ಮಾಡಲಿ. ಶ್ರೀಮಾನ್ ಬಸವೇಗೌಡರಿಗೆ ಮಾತ್ರ ಏಕೆ ಐಶ್ವರ್ಯ ? ಇವರಿಗೆ ಬೂಟುಗಳಿಗೆ ಪಾಲಿಷ್ ಹಾಕುವವರು ಬೇಕು, ಪಾತ್ರೆ ತೊಳೆಯುವವರು ಬೇಕು, ಕಾಲಿಗೊಬ್ಬರು ಕೈಗೊಬ್ಬರು ಸೇವಕರು ಬೇಕು. ಬಡರೈತನ ಹೆಂಡತಿ ಬೆಳಗಿನಿಂದ ಸಂಜೆಯವರಿಗೆ ಹೊಲದಲ್ಲಿ ಕೆಲಸ ಮಾಡಿ, ರಾತ್ರಿ ಒಂಭತ್ತು ಗಂಟೆಗೆ ಬಂದು ಒಲೆ ಹಚ್ಚಿ ಅಡಿಗೆ ಮಾಡಿ ಗಂಡ ಮಕ್ಕಳಿಗೆ ಬಡಿಸಿ ತಾನು ತಿನ್ನಬೇಕು. ಶ್ರೀಮಂತರಿಗಾದರೋ ಬಟ್ಟೆ ಹಾಕುವುದಕ್ಕೊಬ್ಬ, ಬಟ್ಟೆ ಬಿಚ್ಚುವುದಕ್ಕೊಬ್ಬ ಸೇವಕರಿರಬೇಕು. ಇದನ್ನು ಶ್ರೀಮಂತರು ಯೋಚನೆ ಮಾಡಬೇಕು. ಕಾಫಿ ಪ್ಲಾಂಟೇಷನ್‌ಗೆ ಕೊಟ್ಟಿರುವ ವಿನಾಯಿತಿಯನ್ನು ತೆಗೆಯಬೇಕು. ರೋಡ್ ಟ್ರಾನ್ಸ್‌ಪೋರ್ಟ್ ರಾಷ್ಟ್ರೀಕರಣ ಮಾಡುತ್ತಾರೆ, ಕಾರ್ಖಾನೆಗಳನ್ನೆಲ್ಲಾ ರಾಷ್ಟ್ರೀಕರಣ ಮಾಡುತ್ತಾರೆ ಕಾಫಿ ಎಸ್ಟೇಟ್‌ಗಳನ್ನೇಕೆ ಮಾಡಬಾರದು ? ಇದಕ್ಕೆ ಧೈರ್ಯವಿಲ್ಲದೇಯಿರುವಾಗ ಅಡಕೆ, ತೆಂಗಿನ ತೋಟಗಳ ಮೇಲೇಕೆ ಕಣ್ಣು ? ಅಡಕೆ ತೆಂಗಿನ ತೋಟದ ಉತ್ಪತ್ತಿ ಕಾಫಿ ತೋಟಕ್ಕಿಂತ ಕಡಮೆ. ಸಸಿಗಳಿಗೆ ಗೊಬ್ಬರ ನೀರು ಹಾಕಿ ಕಾಪಾಡಿದರೆ ಅಡಕೆ ಫಸಲು ಬರುವುದಕ್ಕೆ ಹನ್ನೆರಡು ವರ್ಷ ಕಾಯಬೇಕು. ಇದರ ಮೇಲೇಕೆ ಕಣ್ಣು ? ಎಷ್ಟು ಅಡಕೆ ತೆಂಗಿನ ತೋಟವಿದೆ! ಒಂದು ಹಂಡ್ರೆಡ್‌ವೇಟ್ ಕಾಫಿಗೆ 200 ರೂಪಾಯಿ ಬರುತ್ತದೆ, ಡಾಲರ್ ಸಂಪಾದನೆಯಾಗುತ್ತದೆ ಎಂದು ವಾದ ಮಾಡಿದರು. ರಾಗಿ, ಅಡಕೆ, ಈರುಳ್ಳಿ, ಕೊತ್ತಂಬರಿ, ಇವುಗಳಲ್ಲಿ ಯಾವುದು ಬೇಡ ? ಎಲ್ಲವೂ ಬೇಕು. ಎಂದ ಮೇಲೆ ಅಡಿಕೆ ಮತ್ತು ತೆಂಗಿನ ತೋಟದವರ ಮೇಲೆ ಏಕೆ ಕಣ್ಣು ? ಅವುಗಳಲ್ಲಿ ಟೆನೆಂಟ್ಸ್ ಇರುತ್ತಾರೆ ಆದಕಾರಣ ಅವಕ್ಕೆ ಈ ಸೀಲಿಂಗ್ ಅನ್ವಯಿಸುವುದಿಲ್ಲ ಎಂದು ವಾದಿಸುತ್ತಾರೆ ಇದು ಸರಿಯಲ್ಲ. ಕಾಫಿ ತೋಟವನ್ನು ರಾಷ್ಟ್ರೀಕರಣ ಮಾಡಲಿ. ಮಾಲೀಕರಿಗೆ ಕೊಡತಕ್ಕ ಪರಿಹಾರವನ್ನು ಹತ್ತು ಹನ್ನೆರಡು ವರ್ಷಗಳಲ್ಲಿ ಕೊಡಲಿ. ಅದು ಬಿಟ್ಟು, 'ಒಂದು ಕಣ್ಣಿಗೆ ಬೆಣ್ಣೆ ಇನ್ನೊಂದು ಕಣ್ಣಿಗೆ ಸುಣ್ಣ' ಎನ್ನುವ ಹಾಗೆ ಮಾಡಬಾರದು. ಪ್ಲಾನಿಂಗ್ ಕಮಿಷನವರು ಅಡಕೆ ತೋಟಗಳಿಗೆ ಹೋಗಿ ನೋಡಿದರು. ಕೊಂತಗೋಡು ನಾಗಭೂಷಣ ಭಟ್ಟರು ಅವರನ್ನು ಭೇಟಿ ಮಾಡಿ ಇದರ ಕಷ್ಟ ಸುಖಗಳನ್ನು ತಿಳಿಸಿದರು. ನಿಮಗೂ ವಿನಾಯಿತಿ ಕೊಟ್ಟಿದ್ದೇವೆಂದು ಅವರು ಹೇಳಿದರು. ಪ್ಲಾನಿಂಗ್ ಕಮಿಷನವರೂ yield ಆಗಬೇಕು. ಭಗವಂತನಂಥವನೇ yield ಆಗುತ್ತಾನೆ. ಬೇಡರ ಕಣ್ಣಪ್ಪನಿಗೆ ಒಲಿಯಲಿಲ್ಲವೆ ? ಕಾಫಿ ತೋಟದವರು ಕಾಂಗ್ರೆಸ್ ಚಳುವಳಿಯಲ್ಲಿ ಸಹಾಯ ಮಾಡಿದ್ದೇವೆಂದು, ಅವರಿಗೆ ವಿನಾಯಿತಿ ತೋರಿಸುತ್ತೇವೆಂದು ಒಪ್ಪಿದ್ದಾರೆಂದು ಹೇಳಿದರು. ಭೂಸುಧಾರಣೆ ಮಾಡುವಾಗ ಈ ಎಲ್ಲವನ್ನೂ ಜ್ಞಾಪಕದಲ್ಲಿಟ್ಟುಕೊಂಡು, ಕರಡು ಮಸೂದೆ ಬಂದಾಗ ಮತ್ತೆ ವಿಮರ್ಶೆ ಮಾಡುತ್ತೇವೆ.

5 P.M.

ಇದರಲ್ಲಿ ಒಂದು ತತ್ವ ಅಡಕವಾಗಿದೆ. ಆದ್ದರಿಂದ ಎಲ್ಲರೂ ಇದನ್ನು ಒಪ್ಪತಕ್ಕದ್ದು. ಬೇಗನೇ ಅನುಷ್ಠಾನಕ್ಕೆ ತರಬೇಕು. ಭೂ ಸುಧಾರಣೆ ನಮ್ಮ ಕಾಲದಲ್ಲಿ ಆಯಿತೆಂದು ಹೇಳುವ ಹಾಗೆ ಆಗಲಿ. ಇದೇ ಅಧಿವೇಶನದಲ್ಲಿಯೇ ಈ ಕಾನೂನು ಪಾಸು ಆಗಿ ಜಾರಿಯಲ್ಲಿ ಬರಲಿ. ದೇಶದಲ್ಲಿ ಇರುವ ಕಾಫಿ ತೋಟಗಳನ್ನು ರಾಷ್ಟ್ರೀಕರಣ ಮಾಡಬೇಕು, ಇದರಿಂದ ದೇಶಕ್ಕೆ ಒಳ್ಳೆಯದಾಗುತ್ತದೆ. ಇದೇ ಬಡ್ಜೆಟ್ ಅಧಿವೇಶನದಲ್ಲಿ ಈ ಮಸೂದೆ ಸಭೆಯ ಒಪ್ಪಿಗೆ ಪಡೆಯುತ್ತದೆಂದು ನಾನು ಭಾವಿಸುತ್ತೇನೆ. ಇಷ್ಟು ಹೇಳಿ ನನಗೆ ಮಾತನಾಡಲು ಅಧ್ಯಕ್ಷರು ಅವಕಾಶ ಕೊಟ್ಟಿದ್ದಕ್ಕೆ ಅವರನ್ನು ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಟಿ. ಎನ್. ಮುದಲಗಿರಿಗೌಡ (ಕುಣಿಗಲ್).—ಮಾನ್ಯ ಸಭಾಪತಿಗಳೆ, ಈ ಸಭೆಯಲ್ಲಿ ನಮ್ಮ ಮುಂದೆ ಈಗ ಇರತಕ್ಕ ಜಂಟಿ ಸಮಿತಿ ವರದಿಯ ಮೇಲೆ ಬಹಳ ವಿಶದವಾಗಿ ಇಲ್ಲಿ ಚರ್ಚೆ ನಡೆಯಿತು. ಅದರಲ್ಲಿಯೂ ಸಹ ಈಗ ತಾನೆ ಮಾತನಾಡಿದ ಮಾನ್ಯ ಮಿತ್ರರಾದ ಶ್ರೀ ಮುಕ್ಕಣ್ಣಪ್ಪನವರು ಬಹಳ ದೊಡ್ಡ ದೊಡ್ಡ ಪದಗಳನ್ನು ಪಯೋಗಿಸಿ ಹೇಳಿದರು. ಅವರ ಭಾಷಣ ವನ್ನು ಪೂರ್ತಿಯಾಗಿ ನಾನು ಒಪ್ಪಿಕೊಳ್ಳು ವುದಕ್ಕೆ ಸಿದ್ಧನಾಗಿಲ್ಲದಿದ್ದರೂ ಕೂಡ ಅವರು ಜರೂರಾಗಿ ಒಂದು ಕಾನೂನನ್ನು ತರುವ ಹಾಗೆ ಏರ್ಪಾಡು ಮಾಡಬೇಕು ಎಂದು ಹೇಳಿದ್ದು ಬಹಳ ಸಂತೋಷ. ಎಲ್ಲರಿಗೂ ಬೇಕಾದುದು ಅದೇ. ಸರ ಕಾರದವರು ಈ ಕಮಿಟಿಯನ್ನು ನೇಮಕ ಮಾಡುವಾಗ ಇನ್ನೂ ಸ್ವಲ್ಪ ವಿಸ್ತಾರವಾಗಿ ಮಾಡಿದ್ದರೆ ಚೆನ್ನಾಗಿತ್ತು ಎಂದು ನನಗೆ ಅನಿಸುತ್ತದೆ. ವ್ಯವಸಾಯದಲ್ಲಿ ಸಂಪೂರ್ಣ ಅನುಭವ ಪಡೆದಂಥಾ ಸದಸ್ಯರು ಇನ್ನೂ ಹೆಚ್ಚಿಗೆ ಈ ಕಮಿಟಿಯಲ್ಲಿದ್ದರೆ ಚೆನ್ನಾಗಿತ್ತೆಂದು ನನಗೆ ಅನಿಸುತ್ತದೆ. ಹೊಸ ಪ್ರಾಂತ ರಚನೆಯಾದ ಮೇಲೆ ನಮ್ಮ ಮುಂದೆ ಇರತಕ್ಕ ಇದೊಂದು ಬಹಳ ತೀವ್ರ ವಾದ ಸಮಸ್ಯೆಯಾಗಿದೆ. ಹೊಸ ರಾಜ್ಯದಲ್ಲಿ ಸೇರ್ಪಡೆ ಯಾದ ಐದು ಪ್ರದೇಶಗಳಲ್ಲಿ ಬೇರೆ ಬೇರೆ ರೀತಿಯ ಗೇಣಿ ಶಾಸನ ಜಾರಿಯಲ್ಲಿದೆ. ಒಂದೊಂದು ಪ್ರದೇಶ ದಲ್ಲಿ ಒಂದೊಂದು ಬಗೆಯ ಗೇಣಿ ಶಾಸನವಿದೆ, ಅವೆಲ್ಲ ವನ್ನೂ ಬೇರೆ ಬೇರೆಯಾಗಿಯೇ ಅನುಷ್ಠಾನಕ್ಕೆ ತರು ವುದು ಸಾಧ್ಯವಿಲ್ಲದೆ ತೊಂದರೆ ಉದ್ಭವವಾಗಿರುವ ಕಾರಣದಿಂದ, ಎಲ್ಲವನ್ನೂ ಸಮನ್ವಯ ಗೊಳಿಸಿ ಒಂದೇ ತರದ ಕಾನೂನು ಎಲ್ಲಾ ಕಡೆಗೂ ಇರುವ ಹಾಗೆ ಮಾಡಲು, ಈ ವಿಷಯವನ್ನು ಸಂಪೂರ್ಣವಾಗಿ ಪರಿ ಶೀಲಿಸಿ ಸಲಹೆ ಮಾಡಲು, ಜರೂರಾಗಿ ಈ ಕಮಿಟಿ ಯನ್ನು ರಚನೆಮಾಡತಕ್ಕಂಥಾ ಅವಶ್ಯಕತೆ ಬಂತು, ಈ ಸಮಯದಲ್ಲಿ ಕಮಿಟಿಯವರು ಭೂ ಸುಧಾರಣೆಯ ವಿಷಯವನ್ನೂ ಕೂಡ ಪ್ರಸ್ತಾಪ ಮಾಡಿದ್ದಾರೆ. ಇಲ್ಲಿ ಇರತಕ್ಕಂಥಾ ಸಮಸ್ಯೆ ಎರಡು ಬಗೆಯದಾಗಿದೆ. ಗೇಣೀದಾರರ ಸಮಸ್ಯೆಯು ಒಂದು, ಭೂ ಸುಧಾರಣೆ ಒಂದು. ನಾವು ಗೇಣಿದಾರರ ಸಮಸ್ಯೆಯನ್ನು ಸಂಪೂರ್ಣವಾಗಿ ಬಗೆಹರಿಸಿದ್ದಾದರೆ ಉಳಿಯ ತಕ್ಕಂಥಾದ್ದು ಭೂ ಸಮಸ್ಯೆ ಅಷ್ಟೇ. ಭೂ ಸಮಸ್ಯೆ ಎಷ್ಟು ಭಾಗ ಉಳಿಯುತ್ತದೆ ಎಂಬುದನ್ನು ನಾವು ಈಗ ಪರಿಶೀಲನೆ ಮಾಡಬೇಕಾಗಿದೆ. ಭೂ ಸಮಸ್ಯೆ ಯನ್ನು ಪರಿಶೀಲನೆ ಮಾಡುವಾಗ, ಈಗಾಗಲೇ ಮಾತ ನಾಡಿದ ಶ್ರೀ ಚನ್ನಬಸಪ್ಪನವರು ಮತ್ತು ಇತರ ಸ್ನೇಹಿತರು ಹೇಳಿರುವ ಹಾಗೆ ಸರಕಾರದ ಜವಾಬ್ದಾರಿ ಎಷ್ಟರಮಟ್ಟಿಗೆ ಇದೆ ಎಂಬುದನ್ನು ಆಲೋಚನೆ ಮಾಡ ಬೇಕಾಗಿದೆ. ಭೂ ಸುಧಾರಣೆ ವಿಮರ್ಶೆ ಮಾಡು ವಾಗ ಇದರೊಂದಿಗೆ ಯಾವ ಯಾವ ಇತರ ಸಮಸ್ಯೆ ಗಳನ್ನು ನಾವು ಬಗೆಹರಿಸುವುದು ಸಾಧ್ಯವಿದೆ ಎಂಬು ದನ್ನು ನಾವು ಯೋಚಿಸಬೇಕಾಗಿದೆ. ತಮ್ಮ ಜೀವನಾ ಧಾರಕ್ಕೆ ಭೂಮಿಯನ್ನೇ ನಂಬಿಕೊಂಡಿರತಕ್ಕಂಥವರಿಗೆ ಸಾಗುವಳಿಗೆ ಭೂಮಿಯನ್ನು ಒದಗಿಸಿಕೊಡತಕ್ಕದ್ದು ಅವಶ್ಯಕ. ಭೂಮಿಯ ಮೇಲೆಯೇ ಅವಲಂಬಿಸಿ ಇರತಕ್ಕಂಥವರಿಗೆ ಅದೊಂದು ಜೀವನಾಧಾರದ ಮಾರ್ಗ ವಾಗುವಂತೆ ಒಂದು ತರಹದ relief ಸಿಗುವ ಹಾಗೆ ಮಾಡುವುದು ನ್ಯಾಯ. ಗೇಣೀದಾರರ ಸಮಸ್ಯೆಯನ್ನು ಸಂಪೂರ್ಣವಾಗಿ ಬಗೆಹರಿಸುವುದಾದರೆ ಸಾಮಾನ್ಯ ವಾಗಿ ಭೂ ಸಮಸ್ಯೆ ವಿಷಯ ಅಷ್ಟು ಕಷ್ಟವಾಗುವು ದಿಲ್ಲ. ಈಗ ಇರತಕ್ಕಂಥಾದ್ದು ಬರೀ ಗೇಣಿದಾರರ ಸಮಸ್ಯೆಯೇ ಹೆಚ್ಚಾಗಿದೆ. ಈ ಗೇಣಿದಾರರ ಸಮಸ್ಯೆ ಯನ್ನು ಬಿಟ್ಟುಬಿಟ್ಟರೆ, ಉಳಿಯುತಕ್ಕಂಥಾದ್ದು ಯಾರು ಎಷ್ಟು ಜಮೀನು ಇಟ್ಟುಕೊಂಡಿದ್ದಾರೆ? ಬರೀ ಜಮೀ ನಿನ ಮೇಲೆಯೇ ಅವರು ತಮ್ಮ ಆಶೋತ್ತರಗಳನ್ನು ಇಟ್ಟುಕೊಂಡಿದ್ದಾರೆಯೆ? ಹೆಚ್ಚಾಗಿ ಇರತಕ್ಕ ಜಮೀ ನನ್ನು ಹೇಗೆ ವಶಪಡಿಸಿಕೊಳ್ಳಬೇಕು? ಸೀಲಿಂಗ್ ಎಷ್ಟು ಹಾಕಬೇಕು? ಯಾವ ಮಾರ್ಗ ಹಿಡಿದು ಈ ಸಮಸ್ಯೆಯನ್ನು ಬಗೆಹರಿಸಬೇಕು ಎಂಬುದು ಒಂದೇ ಉಳಿಯತಕ್ಕದ್ದು ಆಗಿದೆ. ನನ್ನ ಆಲೋಚನೆಯಲ್ಲಿ ಗೇಣೀ ಸಮಸ್ಯೆಯನ್ನು ಬಗೆಹರಿಸಲು ಗೇಣೀ ಕಾನೂನನ್ನು ಜಾರಿಗೆ ತಂದು, ಹೆಚ್ಚಾಗಿ ಯಾರು ಗೇಣಿ ಮಾಡಿಕೊಂಡು ಜೀವನ ನಡೆಸತಕ್ಕಂಥವರೋ ಅಂಥ ಜನರಿಗೆ ಹೆಚ್ಚಾಗಿ ತೊಂದರೆಯಾಗದ ಹಾಗೆ ರಿಲೀಫ್ ಏರ್ಪಾಡು ಮಾಡಿದರೆ, ಖಾತ್ರಿಯಾಗಿ ಈ ಸಮಸ್ಯೆ ಬಹಳ ಕಡಿಮೆಯಾಗುತ್ತದೆ. ಹೀಗೆ ಮಾಡು ವುದಕ್ಕೆ ಮೊದಲು ನಾವು ಈ ವಿಷಯವನ್ನು ಪರ್ಯಾ ಲೋಚನೆ ಮಾಡೋಣ. ಯಾರು ವಿಶೇಷವಾಗಿ ಜಮೀನು ಅವಲಂಬಿಸಿಕೊಂಡು ಉಳುಮೆ ಮಾಡು ತ್ತಾರೋ ಅಂಥವರು ಅದನ್ನು ಮುಂದುವರಿಸಿಕೊಂಡು ಹೋಗುವಂತೆ ಈ ಭೂ ಸಮಸ್ಯೆಯಿಂದ ಯಾವ ರೀತಿ ಯಾದರೂ ತಾತ್ಕಾಲಿಕ ರಿಲೀಫ್ ಸಿಗಬೇಕು, ವಿಶೇಷ ವಾದ ಸೌಲಭ್ಯಗಳು ಸಿಗಬೇಕು. ಈ ಭೂ ಸಮಸ್ಯೆ ಯನ್ನು ಕೂಡ ಇದರ ಜೊತೆಗೆ ಸೇರಿಸುವುದರಿಂದ ಸಾಧ್ಯವಾಗಲಾರದು. ಯಾಕೆಂದರೆ ಜಾಗ್ರತೆ ಅಂಥವ ರಿಗೆ relief ಸಿಕ್ಕುತ್ತದೆಯೇ ಎಂಬುದಕ್ಕೆ ಅನುಮಾನ ಬರುತ್ತದೆ. ಇದನ್ನು ಸರಕಾರ ಯೋಚನೆ ಮಾಡ ಬೇಕು. ಸಮಿತಿಯ ವರದಿಯಲ್ಲಿ ಸೀಲಿಂಗ್‌ನ ವಿಷಯ ಪ್ರಸ್ತಾಪ ಮಾಡಿದ್ದಾರೆ. ಪ್ರತ್ಯಕ್ಷ ಅಥವಾ ಅಪ್ರತ್ಯಕ್ಷ ವಾಗಿ ದೇಶದಲ್ಲಿ agitation ಪ್ರಾರಂಭವಾಗುತ್ತ ದೆಂದು ಕೆಲವರು ಹೇಳಿದ್ದಾರೆ. ಮಾತನಾಡಿದ ಅನೇಕ ಮಾನ್ಯ ಸದಸ್ಯರು, ಜಮೀನುದಾರರಿಗೆ ಅನುಕೂಲ ಮಾಡಿಕೊಡಲು ಸೀಲಿಂಗ್ ಏರ್ಪಾಡುಮಾಡಿದ್ದಾರೆಂದು ಒಂದು ವಾದ ಮಾಡಿದ್ದಾರೆ. ಅನುಕೂಲ ಅಥವಾ ಅನಾನುಕೂಲ ಇದೊಂದು ಬೇರೆ ವಿಷಯ, ಸೀಲಿಂಗ್ ಹಾಕಿದರೆ ಮಾನಸಿಕ ಪರಿಣಾಮವೇನಾದರೂ ಆಗು ತ್ತದೆಯೇ? ಹಾಗಾದರೆ ಜೀವನ ಹೇಗೆ ಮಾಡುವುದು? ನಮಗೆ ಜಮೀನಿನ ಮೇಲೆ ಆಸಕ್ತಿ ಯಾವಾಗ ಉಂಟಾ ಗಿದೆ? ಇತ್ತೀಚೆಗೆ 10-15 ವರ್ಷಗಳಲ್ಲಿ ಆಸಕ್ತಿ ಹೆಚ್ಚಾಗಿದೆ. 1945ನೇ ಇಸವಿಯ ಹಿಂದೆ ಜಮೀನು ಕೊಳ್ಳತಕ್ಕವರು ಇರಲಿಲ್ಲ. ಜಮೀನಿನಿಂದ ಬರತಕ್ಕ ಉತ್ಪತ್ತಿ ಹೆಚ್ಚಾಗಿ ಜಮೀನಿನ ಬೆಲೆ ಹೆಚ್ಚಾಗಿರುವುದ ರಿಂದ ಜಮೀನಿನ ಮೇಲೆ ಆಶೆ ಇಟ್ಟುಕೊಂಡದ್ದು ಸಂತೋಷ. ಹೀಗೆ ಇರುವುದರಿಂದ ಎಷ್ಟು ಜನರಿಗೆ ಪ್ರಯೋಜನವಾಗುತ್ತದೆ? Relief ಸಿಗುತ್ತದೆಯೇ ಎಂಬುದನ್ನು ಯೋಚನೆ ಮಾಡಬೇಕಾಗಿದೆ ಸೀಲಿಂಗ್ ಹಾಕುವುದಕ್ಕೆ ಮುಂಚೆ ಸರಕಾರದ ಜವಾಬ್ದಾರಿ ಏನು ಇದೆ ಎಂಬುದನ್ನು ಶ್ರೀ ಚನ್ನಬಸಪ್ಪನವರು ಚೆನ್ನಾಗಿ ಹೇಳಿದ್ದಾರೆ. ದೇಶದಲ್ಲಿ ಉಳುಮೆ ಮಾಡುವುದಕ್ಕೆ ಲಾಯಕ್ ಇರುವ ಜಮೀನು 50-55 ಲಕ್ಷ ಎಕರೆ ಯಷ್ಟು ಆಗಿದೆಯೆಂದು ಅವರು ಅಂದಾಜು ಮಾಡಿ ದ್ದಾರೆ. ಸಾಗುವಳಿಗೆ ಲಾಯಕ್ ಇರುವ ಜಮೀನನ್ನು ಜಮೀನು ಇಲ್ಲದ ರೈತರಿಗೆ ಹಂಚತಕ್ಕದ್ದರಲ್ಲಿ ಪ್ರಯೋ ಜನವಿದೆ. ಈ ಕೆಲಸವನ್ನು ಸರಕಾರವು ಮಾಡ ಬೇಕಾಗಿತ್ತು. ಆದರೆ ಮಾಡಲಿಲ್ಲ.

ಇವೊತ್ತಿನ ದಿವಸ ಯಾವ ಕಡೆಯಲ್ಲಿ ಹೋದರೂ ಜೀವನ ನಡೆಸಲು, ನಾವು ಉಳಬೇಕು, ವ್ಯವಸಾಯ ಮಾಡಬೇಕು, ಆದ್ದರಿಂದ ಜಮೀನು ಕೊಡಿ ಎಂದು ಜನಗಳು ಕೇಳಿದರೆ ಜಮೀನು ಹಂಚಿಹೋಗಿದೆ, ಕೊಡ

(ಶ್ರೀ ಟಿ. ಎನ್. ಮೂಡಲಗಿರಿಗೌಡ)

ವುದಕ್ಕೆ ಜಮೀನಿಲ್ಲ ಎನ್ನುವ ಪರಿಸ್ಥಿತಿಗೆ ಬಂದಿಲ್ಲ, ಇವೊತ್ತು ಭೂ ಸಮಸ್ಯೆ ಇರುವುದು ಎಲ್ಲಿ ಎಂದರೆ ಎಲ್ಲೆಲ್ಲಿ ನೀರಾವರಿ ಪ್ರದೇಶಗಳಿವೆಯೋ ಎಲ್ಲೆಲ್ಲಿ ವಿಶೇಷವಾಗಿ ತರೀ ವ್ಯವಸಾಯ ಮಾಡತಕ್ಕ ಭೂಮಿ ಇದೆಯೋ ಅಲ್ಲಿ ಮಾತ್ರ. ಈ ಭಾಗಗಳಲ್ಲಿ ಮಾತ್ರ ಇಂಥ ಪರಿಸ್ಥಿತಿ ಉದ್ಭವವಾಗತಕ್ಕದ್ದು. ಖುಷ್ಕಿ ಜಮೀನು ಇರುವ ಕಡೆ ವರ್ಷದಲ್ಲಿ ಮಳೆ ಬಂದರೆ ಬಂತು, ಹೋದರೆ ಹೋಯಿತು, ಇಂಥ ಪರಿಸ್ಥಿತಿಯಿರುವುದರಿಂದ ಅಂಥ ಕಡೆ ಯಾವ ಸಮಸ್ಯೆಯೂ ಇಲ್ಲ. ಯಾವ ಭಾಗವನ್ನು ತೆಗೆದುಕೊಂಡರೂ ಕೂಡ ಅವರಿಗೆಲ್ಲ ಅನುಕೂಲಗಳನ್ನು ಏರ್ಪಾಡು ಮಾಡಿದ್ದಾರೆ. ಕಾರ್ಖಾನೆಗಳು, ಕೈಗಾರಿಕೆಗಳು, ಹೀಗೆ ಯಾವುದನ್ನು ತೆಗೆದುಕೊಂಡರೂ ಅಲ್ಲೆಲ್ಲ ಅನುಕೂಲ ಮಾಡಿದ್ದಾರೆ. ಇವೊತ್ತಿನ ದಿವಸ ನಮ್ಮ ರಾಜ್ಯದಲ್ಲಿ ತುಂಗಭದ್ರ ಪ್ರಾಜೆಕ್ಟ್ ಇದೆ. ಈಗಾಗಲೇ ಈ ಸಭೆಯಲ್ಲಿ ಚರ್ಚೆಯಾಗಿರುವ ರೀತಿಯಲ್ಲಿ ಎಷ್ಟು ಎಕರೆ ಜಮೀನು ಸಾಗುವಳಿಯಾಗಿದೆ, ಎಷ್ಟು ಎಕರೆ ಜಮೀನು ಹಾಗೆಯೇ ಬಂಜರ್ ಬಿದ್ದಿದೆ ಎಂದು ವ್ಯಕ್ತಪಟ್ಟಿದೆ. ಇದನ್ನೆಲ್ಲ ನೋಡಿದರೆ ಜಮೀನು ಬೇಕು ಎನ್ನುವವರು ಅಲ್ಲಿಗೆ ಏಕೆ ಹೋಗುತ್ತಿಲ್ಲ ? ಅದಕ್ಕೆ ಕಾರಣವಿದೆ. ಯಾರಿಗೆ ಜಮೀನಿನ ಮೇಲೆ ಆಸೆ ಇದೆ, ಉಳುಮೆ ಮಾಡಿ ಅದರಿಂದ ಜೀವಿಸಬೇಕೆಂಬ ಆಸೆ ಇದೆ, ಅವರೆಲ್ಲ ತುಂಗಭದ್ರದ ಕಡೆ ಹೋಗಬಹುದು ಅಥವಾ ಮಲೆನಾಡಿನ ಕಡೆ ಹೋಗಬಹುದು. ಇದಕ್ಕೆ ಒಂದು ತೊಂದರೆ ಇದೆ. ಸರ್ಕಾರದವರು ಇತರೆ ಸೆಕ್ಟರ್‌ಗಳಲ್ಲಿ ಏನೇನು ಸೌಲಭ್ಯಗಳನ್ನು ಒದಗಿಸಿ ಕೊಟ್ಟಿದ್ದಾರೆ, ಆ ಸೌಲಭ್ಯಗಳನ್ನೆಲ್ಲ ವ್ಯವಸಾಯಗಾರನಿಗೂ ಕೂಡ ಕೊಟ್ಟಿದ್ದೇ ಆದರೆ ಅವರು ಸಾವಿರಾರು ಮೈಲಿಗಳ ದೂರ ಹೋಗುವುದಕ್ಕೆ ತಯಾರಾಗಿದ್ದಾರೆ. ವ್ಯವಸಾಯಗಾರನಿಗೆ ಎತ್ತುಗಳು, ಮನೆ, ವಿದ್ಯಾಭ್ಯಾಸ, ವೈದ್ಯಸಹಾಯ ಮುಂತಾದ ಸೌಲಭ್ಯಗಳನ್ನೊದಗಿಸದೆ ಜಮೀನಿರುವ ಕಡೆ ಹೋಗಿ ವ್ಯವಸಾಯ ಮಾಡು ಎಂದರೆ, ಯಾರೂ ಹೋಗುವುದಿಲ್ಲ. ಜಮೀನಿನ ಅಕ್ಕಪಕ್ಕದ ಪ್ರಾಂತದಲ್ಲಿರುವವರು ಸಹ ಅಲ್ಲಿಗೆ ಹೋಗುವುದಿಲ್ಲ. ವ್ಯವಸಾಯಗಾರನಿಗೆ ವಿಶೇಷವಾದ ಸೌಲಭ್ಯಗಳನ್ನುಂಟುಮಾಡುವುದರ ಬಗ್ಗೆ ಗಮನ ಕೊಡಬೇಕು.

ಇವೊತ್ತಿನ ದಿವಸ ಪ್ಲಾನಿಂಗ್ ಕಮಿಷನ್‌ನವರಾಗಲೀ, ಸರ್ಕಾರದವರಾಗಲೀ, ಯಾರೇ ಆಗಲೀ ಹೇಳುವುದು ನಮ್ಮ ದೇಶದಲ್ಲಿ ಆಹಾರೋತ್ಪತ್ತಿ ಹೆಚ್ಚು ಮಾಡಬೇಕು ಎಂಬುದೇ ಆಗಿದೆ. ಇದೇ ನಮ್ಮ ಮುಖ್ಯ ಗುರಿ. ಇದನ್ನು ಮಾಡಲು ಯಾವ ಯಾವ ಸೌಲಭ್ಯಗಳನ್ನು, ಯಾವ ಯಾವ ಮಾರ್ಗಗಳನ್ನು ಹುಡುಕಬಹುದೋ ಅವೆಲ್ಲವನ್ನೂ ಹುಡುಕಬೇಕು. ಜತ್ತಿ ಸಮಿತಿಯನ್ನು ನೇಮಕ ಮಾಡಿ ಈ ವರದಿಯನ್ನು ತಯಾರುಮಾಡಿರುವುದರ ಉದ್ದೇಶ ನಮ್ಮ ದೇಶದ ವಿಶೇಷವಾದ ಸಮಸ್ಯೆ ಏನಿದೆ ಅದನ್ನು ಬಗೆಹರಿಸಬೇಕು ಎಂದು. ಇದರಿಂದ ಮುನ್ನೂರು ಎಕರೆಗಿಂತ ಜಾಸ್ತಿ ಜಮೀನು ಇರತಕ್ಕ ಜಮೀನ್ದಾರರು ಯಾರಿದ್ದಾರೆ, ಎಷ್ಟು ಭಾಗ ಜಮೀನು ಅವರ ಹತ್ತಿರ ಇದೆಯೆಂದು ನೋಡಿದರೆ, ಅವರಿಂದ ಜಮೀನನ್ನು ವಶಪಡಿಸಿಕೊಂಡರೆ ಅದರಿಂದ ಭೂ ಸಮಸ್ಯೆ ಬಗೆಹರಿಯುತ್ತದೆಯೇ ಎಂದು ನೋಡಬೇಕು, ಆ ರೀತಿ ಮಾಡುವುದರಿಂದ ಭೂ ಸಮಸ್ಯೆ ಬಗೆಹರಿಯುವುದಾದರೆ ಭೂಮಿಯನ್ನು ಅಕ್ವೈರ್ ಮಾಡಿಕೊಳ್ಳಬಹುದು. ಇದರ ಬಗ್ಗೆ ಒಂದು ದೊಡ್ಡ ಚರ್ಚೆಯನ್ನು ಏರ್ಪಾಡು ಮಾಡತಕ್ಕ ಅವಶ್ಯಕತೆಯೇ ಇರಲಿಲ್ಲ. ಭೂಮಿಯನ್ನು ವಶಪಡಿಸಿಕೊಳ್ಳುವ ಬಗ್ಗೆ ಒಂದು ಕಾನೂನನ್ನು ರಚನೆ ಮಾಡಿ ಪರಮಾವಧಿ ಇಷ್ಟು ಎಕರೆ ಜಮೀನು ಇದ್ದರೆ ಸಾಕು ಎಂದು ಹೆಚ್ಚುವರಿ ಜಮೀನನ್ನು ಅಕ್ವೈರ್ ಮಾಡಿಕೊಂಡಿದ್ದರೆ ಇವೊತ್ತಿನ ದಿವಸ ಈ ಸಮಸ್ಯೆ ಬಗೆಹರಿಯುತ್ತಿತ್ತು. ಆದರೆ ಪರಿಸ್ಥಿತಿ ಹಾಗಿಲ್ಲ. ಜಮೀನಿಲ್ಲದಿರುವವರು ಲಕ್ಷಾಂತರ ಜನರಿದ್ದಾರೆ. ಅವರಿಗೆ ನಮ್ಮಲ್ಲಿರತಕ್ಕ ಜಮೀನನ್ನು ಕೊಟ್ಟು, ಎಲ್ಲ ಸೌಲಭ್ಯಗಳನ್ನೂ ಕೊಟ್ಟು, ವಿಶೇಷವಾಗಿ ವ್ಯವಸಾಯ ಮಾಡತಕ್ಕ ಮಾರ್ಗವನ್ನು ತೋರಿಸಬೇಕು. ನಮ್ಮ ಯೋಜನೆಗಳೆಲ್ಲ ಅರ್ಧಂಬರ್ಧವಾಗಿ ಅಲ್ಲಲ್ಲೇ ನಿಂತಿವೆ. ಹೀಗಿರುವಾಗ ಭೂ ಸಮಸ್ಯೆ ಹೇಗೆ ಬಗೆಹರಿದೀತು ! ನಮ್ಮ ದೇಶದಲ್ಲಿ ಯಾರು ಭೂಮಿಯ ಮೇಲೆಯೇ ಅವಲಂಬಿಸಿದ್ದಾರೆ, ಯಾರಿಗೆ ಇದರಲ್ಲಿ ತೊಂದರೆಗಳಿವೆ ಅಂಥ ತೊಂದರೆಗಳನ್ನು ಜರೂರಾಗಿ ಬಗೆಹರಿಸಬೇಕು. ನಮ್ಮಲ್ಲಿ ಭೂಮಿ ಇದ್ದರೆ, ಯಾರಿಗೆ ಭೂಮಿ ಇಲ್ಲವೋ ಅಂಥವರಿಗೆ ನಮ್ಮ ಭೂಮಿಯನ್ನು ಕೊಟ್ಟು ಅವರಿಗೆ ಸೌಲಭ್ಯಗಳನ್ನೂ ಕಲ್ಪಿಸಿಕೊಟ್ಟು ವ್ಯವಸಾಯದಲ್ಲಿ ಹೆಚ್ಚು ಆಸಕ್ತಿ, ವಿಶೇಷವಾದ ಅಭಿಮಾನ ಬರುವಹಾಗೆ ಮಾಡಬೇಕು. ದೇಶದಲ್ಲಿ ಒಬ್ಬನು ಎಸ್. ಎಸ್. ಎಲ್. ಸಿ. ಪಾಸ್ ಮಾಡಿಕೊಂಡರೆ ಅವನು ನಗರಕ್ಕೆ ಹೋಗಿ ಏನಾದರೂ ಒಂದು ಉದ್ಯೋಗದಲ್ಲಿ ಒಂದು ಸಣ್ಣ ನೌಕರಿಯಲ್ಲಿ ಸೇರಬೇಕು, ಕೊನೆಗೆ ಒಂದು ಜವಾನನ ಕೆಲಸದಲ್ಲಿಯಾದರೂ ಸೇರಿಕೊಂಡು ಜೀವನ ಮಾಡಿಕೊಳ್ಳಬೇಕು ಎಂಬ ಮನೋಭಾವ ಜನರಲ್ಲಿ ಬರುತ್ತಿದೆ. ಜಮೀನಿನಲ್ಲಿ ಹೇಗೆ ವ್ಯವಸಾಯ ಮಾಡಬೇಕು, ಹೇಗೆ ಅದರಿಂದ ವಿಶೇಷವಾದ ಪ್ರಯೋಜನವನ್ನು ಪಡೆಯಬೇಕು ಎನ್ನುವ ಒಂದು ಮನೋಭಾವನೆ ನಮ್ಮ ಜನರಲ್ಲಿ ಇದೆಯೇ ಇಲ್ಲವೇ ಎನ್ನುವುದನ್ನು ಯೋಚನೆ ಮಾಡಬೇಕು. ವ್ಯವಸಾಯಗಾರರಿಗೆ ಕೊಡಬೇಕಾದಂಥ ಸೌಲಭ್ಯಗಳನ್ನು ಇವೊತ್ತಿನ ದಿವಸ ಕೊಡುತ್ತಿಲ್ಲ. ಒಬ್ಬನಿಗೆ ಐದು ಎಕರೆ, ಹತ್ತು ಎಕರೆ ಅಥವ 20 ಎಕರೆ ಜಮೀನನ್ನು ಕೊಟ್ಟರೆ ಅವನು ವ್ಯವಸಾಯಮಾಡಿ ಅದರಲ್ಲಿ ಉತ್ಪತ್ತಿಯನ್ನು ತೆಗೆಯುತ್ತಾನೆಂದು ಯೋಚನೆ ಮಾಡಬಹುದು. ಉತ್ಪತ್ತಿಯನ್ನು ತೆಗೆಯಬೇಕಾದರೆ ಅವನಿಗೆ ಬೇಕಾದ ಸೌಲಭ್ಯಗಳನ್ನೆಲ್ಲ ಒದಗಿಸಿಕೊಡಬೇಕು. ಇಲ್ಲದೆ ಇದ್ದರೆ ಬರೀ ಜಮೀನನ್ನು ಕೊಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ.

ಮೂಲ ಹಿಡುವಳಿಗೆ 400 ರೂಪಾಯಿ ವಾರ್ಷಿಕ ವರಮಾನ ಬರಬೇಕು ಮತ್ತು ಕುಟುಂಬ ಹಿಡುವಳಿಗೆ 1,200 ವರಮಾನ ಬರಬೇಕು ಎಂದು ತಿಳಿಸಿದ್ದಾರೆ. ಕುಟುಂಬ ಹಿಡುವಳಿಯ ಪರಿಮಿತಿಯಲ್ಲಿ ಒಬ್ಬ ಗೆಜೆಟೆಡ್ ಅಧಿಕಾರಿಗೆ ಬರುವಷ್ಟು ಆದಾಯ ದೊರೆಯುವ ಜಮೀನಿದ್ದರೆ ಸಾಕು, ಸುಖಜೀವನ ಮಾಡಬಹುದು. ಆದರೆ 400 ರೂಪಾಯಿ ಉತ್ಪತ್ತಿ ಬರತಕ್ಕ ರೈತರ ಮಕ್ಕಳು ಎಷ್ಟು ಜನ ವಿದ್ಯಾಭ್ಯಾಸ ಮಾಡುತ್ತಿದ್ದಾರೆ, ಎಷ್ಟು ಜನ ಪ್ರೌಢ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಅದೇ 50 ರೂಪಾಯಿ, 100 ರೂಪಾಯಿ, 200 ರೂಪಾಯಿ ನೌಕರಿಗಳಲ್ಲಿ ಸೇರಿಕೊಂಡಿರುವವರ ಮಕ್ಕಳು ಎಷ್ಟು ಜನ ವಿದ್ಯಾಭ್ಯಾಸ ಮಾಡುತ್ತಿದ್ದಾರೆ, ರೈತರ ಮಕ್ಕಳಿಗೆ ವಿದ್ಯಾಭ್ಯಾಸ ಮಾಡತಕ್ಕ ಸೌಲಭ್ಯಗಳಿವೆಯೇ ಅಥವ ಸಾಧ್ಯವಾಗುತ್ತದೆಯೇ ಎನ್ನುವುದನ್ನು ಕೂಡ ಯೋಚನೆ ಮಾಡಬೇಕು. ಏಕೆಂದರೆ ಜಮೀನಿನಲ್ಲಿ ಉತ್ಪತ್ತಿ ಎಷ್ಟು ಬರುತ್ತದೆನ್ನುವುದನ್ನು ಲೆಕ್ಕ ಹಾಕಿದರೆ ಅದು ಚೆನ್ನಾಗಿದೆ ಎಂದು ಕಾಣುತ್ತದೆ. ಆದರೆ ಎಷ್ಟೋ ಜನ ವ್ಯವಸಾಯ ಬಹಳ ಕಷ್ಟ, ಇದರಿಂದ

ಉತ್ಪತ್ತಿಯನ್ನು ತೆಗೆಯುವುದು ದುಸ್ಸಾಧ್ಯವೆಂದು ತಿಳಿದು ಅನೇಕ ಜನ ಯಾವುದಾದರೂ ನೌಕರಿಗೆ ಸೇರಿದರೆ ಸಾಕು ಎಂದು ಹೇಳುವ ಸಂದರ್ಭದಲ್ಲಿ ಇಷ್ಟು ಉತ್ಪತ್ತಿ ಬರುವ ಜಮೀನು ಸಾಕು ಎಂದು ಹೇಳಿದರೆ ನಿಜವಾಗಿಯೂ ಆ ಉತ್ಪತ್ತಿಯನ್ನು ತೆಗೆಯಲು ಸಾಧ್ಯವಿದೆಯೇ, ಆತನು ತನ್ನ ಸಂಸಾರ ನಿರ್ವಹಣೆ ಮಾಡಿಕೊಂಡು ತನ್ನ ಸಂಸಾರಕ್ಕೆ ಬರತಕ್ಕ ಕಷ್ಟಕಾರ್ಪಣ್ಯಗಳಿಗೆ ಬೇಕಾದಷ್ಟನ್ನು ಉಳಿಸಿಕೊಂಡು, ಮಕ್ಕಳ ವಿದ್ಯಾಭ್ಯಾಸ ಮೊದಲಾದುವನ್ನು ಮಾಡಿಸಲು ಸಾಧ್ಯವೇ ಎನ್ನುವುದನ್ನು ಯೋಚನೆ ಮಾಡಬೇಕು. ವ್ಯವಸಾಯ ಮಾಡತಕ್ಕವನು ವ್ಯವಸಾಯದಲ್ಲಿಯೇ ಇರಬೇಕು ಎನ್ನತಕ್ಕ ಭಾವನೆ ಇರುವುದು ಸರಿಯಲ್ಲ. ಏಕೆಂದರೆ ಯಾವ ಉದ್ಯೋಗವನ್ನೇ ಮಾಡಿದರೂ ಕೂಡ ಅದನ್ನು ದಕ್ಷತೆಯಿಂದ ಮಾಡಬೇಕು. ಸರ್ವ ಪ್ರಯತ್ನಗಳನ್ನೂ ಸರ್ವಶಕ್ತಿಯನ್ನೂ ಉಪಯೋಗಿಸಿ ಉತ್ಪತ್ತಿಯನ್ನು ತೆಗೆಯಬೇಕೆಂಬ ಮನೋಭಾವ ನಮ್ಮಲ್ಲಿ ಬೆಳೆಯಬೇಕಾಗಿದೆ ನಾವು ಅದನ್ನು ಬೆಳೆಸಬೇಕಾಗಿದೆ. ನಮಗೆ ಇಷ್ಟೇ ಸಾಕು ಎಂದು ಹೇಳತಕ್ಕ ಭಾವನೆ ನಮ್ಮಲ್ಲಿ ಇನ್ನೂ ಬಂದಿಲ್ಲ. ಆ ಭಾವನೆ ನಮ್ಮಲ್ಲಿ ಉಂಟಾದರೆ ನಾವು ಬಹಳ ಅಧೋಗತಿಗೆ ಹೋಗುತ್ತೇವೆ. ನಾವು ಇನ್ನು ಆಹಾರದಲ್ಲಿ ಪರಿಪೂರ್ಣತೆಯನ್ನು ಹೊಂದಿಲ್ಲ. ಆಹಾರದಲ್ಲಿ ಪರಿಪೂರ್ಣತೆಯನ್ನು ಹೊಂದಬೇಕಾಗಿರುವಾಗ ವ್ಯವಸಾಯ ಮಾಡುವವನ ಮನಸ್ಸಿಗೆ ಬೇಸರವನ್ನುಂಟುಮಾಡಬಾರದು. ಅವನನ್ನು ಹಿಂದಕ್ಕೆ ಎಳೆಯಬಾರದು. ಹಾಗೆ ಮಾಡುವುದರಿಂದ ದೇಶಕ್ಕೆ ಆಘಾತವಾಗುತ್ತದೆಂಬುದನ್ನು ಯೋಚನೆ ಮಾಡಬೇಕು. ಇದರಿಂದ ಎಷ್ಟು ಜನಗಳಿಗೆ ರಿಲೀಫ್ ಸಿಕ್ಕುತ್ತದೆ ಎನ್ನುವುದು ಬಹಳ ಮುಖ್ಯವಾದ ಪ್ರಶ್ನೆ.

ಅನೇಕರು ಜಮೀನುಗಳನ್ನು ಮಾರಾಟ ಮಾಡಿಕೊಳ್ಳುತ್ತಿದ್ದಾರೆಂದು ಈಗಾಗಲೆ ಕೇಳಿದ್ದೇವೆ. ಮಾರಾಟ ಮಾಡಿಕೊಳ್ಳಲಿ, ಬಿಡಲಿ, ಅದಲ್ಲ ಪ್ರಶ್ನೆ. ಕೊಂಡುಕೊಳ್ಳುವವನು ಹೆಚ್ಚು ಉತ್ಪತ್ತಿ ಮಾಡಬೇಕು, ಅದರಿಂದ ಜೀವಿಸಬೇಕು ಎಂಬ ಭಾವನೆಯಿಂದ ಕೊಂಡುಕೊಳ್ಳುತ್ತಾನೆ. ಮಾರಾಟ ಮಾಡುವವನು ಜಮೀನು ಹೆಚ್ಚಾಗಿದೆ, ಉತ್ಪತ್ತಿ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ ಎಂದು ಮಾರಾಟ ಮಾಡುತ್ತಾನೆ. 10-15 ವರ್ಷದಿಂದೀಚೆಗೆ ದೇಶದಲ್ಲಿ ಆಹಾರ ಉತ್ಪನ್ನದ ಖರ್ಚು ಹೆಚ್ಚಿ ವ್ಯವಸಾಯದಿಂದ ಜೀವನ ನಡೆಸುವವರು ಸೇಕಡ 95ರಷ್ಟು ಸಾಲ ಮಾಡಿಕೊಂಡಿದ್ದರು, 1940-45ರಲ್ಲಿ 95 ಜನ ಸಾಲಗಾರರಾಗಿದ್ದರು. ಈ ದಿವಸ ಸೇಕಡ 50 ಮಂದಿ ಸಾಲದಿಂದ ದೂರ ಇದ್ದಾರೆ. ಏಕೆಂದರೆ ಧಾರಣೆವಾಸಿ ಜಾಸ್ತಿಯಾಗಿದೆ. ಇನ್ನೂ ಸೇಕಡ 50 ಭಾಗ ಸಾಲ ಅವರ ತಲೆಯಮೇಲಿದೆ. ಅದನ್ನು ತೀರಿಸುವುದಕ್ಕೆ ಸಾಧ್ಯವಿಲ್ಲವಾಗಿದೆ. ತನ್ನ ಜೀವನ ನಡೆಸಿಕೊಂಡು ವ್ಯವಸಾಯದಿಂದ ಬರುವ ಕಷ್ಟವನ್ನು ನೀಗಬೇಕು. ಸಾಧಾರಣವಾಗಿ ರೈತನ ಬಳಿ ಒಂದು ಜೊತೆ ಎತ್ತಿರುತ್ತದೆ. ಅವನಿಗೆ ಮುಖ್ಯವಾಗಿ ಬೇಕಾದ ಎತ್ತು ಖಾಯಿಲೆ ಬಿದ್ದರೆ, ಕಾರಣಾಂತರದಿಂದ ತೊಂದರೆಯಾದರೆ ಎಷ್ಟರಮಟ್ಟಿಗೆ ಅವನು ವ್ಯವಸಾಯವನ್ನು ನಡೆಸಬಲ್ಲ! ಅವನಿಗೆ ಸಾಧ್ಯವೆ? ಇದನ್ನೆಲ್ಲಾ ನಾವು ಯೋಚನೆ ಮಾಡಬೇಕಾಗಿದೆ. ಹೀಗೆ ವ್ಯವಸಾಯ ಕಷ್ಟವಾದ್ದರಿಂದ ಅದರಮೇಲೆ ಭ್ರಮೆ ಕಡಮೆಯಾಗಿದೆ. ಈ ದಿವಸ ವ್ಯವಸಾಯಕ್ಕೆ ಉತ್ತೇಜನ ಕೊಟ್ಟು ಅದರ ಮೇಲೆ ಜನರು ಮನಸ್ಸು ಮಾಡುವ ಹಾಗೆ ಮಾಡುವುದು ಸರ್ಕಾರದ ಜವಾಬ್ದಾರಿ. ಇದರ ಜೊತೆಗೆ ಇನ್ನೊಂದು ವಿಚಾರದ ಕಡೆಗೂ ಗಮನ ಕೊಡಬೇಕಾಗಿದೆ. ಜತ್ತಿ ಸಮಿತಿ ವರದಿಪ್ರಕಾರ ಜಮೀನು ಹಂಚಿದರೆ ಎಷ್ಟು ಜನ ಜಮೀನಿಲ್ಲದೆ ಅಥವಾ ಕೆಲಸವಿಲ್ಲದೆ ಉಳಿಯುತ್ತಾರೆಂಬುದನ್ನು ನೋಡಬೇಕು. ಹಾಗೆ ಉಳಿಯುವಾಗ ಗ್ರಾಮಾಂತರ ಪ್ರದೇಶಗಳಲ್ಲಿ ಏನು ವ್ಯವಸ್ಥೆ ಮಾಡುತ್ತೀರಿ? ಒಂದು ಉದಾಹರಣೆ ಕೊಡುತ್ತೇನೆ. ನಮ್ಮ ಜಿಲ್ಲೆಯಲ್ಲಿ ಅಮೃತೂರು ಎಂಬ ಒಂದು ಊರಿದೆ. ಮಾರ್ಕೋನಹಳ್ಳಿ ರಿಸರ್ವಾಯಿರ್ 1928 ಅಥವಾ 1930ರಲ್ಲಿ ಕಟ್ಟಿದರು. ಅದನ್ನು ಕಟ್ಟುವುದಕ್ಕೆ ಮುಂಚೆ ಅಮೃತೂರು ಕೆರೆ ಕೆಳಗಿದ್ದ ಜಮೀನು ದೊಡ್ಡ ಜಮೀನುದಾರರಿಗೆ ಸೇರಿತ್ತು. 25 ಎಕರೆ, 50 ಎಕರೆ, 100 ಎಕರೆ ಹೀಗೆ ಒಬ್ಬೊಬ್ಬರಿಗಿತ್ತು, ರೈತರೆಲ್ಲಾ ಹೋಗಿ ವ್ಯವಸಾಯ ಮಾಡಬೇಕಾಗಿತ್ತು. ವ್ಯವಸಾಯ ಬಿಟ್ಟರೆ ಆ ರೈತರಿಗೆ ಜೀವನಕ್ಕೆ ಬೇರೆ ಮಾರ್ಗವಿರಲಿಲ್ಲ; ಹೀಗಾಗಿತ್ತು. ಈ ದಿವಸ ರಿಸರ್ವಾಯಿರ್ ಕಟ್ಟಿದ್ದಾರೆ. ಅದನ್ನು ಕಟ್ಟಿದಮೇಲೆ ರೈತರಿಗೆಲ್ಲರಿಗೂ ನೀರಾವರಿ ಜಮೀನು ಸಿಕ್ಕಿ ಗುತ್ತಿಗೆಗೆ ಮಾಡುತ್ತಿದ್ದ ಜಮೀನನ್ನು ಬಿಟ್ಟರು, ಬಿಟ್ಟು ತಮ್ಮ ಸ್ವಂತ ಜಮೀನಿನಲ್ಲಿ ವ್ಯವಸಾಯ ಮಾಡುವುದಕ್ಕೆ ಷುರು ಮಾಡಿದರು. ಆಮೇಲೆ ಜಮೀನುದಾರರು ತಾವೇ ತಮ್ಮ ಜಮೀನನ್ನು ಸಾಗುವಳಿ ಮಾಡಲು ಪ್ರಾರಂಭಿಸಿ 20 ವರ್ಷಗಳಿಂದ ಸ್ವಂತ ವ್ಯವಸಾಯದಲ್ಲಿ ನಿರತರಾಗಿದ್ದಾರೆ; ಅವರು ದೇಶದಲ್ಲಿ ಅತ್ಯುತ್ತಮರಾದ ವ್ಯವಸಾಯಗಾರರಾಗಿದ್ದಾರೆ. ಅವರೆಲ್ಲಾ ದೊಡ್ಡ ದೊಡ್ಡ ವಿದ್ಯಾವಂತರು. ಅವರೇ ನೇರವಾಗಿ ಜಮೀನಿಟ್ಟುಕೊಂಡು ವ್ಯವಸಾಯ ಮಾಡುತ್ತಿದ್ದಾರೆ. ಜಮೀನಿಲ್ಲದಿರುವವರಿಗೆ ಇತರೆ ಕಸಬನ್ನೊದಗಿಸುವ ಮಾರ್ಗಕ್ಕೆ ಸರ್ಕಾರ ಕೈಹಾಕಿಲ್ಲ. ಈ ದಿವಸ ಜಮೀನು ಇಟ್ಟಿದೆ, ಜಮೀನಿಲ್ಲದಿರುವವರು ಇಟ್ಟಿದ್ದಾರೆ, ಜಮೀನಿಲ್ಲದಿರುವವರಿಗೆ ಯಾವ ಉದ್ಯೋಗ ಕಲ್ಪಿಸಬೇಕು ಎಂಬ ಬಗ್ಗೆ ಕೈ ಹಾಕಿಲ್ಲ. ಸಣ್ಣ ಸಣ್ಣ ಕೈಗಾರಿಕೆ, ಕುಂಬಾರ ಕೈಗಾರಿಕೆ ಅಥವಾ ಗಾಡಿ ಮಾಡುವುದು, ಕಬ್ಬಿಣದ ಕೆಲಸ ಮಾಡುವುದು ಇಂಥ ಕೆಲಸ ಮಾಡುತ್ತಿದ್ದಾರೆ ಎಂದು ಅಂಕಿ ಅಂಶವಿದೆಯೇ ಹೊರತು ಜಮೀನಿಲ್ಲದಿರುವವರಿಗೆ, ಕೆಲಸವಿಲ್ಲದಿರುವವರಿಗೆ ಈ ದಿವಸ ಕೆಲಸ ಕೊಡುವ ಒಂದು ಪ್ರಯೋಗ ನಡೆಸುತ್ತಿಲ್ಲ. ಭೂಸುಧಾರಣೆ ಜೊತೆಯಲ್ಲಿ ಇದನ್ನು ನಾವು ನಡೆಸುವುದಾದರೆ ಅದಕ್ಕೆ ಸಹಾಯಕಾರಿಯಾಗುತ್ತದೆ, ಇಲ್ಲದಿದ್ದರೆ ವ್ಯವಸಾಯದಮೇಲೆ ಆಸಕ್ತಿ ಕಡಮೆಯಾಗುತ್ತದೆ. ಈಗ ಗೇಣಿದಾರರು ಎಷ್ಟುಮಂದಿ ಇದ್ದಾರೆ? ಸ್ವಲ್ಪ ಹೆಚ್ಚು ಕಡಮೆ 18 ಲಕ್ಷ ಜನರೋ ಏನೋ ಇದ್ದಾರೆ. ಅವರಿಗೆ 61 ಲಕ್ಷ ಎಕರೆ ವಹಿಸಿಕೊಡಬೇಕಾಗುತ್ತದೆ. ಆದರೆ ಇದರಿಂದ ಈ ದಿವಸ ಪರಿಹಾರ ಸಿಕ್ಕುತ್ತದೆಯೇ? ನಮ್ಮ ದೇಶದಲ್ಲಿರುವ ಸಮಸ್ಯೆ ಬಗೆ ಹರಿಯುತ್ತದೆಯೇ? ಇಲ್ಲ, ಮೊದಲು 18 ಲಕ್ಷ ಗೇಣಿದಾರರೇನಿದ್ದಾರೆ ಅವರಿಗೆ ಕೊಡುವ ಪರಿಹಾರ ಬಹಳ ಜರೂರಾಗಿ ಕೊಡಬೇಕು. ಹಳೇ ಮೈಸೂರಿನಲ್ಲಿ ಟೆನೆನ್ಸಿ ಆಕ್ಟ್ ಈ ದಿವಸ ನಾವು ಅಂಗೀಕಾರ ಮಾಡಿ ಕಾನೂನಾಗಿದ್ದರೂ ಕೂಡ ಎಷ್ಟರ ಮಟ್ಟಿಗೆ ಪರಿಹಾರ ಸಿಕ್ಕಿದೆ ಎಂದು ಯೋಚನೆ ಮಾಡಬೇಕು. ಈ ದಿವಸ ಎಷ್ಟೋ ಹಿಂಸೆಯಾಗಿದೆ. ಗೇಣಿದಾರರಮೇಲೆ ಜಮೀನುದಾರರೂ, ಜಮೀನುದಾರರ ಮೇಲೆ ಗೇಣಿದಾರರೂ ಕೈವಾಡ ನಡೆಸುತ್ತಿದ್ದಾರೆ. ಇದರಿಂದ ವ್ಯವಹಾರ ಜಾಸ್ತಿಯಾಗಿದೆಯೇ ಹೊರತು ಕಡಿಮೆಯಾಗಿ ಹೆಚ್ಚು ಸಹಾಯವಾಗಿಲ್ಲ. ಕೆಲಸವಿಲ್ಲದಿರುವ ಲಾಯರುಗಳಿಗೆ ಕೆಲಸ ಸಿಕ್ಕಿದೆ. ಏಕೆಂದರೆ ಈ ಸಮಸ್ಯೆ ಅಷ್ಟು ದೊಡ್ಡದಾಗಿದೆ. ಪ್ರತಿಯೊಬ್ಬನೂ

(ಶ್ರೀ ಟಿ. ಎನ್. ಮೂಡಲಗಿರಿಗೌಡ)

ಪರಿಹಾರಕ್ಕಾಗಿ ಕೋರ್ಟುಗಳಿಗೆ ಹೋಗಬೇಕೆಂಬ ಪ್ರಶ್ನೆ ಇದೆಯೇ ಹೊರತು ಕೋರ್ಟುಗಳಿಗೆ ಹೋಗುವುದು ಕಡಮೆಯಾಗಿಲ್ಲ, ಸ್ಥಳಗಳಲ್ಲೇ ಪರಿಹಾರ ಸಿಕ್ಕಬೇಕು ಎಂದು ಅದಕ್ಕೆ ಮಾರ್ಗ ಕಂಡುಹಿಡಿದಿಲ್ಲ. ಆದ್ದರಿಂದ ಸೀಲಿಂಗ್ ಹಾಕುವುದರಿಂದ ಹೆಚ್ಚು ಪರಿಣಾಮವಾಗುವುದಿಲ್ಲ. ವ್ಯವಸಾಯದಲ್ಲಿ ನಿರತರಾಗಿರುವವರಿಗೆ ಹೆಚ್ಚು ಜಮೀನಿಟ್ಟುಕೊಳ್ಳಲು ಅವಕಾಶ ತಪ್ಪುವುದರಿಂದ ಉತ್ಪತ್ತಿಗೆ ಧಕ್ಕೆ ಬರುತ್ತದೆ, ಅಭಿವೃದ್ಧಿ ಕಡಮೆಯಾಗುತ್ತದೆ ಎಂದು ಭಾಸವಾಗುತ್ತಿದೆ. ಸ್ವಂತವಾಗಿ ವ್ಯವಸಾಯ ಮಾಡಿ ಉತ್ಪತ್ತಿ ತೆಗೆಯಬೇಕೆಂದಿರುವವರಿಗೆ ಸಂಪೂರ್ಣ ಅವಕಾಶವಿರಬೇಕು. ಅವರು ಮುತವರ್ಜಿವಹಿಸಿ ಹೆಚ್ಚು ಗೊಬ್ಬರ ಹಾಕಿ ವ್ಯವಸಾಯ ಮಾಡುವಂತೆ ಮಾಡಬೇಕು. ಹಳೇ ಮೈಸೂರಿನಲ್ಲಿ 40—50 ಜನರಿರುವ ಕೆಲವು ಸಂಸಾರಗಳಿವೆ. ಈ ವರದಿಯಿಂದ ಅವರೆಲ್ಲಾ ಭಾಗಮಾಡಿಕೊಂಡು ಜಮೀನನ್ನು ಹಂಚಿಕೊಳ್ಳುವ ಪರಿಸ್ಥಿತಿ ಬರುತ್ತದೆ; ಈ ದಿವಸ ವಂಶಪಾರಂಪರ್ಯವಾಗಿ ನಡೆದು ಬಂದಿರುವ ಸಂಪ್ರದಾಯ ಅಳಿಸಿ ಹೋಗಲು ಒಂದು ಮಾರ್ಗ ತೋರಿಸಿಕೊಟ್ಟಹಾಗಾಗುತ್ತದೆ. ಇದರಿಂದ ವ್ಯವಸಾಯ ಫಲಪ್ರದವಾಗಿ ನಡೆಯದೆ ಉತ್ಪತ್ತಿ ಕಡಮೆಯಾಗುತ್ತದೆ. ಮನೆಗಳಲ್ಲಿ ಹೆಚ್ಚು ಜನರಿರುವವರು ಹೆಚ್ಚಾಗಿ ವ್ಯವಸಾಯ ಮಾಡುವುದಕ್ಕೆ ಸಾಧ್ಯವೇ ಹೊರತು ಬರೀ ಕೂಲಿಗಳಿಂದ ಕೆಲಸಮಾಡಿಸಿ ವ್ಯವಸಾಯ ಮಾಡುತ್ತೇನೆಂದು ಹೇಳಿದರೆ ಖಂಡಿತ ಸಾಧ್ಯವಾಗುವುದಿಲ್ಲ; ಇದು ಅನುಭವ. ಆದ್ದರಿಂದ ಸೀಲಿಂಗ್ ಎಂದೇನಿದೆ ಅದನ್ನು ನಾವು ಸ್ವಲ್ಪ ಯೋಚನೆ ಮಾಡಬೇಕು. ಯೋಚನೆಮಾಡಿ ಅದರಿಂದ ಒಳ್ಳೆಯ ಪರಿಣಾಮವಾಗುತ್ತದೆಯೇ ಎಂದು ನೋಡಬೇಕು. ಒಳ್ಳೆಯ ಪರಿಣಾಮವಾಗುವುದಾದರೆ ಈ ಬಗ್ಗೆ ಒಂದು ಹೆಜ್ಜೆ ಮುಂದೆ ಹೋಗುತ್ತೇನೆ. ಅದರಿಂದ ಪ್ರತಿಯೊಬ್ಬ ವ್ಯವಸಾಯಗಾರನಿಗೂ ಸೌಖ್ಯವಾಗಬೇಕು, ಇತರರಿಗೆ ದೊರೆಯುವ ಸೌಖ್ಯ ವ್ಯವಸಾಯಗಾರನಿಗೂ ದೊರೆಯಬೇಕು, ಅದನ್ನು ಒದಗಿಸಬೇಕು. ಸಮತಾವಾದ ಸಮಾಜದ ಮಾದರಿ ಸಮಾಜ ರಚಿಸಬೇಕೆಂದು ಹೇಳುವಾಗ ಆ ಮಟ್ಟಕ್ಕೆ ಎಲ್ಲರನ್ನೂ ತರುವುದಾದರೆ ಸೀಲಿಂಗ್ ಇರಲಿ ಎಂದು ಹೇಳುವುದು ಸರಿಯಲ್ಲ. ಇದು ಪ್ರತಿಯೊಬ್ಬರಿಗೂ ಹೇಳುವುದು. ಎಲ್ಲಾ ಸೆಕ್ಷನ್‌ಗಳಲ್ಲೂ ನಿರ್ದಿಷ್ಟವಾಗಿ ಇಷ್ಟೇ ಇರಬೇಕು, ಜೀವನ ಇಷ್ಟೇ ಮಟ್ಟದಲ್ಲಿರಬೇಕು ಎಂದು ವ್ಯವಸ್ಥೆ ಮಾಡಿದರೆ ಸಂತೋಷದಿಂದ ಒಪ್ಪಿಕೊಳ್ಳುತ್ತೇನೆ.

5-30 P.M.

ಮಾನಸಿಕ ಪರಿಣಾಮ ದೇಶದಲ್ಲಿ ಒಂದು ದುಷ್ಪರಿಣಾಮವಾಗುತ್ತದೆಯೇ ಹೊರತು ಇದರಿಂದ ಆಹಾರ ಉತ್ಪನ್ನವಾಗಲಾರದು ಎಂದು ಭಯವಾಗುತ್ತಿದೆ. ಆ ರೀತಿ ನಮ್ಮ ಮನಸ್ಸಿನ ಮೇಲೆ ಭಾಸವಾಗುತ್ತಿದೆ. ಆದ್ದರಿಂದ ತಾವು ಇದನ್ನೂ ಸ್ವಲ್ಪ ಯೋಚನೆಮಾಡಿ. ಗೇಣಿವಿಷಯದಲ್ಲಿ ......

ಶ್ರೀ ಬಿ. ಡಿ. ಜತ್ತಿ (ಜಮಖಂಡಿ).—ಈಗ ತಾವು ಹೇಳಿದ ಸೀಲಿಂಗ್‌ಗೆ ಕಂಡಿಷನ್ ಏನಾದರೂ ಇದೆಯೇ?

ಶ್ರೀ ಟಿ. ಎನ್. ಮೂಡಲಗಿರಿಗೌಡ (ಕುಣಿಗಲ್).—ನಾನು ಕಂಡೀಷನ್ ಹಾಕತಕ್ಕ ಪರಿಸ್ಥಿತಿಯಲ್ಲಿ ಇಲ್ಲ. ಇತ್ತೀಚೆಗೆ ದೊಡ್ಡ ದೊಡ್ಡ ವ್ಯಕ್ತಿಗಳು ಹೇಳುವುದೇನೆಂದರೆ ಅಧಿಕಾರಿಗಳಮೇಲೆ, 3,000 ರೂಪಾಯಿ ಸಂಬಳ ತೆಗೆದುಕೊಳ್ಳುವವರಮೇಲೆ ಇಷ್ಟೇ ಇರಬೇಕೆಂದು ಮಾಡತಕ್ಕದ್ದು ಕಷ್ಟವಾಗುತ್ತದೆ ಎಂದು ಹೇಳುತ್ತಾರೆ. ದೊಡ್ಡ ದೊಡ್ಡ ಫ್ಯಾಕ್ಟರಿಗಳಿವೆ, ಅವುಗಳಿಗೂ ಸಹ ಇಂತಹ ಒಂದು ನಿರ್ಬಂಧವನ್ನು ಹಾಕುವುದು ಅಷ್ಟು ಸುಲಭವಲ್ಲ ಎಂದು ಹೇಳುತ್ತಾರೆ. ಕಡಿಮೆ ಸಂಖ್ಯೆಯಲ್ಲಿರತಕ್ಕ ಈ ಭಾಗಗಳೇನಿವೆ ಇವುಗಳ ಮೇಲೆ ಸೀಲಿಂಗ್ ತರುವುದು ಅಷ್ಟು ಸುಲಭವಲ್ಲ ಎಂದು ಹೇಳುವಾಗ ಇದನ್ನು ಎಷ್ಟುಮಟ್ಟಿಗೆ ಜಾರಿಗೆ ತಂದಾರು ಎನ್ನತಕ್ಕ ಅನುಮಾನ ಇದೆ. ನಿಜವಾಗಿಯೂ ಜಾರಿಗೆ ತರುತ್ತಾರೆಯೇ ಎಂದು ಅನುಮಾನವಾಗಿದೆ. ಆ ದೃಷ್ಟಿಯಿಂದ ಯಾರು ಸಾವಿರ ಎಕರೆ ಜಮೀನು ಇಟ್ಟುಕೊಂಡಿರುತ್ತಾರೆ ಅವರಿಗೆ ಅಷ್ಟು ಜಮೀನನ್ನು ಪರ್ಸನಲ್ ಕಲ್ಟಿವೇಷನ್‌ಗೆ ಬಿಟ್ಟರೆ ಸಾಗುವಳಿ ಮಾಡುವುದಕ್ಕೆ ಸಾಧ್ಯವೇ? 100—250 ಎಕರೆ ಕೊಟ್ಟು ಬಾಕಿದನ್ನೂ ತೆಗೆದುಕೊಳ್ಳಬಹುದು. ಅವನಾಗಿ ಕೊಡುವುದಕ್ಕೆ ಸಿದ್ಧವಾಗಿರುತ್ತಾನೆ. ಪರ್ಸನಲ್ ಕಲ್ಟಿವೇಷನ್ ಮಾಡಬೇಕೆಂಬ ಮನೋಭಾವವನ್ನು ಏಕೆ ಕಡಿಮೆ ಮಾಡುತ್ತೀರಿ? 1,000 ಎಕರೆ ಜಮೀನು ಯಾರಿಗೂ ಸಾಗುವಳಿ ಮಾಡುವುದಕ್ಕೆ ಸಾಧ್ಯವಿಲ್ಲ. ಕೆಲವು ಸಂದರ್ಭಗಳಲ್ಲಿ 5—10 ಎಕರೆ ಕೂಡ ಸಾಗುಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಒಂದೊಂದು ಪ್ರದೇಶಕ್ಕೂ, ಒಂದೊಂದು ಸನ್ನಿವೇಶಕ್ಕೂ ವ್ಯತ್ಯಾಸ ಇದೆ. ಈ ವ್ಯವಸಾಯ ಮಾಡುವುದು ಒಂದು ಕಡೆ 25 ಎಕರೆ ಮಾಡಬಹುದು. ಅಷ್ಟೇ ಜನ ಇನ್ನೊಂದು ಕಡೆಯಲ್ಲಿ 2 ಎಕರೆ ಕೂಡ ಮಾಡುವುದಕ್ಕೆ ಸಾಧ್ಯವಿಲ್ಲ. ಅದು ಪ್ರತಿಯೊಂದು ಸನ್ನಿವೇಶಕ್ಕೆ ವ್ಯತ್ಯಾಸವಾಗುತ್ತದೆ. ಆದ್ದರಿಂದ ಹೆಚ್ಚು ಜಮೀನು ಉಳುಮೆ ಮಾಡಬೇಕೆಂದು, ಹೆಚ್ಚು ಉತ್ಪನ್ನ ಮಾಡಬೇಕೆಂದು ಭಾವನೆ ಇದ್ದರೆ ಆ ಭಾವನೆಯನ್ನು ಏಕೆ ಮೊಟಕು ಮಾಡುತ್ತೀರಿ? ಆ ರೀತಿ ಮೊಟಕು ಮಾಡುವುದು ಸರಿಯಲ್ಲ.

ಟೆನೆನ್ಸಿಗೆ ಸಂಬಂಧಪಟ್ಟ ಹಾಗೆ ಶ್ರೀಮಾನ್ ಮುಕ್ಕಣ್ಣಪ್ಪನವರು ಹೇಳಿದರು. ಈ ಮಠಾಧಿಪತಿಗಳಿಗೆ, ಇನ್‌ಸ್ಟಿಟ್ಯೂಷನ್‌ಗಳಿಗೆ, ಕಾಲೇಜುಗಳಿಗೆ, ಹಾಸ್ಟಲುಗಳಿಗೆ. ಇತರೆ ಸಂಸ್ಥೆಗಳಿಗೆ, ಹೈಸ್ಕೂಲುಗಳಿಗೆ, ಇವುಗಳು ಯಾವುದಕ್ಕೇ ಆಗಲೀ, ಅವರು ಕೆಲವು ಮಠಗಳನ್ನು ಕೂಡ ಉದಹರಿಸಿದರು. ನನಗೆ ವೈಯಕ್ತಿಕವಾಗಿ ಸಿದ್ಧಗಂಗೆ ಮಠದ ವಿಷಯ ಹೇಳಿದಾಗ ಮನಸ್ಸಿಗೆ ನೋವಾಯಿತು. ಅವರಿಗೆ ಇಷ್ಟು ಹೇಳುತ್ತೇನೆ ಸ್ವಾಮಿ. ಸಿದ್ಧಗಂಗೆ ಮಠದ ಪರಿಸ್ಥಿತಿ ಇಷ್ಟೇ. ಅವರು ಇತ್ತೀಚೆಗೆ ನಾನು ಕಂಡ ಹಾಗೆ, ನನ್ನ ಬುದ್ಧಿಗೆ ತಿಳಿದ ಹಾಗೆ, ಪ್ರತಿಯೊಂದು ಜಮೀನನ್ನೂ ಕೊಂಡಿರತಕ್ಕವರು. ಸರ್ಕಾರದವರು ಅಷ್ಟು ಕೊಟ್ಟಿರಬಹುದು. ಆದರೆ ವಿಶೇಷವಾದಂಥ ಜಮೀನನ್ನು ಕೊಂಡಿದ್ದಾರೆ. ಅವರು ವಿಶೇಷವಾಗಿ ವ್ಯವಸಾಯವನ್ನು ಕೂಡ ಇಟ್ಟುಕೊಂಡಿದ್ದಾರೆ. ಬೇರೆ ಬೇರೆ ಕಡೆ ಅವರಿಗೆ ಗ್ರಾಮಾಂತರಗಳಲ್ಲಿ ಜಮೀನು ಇದೆ. ಅವರ ಕೆಲಸ ಏನೆಂಬುದನ್ನು ಯೋಚನೆ ಮಾಡಿದರೆ, ನಾನು ಮಠದ ಜಮೀನನ್ನು ಉಳುಮೆ ಮಾಡುತ್ತೇನೆ, ನನಗೆ ಟೆನೆನ್ಸಿ ಆಕ್ಟು ಪ್ರಕಾರ ಅದು ಸೇರಬೇಕು ಎಂದು ಒಬ್ಬರೂ ಹೇಳುವುದಿಲ್ಲ. ಏಕೆಂದರೆ ಅವರ ಕೆಲಸ ಕಾರ್ಯ ಹಾಗಿದೆ. ಸಹಸ್ರಾರು ವಿದ್ಯಾರ್ಥಿಗಳಿಗೆ ಅನ ಹಾಕುತ್ತಾರೆ. ಅಂತಹ ಒಂದು ಪವಿತ್ರವಾದ ಕಾರ್ಯವನ್ನು ಅವರು ಮಾಡುತ್ತಾ ಇದ್ದಾರೆ. ಅದಕ್ಕಾಗಿ ದೇಶದಲ್ಲಿರತಕ್ಕ ನೀತಿನಿಯಮಗಳನ್ನೆಲ್ಲಾ ಬಿಟ್ಟುಬಿಡುವುದಕ್ಕೆ ಸಾಧ್ಯವೇ ಎಂಬ ಪ್ರಶ್ನೆ ಬರುತ್ತದೆ.

ಒಬ್ಬ ಸದಸ್ಯರು.—ಇದು ಸೆಕ್ಯುಲಾರ್ ಸ್ಟೇಟು.

ಶ್ರೀ ಟಿ. ಎಲ್. ಮೂಡಲಗಿರಿಗೌಡ.—ಸೆಕ್ಯುಲಾರ್ ಸ್ಟೇಟ್ ಎನ್ನುವುದು ಆಚರಣೆಯಲ್ಲಿಯೂ ಇರಬೇಕು. ಜಮೀನು ಎಲ್ಲವನ್ನು ಸಂಪೂರ್ಣವಾಗಿ ಸರ್ಕಾರದವರಿಗೇ ಒಪ್ಪಿಸುತ್ತೇವೆ. ಯಾವ ಜಮೀನ್‌ದಾರನೂ ಕೂಡ ತನ್ನ ಹೆಸರಿನಲ್ಲಿ ಜಮೀನು ಇರಬೇಕೆಂದು ಇಷ್ಟಪಡುವುದಿಲ್ಲ. ಅವನಿಗೆ ಬೇಕಾದ ವಿದ್ಯಾಭ್ಯಾಸ, ಜೀವನ ಮಾಡುವುದಕ್ಕೆ ತಕ್ಕ ಸೌಕರ್ಯಗಳನ್ನೆಲ್ಲಾ ಒದಗಿಸಿಕೊಟ್ಟರೆ ಸೆಕ್ಯುಲಾರ್ ಸ್ಟೇಟ್‌ನಲ್ಲಿ ಯಾರೊಬ್ಬರೇ ಆಗಲೀ ತಮ್ಮ ಹೆಸರಿನಲ್ಲಿ ಜಮೀನನ್ನು ಏಕೆ ಇಟ್ಟುಕೊಂಡಿರಬೇಕು? ಮಾಡಿದರೆ ಒಂದು ಸಂಪೂರ್ಣ ಕ್ರಾಂತಿಯನ್ನೇ ಮಾಡಿ. ಅರ್ಧಂಬರ್ಧ ಮಾಡುವುದಕ್ಕೆ ಹೋಗಬೇಡಿ. ಜಮೀನು ಇಟ್ಟುಕೊಳ್ಳಬೇಕಾಗಿಲ್ಲ ಎಂದರೆ ಯಾರ ಹೆಸರಿನಲ್ಲಿಯೂ ಜಮೀನು ಇರಬೇಕಾಗಿಲ್ಲ. ಸರ್ಕಾರದ ಹೆಸರಿನಲ್ಲಿ ಇರಲಿ. ದಾಡಿಸಿಕೊಳ್ಳಿ. ಯಾರು ಬೇಡ ಎನ್ನುತ್ತಾರೆ? ಆಗ ಸಮತಾವಾದ ಸಮಾಜವನ್ನು ಕಟ್ಟುವುದಕ್ಕೆ ಎಷ್ಟೋ ಚೆನ್ನಾಗಿ ಸಾಧ್ಯವಿದೆ. ಯಾರು ವ್ಯವಸಾಯ ಮಾಡುವುದಿಲ್ಲವೋ, ಯಾವನು ಕೆಲಸ ಮಾಡುವುದಿಲ್ಲವೋ ಅವನಿಗೆ ಜೀವನದ ಸೌಕರ್ಯ ಇರುವುದಿಲ್ಲ. ಹೀಗಿರುವಾಗ ಸರ್ಕಾರದವರು ಇಂತಹ ಸಂಸ್ಥೆಗಳ ವಿಷಯದಲ್ಲಿ ಸ್ವಲ್ಪ ಜಾಗರೂಕತೆಯಿಂದ ಪರಿಶೀಲನೆಮಾಡಿ ಸಾಧ್ಯವಾದ ಮಟ್ಟಿಗೂ ಅನುಕೂಲ ಮಾಡಿಕೊಡಬೇಕು. ಈಗ ಇರತಕ್ಕ ಒಂದು ಸೀಲಿಂಗ್ ಪರಿಮಿತಿ ಏನಿದೆ ಅದು ಅಷ್ಟು ಸಮಾಧಾನಕರವಾಗಿಲ್ಲ. ಸಾಧ್ಯವಾದ ಮಟ್ಟಿಗೂ ಮಠಗಳವರು, ಮಠಾಧಿಪತಿಗಳು ಇವತ್ತಿನ ಪರಿಸ್ಥಿತಿ ಏನಿದೆ, ಆ ಪರಿಸ್ಥಿತಿಗೆ ಹೊಂದಿಕೊಂಡು ಹೋಗುತ್ತಾ ಇದ್ದಾರೆ. ಅನೇಕ ವಿದ್ಯಾಸಂಸ್ಥೆಗಳನ್ನು ಸ್ಥಾಪನೆಮಾಡಿದ್ದಾರೆ. ಅವರು ಏನು ಕಾರ್ಯ ಮಾಡಿದರೂಕೂಡ ನಮ್ಮವರಿಗೇ ಮಾಡುವುದು ಬೇರೆ ಯಾವರಿಗೆ ಮಾಡುವುದಿಲ್ಲ. ಅವರೂ ಕೂಡ ದೇಶ ಸೇವೆಮಾಡಬೇಕೆಂಬ ಭಾವನೆಯಿಂದ ಹೊರಟಿರುವುದರಿಂದ ಅವರಿಗೆ ಇರತಕ್ಕ ಸೌಕರ್ಯವನ್ನು ಮೊಟಕು ಮಾಡುವುದು ಸರಿಯಲ್ಲ. ಆ ರೀತಿ ಮಾಡುವುದಾದರೆ ಅವರು ನಡೆಸುತ್ತಿರತಕ್ಕ ಕೆಲಸಕಾರ್ಯಗಳನ್ನು ಸಂಸ್ಥೆಗಳನ್ನೆಲ್ಲಾ ಸರ್ಕಾರದವರೇ ವಹಿಸಿಕೊಳ್ಳಿ ಅವರಿಗೆ ಒಂದು ಎಕರೆ ಭೂಮಿಯನ್ನೂ ಕೊಡಬೇಡಿ. ಯಾರು ಅವರಿಗೆ ಕೊಡಿ ಎಂದು ಹೇಳುತ್ತಾರೆ? ಎಸ್. ಎಸ್. ಎಲ್. ಸಿ. ಪರೀಕ್ಷೆ ಮಾಡಿರತಕ್ಕವರಿಗೆ ಎಷ್ಟು ಸಂಬಳಕೊಡುತ್ತೀರೋ ಅಷ್ಟು ಬೇಸಿಕ್ ಇನ್‌ಕಂ ಇರತಕ್ಕ ಜಮೀನನ್ನಿಟ್ಟುಕೊಂಡು ಯಾವರೀತಿ ಅವರು ಇನ್‌ಸ್ಟಿಟ್ಯೂಷನ್‌ಗಳನ್ನು ನಡೆಸಬೇಕು? ಆದ್ದರಿಂದ ಒಂದು ಭಾಗಕ್ಕೆ ಸಂಬಂಧಪಟ್ಟ ಹಾಗೆ ಕಾನೂನು ಮಾಡಿ ಇನ್ನೊಂದು ಭಾಗವನ್ನು ಗಮನಕ್ಕೆ ತೆಗೆದುಕೊಳ್ಳದೆ, ಯಾವುದನ್ನು ಮಾಡದೇ ಹಾಗೆಯೇ ಇರಲಿ ಎಂದರೆ ವ್ಯವಸಾಯದ ಪರಿಸ್ಥಿತಿ ಏನಾಗುತ್ತದೆ; ಒಂದು ಆಂದೋಳನಕ್ಕೆ ಬರುತ್ತದೆ, ಆ ಪರಿಸ್ಥಿತಿ ಬರಬಾರದು, ಅದನ್ನು ಗಮನಿಸಿ ಯೋಚನೆ ಮಾಡಬೇಕೆಂದು ಹೇಳುತ್ತೇನೆ.

ಆಮೇಲೆ ರೆಂಟ್ ವಿಷಯದಲ್ಲಿ 1/5 ಭಾಗವನ್ನು ಮಾಡಬೇಕೆಂದು ಹೇಳಿದ್ದಾರೆ. ಹಳೇ ಮೈಸೂರಿನಲ್ಲಿರತಕ್ಕವರಲ್ಲಿ ಕೆಲವರು ಸ್ವಂತವಾಗಿ ಜಮೀನನ್ನಿಟ್ಟುಕೊಂಡಿರತಕ್ಕವರು ಅಥವಾ ಜಮೀನನ್ನು ವಾರ, ಗುತ್ತಿಗೆಗೆ ಕೊಟ್ಟಿರತಕ್ಕವರವಿಷಯ ಗೊತ್ತಿದೆ. ಹೊರಗಡೆ ಬೊಂಬಾಯಿ ಮತ್ತು ಇತರ ಪ್ರಾಂತ್ಯದಿಂದ ಬಂದಿರತಕ್ಕವರ ವಿಷಯ ನನಗೆ ಗೊತ್ತಿಲ್ಲ. ನಮ್ಮಲ್ಲಿ ಒಂದು ಬೆಳೆಗಿಂತ ಹೆಚ್ಚಾಗಿ ತೆಗೆದುಕೊಂಡ ರೈತರು ಎಲ್ಲೂ ಇಲ್ಲ. ಈಗ ಸಾಧಾರಣವಾಗಿ ಅವರಲ್ಲಿ ಒಂದು ಕಾಂಪಿಟಿಷನ್ ಉಂಟುಮಾಡಬೇಕೆಂಬ ಭಾವನೆಯಿಂದ ¼ ಭಾಗದ ರೆಂಟ್ ಮಾಡಿದರೆ ಸಂಪೂರ್ಣ ವಿಶ್ವಾಸದಿಂದ ಕೆಲಸಮಾಡತಕ್ಕ ರೈತರು ಇದ್ದಾರೆ ಎಂದು ನನ್ನ ಭಾವನೆ.

ಜಮೀನ್‌ದಾರನಿಗೆ ಕೊಡುವ ಗೇಣಿಯನ್ನು ಕಡಮೆ ಮಾಡಿದರೆ, ವ್ಯವಸಾಯಮಾಡುವುದರಲ್ಲಿ ರೈತನಿಗೆ ಆಸಕ್ತಿ ಕಡಮೆಯಾಗುತ್ತದೆ. ಜಮೀನ್‌ದಾರನಿಗೆ ಹೆಚ್ಚು ಆದಾಯ ಸಿಕ್ಕಬೇಕೆಂಬುದು ಮುಖ್ಯಪ್ರಶ್ನೆಯಲ್ಲ. ರೈತನ ಆಸಕ್ತಿ ಹೆಚ್ಚಬೇಕು. ಯಾರು ಜಮೀನನ್ನು ವ್ಯವಸಾಯ ಮಾಡುತ್ತಾನೋ ಅವನಿಗೆ ಸರ್ಕಾರ ಅಥವ ಸಾರ್ವಜನಿಕರು ಹೆಚ್ಚು ಸೌಲಭ್ಯ ಕಲ್ಪಿಸಿ ಕೊಡಬೇಕು, ಈಗ ನಮ್ಮಲ್ಲಿ ಈ ವಿಚಾರದಲ್ಲಿ ಕೊರತೆ ಇದೆ. ತುಂಗಭದ್ರಾ ಜಲಾಶಯ ಮುಂತಾದ ಕಡೆಗಳಲ್ಲಿ ಯಾರು ವ್ಯವಸಾಯ ಮಾಡುತ್ತಾರೋ ಅವರಿಗೆ ವಿಶೇಷವಾಗಿ ಸೌಲಭ್ಯ ಕೊಡಬೇಕು. ಗೊಬ್ಬರ, ಸಾಲ ಮುಂತಾದ ಅನುಕೂಲಗಳನ್ನು ರೈತರಿಗೆ ಕೊಡುತ್ತೇವೆಂದು ಭರವಸೆ ಕೊಟ್ಟರೆ ತುಂಗಭದ್ರಾಕ್ಕೆ ಲಕ್ಷಾಂತರ ಜನರನ್ನು ಕಳುಹಿಸುವುದಕ್ಕೆ ನಾವು ಸಿದ್ಧರಾಗಿದ್ದೇವೆ. ಗೊಬ್ಬರ, ಸಾಲ ಮುಂತಾದ ಸೌಲಭ್ಯಗಳನ್ನು ಕೊಟ್ಟರೆ, ಅಲ್ಲಿಗೆ ಹೋಗಿ ವ್ಯವಸಾಯ ಮಾಡುವುದಿಲ್ಲವೆಂದು ಯಾರು ಹೇಳುತ್ತಾರೆ? ಈಗ ಏನಾಗಿದೆ ಎಂದರೆ, ಜಮೀನುಳ್ಳವನು ತಾನೇ ಸ್ವಂತವಾಗಿ ವ್ಯವಸಾಯ ಮಾಡುವುದಕ್ಕೆ ಸಾಮರ್ಥ್ಯವಿಲ್ಲದೆ ತನ್ನ ಜಮೀನನ್ನು ಯಾರಿಗೋ ಗೇಣಿಗೆ ಕೊಡುತ್ತಾನೆ. ಗೇಣಿದಾರ ತನಗಿರುವ ಸಾಮರ್ಥ್ಯದಲ್ಲಿ ಉತ್ಪತ್ತಿ ತೆಗೆಯುತ್ತಾನೆ. ವಿಶೇಷ ಉತ್ಪತ್ತಿ ತೆಗೆಯಲು ಸಾಮರ್ಥ್ಯವಿರುವುದಿಲ್ಲ, ಆಸಕ್ತಿಯೂ ಇರುವುದಿಲ್ಲ. ಅವನಿಗೆ ಆಸಕ್ತಿ, ಪ್ರೇಮ ಬರುವ ಹಾಗೆ ಮಾಡದೇ ಹೋದರೆ, ಸುಮ್ಮನೆ ಉಳುಮೆ ಮಾಡುತ್ತಿದ್ದಾನೆ ಎಂಬ ಒಂದೇ ಆಧಾರದ ಮೇಲೆ ಜಮೀನನ್ನು ಕೊಟ್ಟರೆ, ಅದು ಸರಿಯಲ್ಲ, ಸಾಧುವಲ್ಲ. ಸಾವಿರಾರು ಕೂಲಿಗಾರರನ್ನಿಟ್ಟುಕೊಂಡು ವ್ಯವಸಾಯಮಾಡುತ್ತೇನೆಂದರೆ, ಅದು ಸುಲಭವಲ್ಲ. ಕೂಲಿಗಾರರನ್ನಿಟ್ಟುಕೊಳ್ಳುವುದು ಅಷ್ಟು ಸುಲಭವೆಂದು ಭಾವಿಸಿದರೆ, ಅದು ಬರಿಯ ಭ್ರಾಂತಿ. ಈಗ ಸೀಲಿಂಗ್ ಏನು ಇಟ್ಟುಕೊಂಡಿದ್ದಾರೋ ಅದಕ್ಕಿಂತ ಕಡಮೆಯಾಗಿಯೇ ಅನೇಕರು ಇಟ್ಟುಕೊಂಡಿದ್ದಾರೆ. ಮುಖ್ಯವಾಗಿ ಮಾನಸಿಕವಾಗಿ ಆಸಕ್ತಿ ತೋರಿಸಬೇಕು. ಆಗ ವ್ಯವಸಾಯ ಯಶಸ್ವಿಯಾಗುತ್ತದೆ. ಆದುದರಿಂದ, ಮೂರನೆಯ ಒಂದು ಭಾಗದಷ್ಟು ಗೇಣಿಯನ್ನು ಜಮೀನುದಾರನಿಗೆ ಕೊಟ್ಟರೆ ಸಾಕು. ಇಲ್ಲದಿದ್ದರೆ ಒಂದು ಬೆಳೆಗೆ ಮೂರನೆಯ ಒಂದು ಭಾಗವೆಂದು ಗೊತ್ತುಮಾಡಬಹುದು.

ಇದರಿಂದ ಗೇಣಿದಾರನಿಗಾಗಲೀ ಜಮೀನ್‌ದಾರನಿಗಾಗಲೀ ತೊಂದರೆಯಾಗುವುದಿಲ್ಲವೆಂದು ಭಾವಿಸುತ್ತೇನೆ.

ಅಕ್ವೈರ್ ಮಾಡಿಕೊಳ್ಳುವ ಜಮೀನಿಗೆ ಕೊಡಬೇಕಾದ ಪರಿಹಾರದ ವಿಚಾರವನ್ನು ಅನೇಕರು ಪ್ರಸ್ತಾಪ ಮಾಡಿದ್ದಾರೆ. ಸಮಿತಿಯವರು ಅವರ ವರದಿಯಲ್ಲೂ ಈ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ಒಂದು ವಿಷಯವನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ತಾತ ಮುತ್ತಾತನ ಕಾಲದಲ್ಲಿ ಸಂಪಾದನೆ ಮಾಡಿದ ಜಮೀನನ್ನು ಆಸಕ್ತಿಯಿಟ್ಟು ಅನೇಕರು ಉಳಿಸಿಕೊಂಡು ಬಂದಿದ್ದಾರೆ. ಸುಮ್ಮನೆ ಜಮೀನನ್ನು ಉಳಿಸಿಕೊಳ್ಳಬೇಕೆಂಬ ಭ್ರಾಂತಿಯಿಂದ ಉಳಿಸಿಕೊಂಡುಬಂದಿಲ್ಲ. ಎಲ್ಲ ಕಷ್ಟಗಳನ್ನೂ ಸಹಿಸಿಕೊಂಡು ಗೃಹಸುಖವನ್ನೂ ಮರೆತು ಜಮೀನನ್ನುಳಿಸಿಕೊಂಡಿದ್ದಾರೆ. ಹೀಗಿರುವಾಗ ಅವರಿಗೆ ಕೊಡತಕ್ಕ ಪರಿಹಾರವನ್ನು ಸೂಕ್ತವಾದ ರೀತಿಯಲ್ಲಿ, ಅವರ

(ಶ್ರೀ ಟಿ. ಎಚ್. ಮೂಡಲಗಿರಿಗೌಡ)

ಪೀಳಿಗೆ ತಮ್ಮನ್ನು ನಿರ್ಗತಿಕರನ್ನಾಗಿ ಮಾಡಿದರು ಎಂದು ಸಂಕಟಪಡದೇಯಿರುವ ರೀತಿಯಲ್ಲಿ, ಅವರಿಗೆ ಸಹಾಯವಾಗುವ ರೀತಿಯಲ್ಲಿ, ನಿಗದಿ ಮಾಡಬೇಕು. ಮಸೂದೆಯನ್ನು ತಯಾರಿಸಿ ತರುವ ಕಾಲದಲ್ಲಿ ಈ ಬಗ್ಗೆ ವಿಚಾರಮಾಡಿ ನಿಗದಿ ಮಾಡಬೇಕು. ಸೇಕಡ ಇಪ್ಪತ್ತು ಅಥವ ಹದಿನೆಂಟು ಅಥವ ಮಾರ್ಕೆಟ್ ಧಾರಣೆ ಎಂದು ನಾನು ಹೇಳುವುದಿಲ್ಲ. ಎಕರೆಗೆ ಹತ್ತುಸಾವಿರ ರೂಪಾಯಿ ಬೆಲೆ ಇದ್ದ ಜಮೀನು ಈ ವರದಿ ಬಂದ ಮೇಲೆ ನಾಲ್ಕು ಅಥವ ಐದುಸಾವಿರ ರೂಪಾಯಿ ಆಗಿದೆ. ಇದನ್ನೆಲ್ಲಾ ಗಮನಿಸಿ, ಒಟ್ಟಿನಲ್ಲಿ ಅವರಿಗೆ ತೊಂದರೆಯಾಗದಂತೆ ಮಾಡಬೇಕು, ಅವರು ಶಪಿಸಬಾರದು, ಸರ್ಕಾರದವರು ನಮ್ಮ ಪ್ರಗತಿಗೆ ತೊಂದರೆ ಮಾಡಿದರು ಎಂದು ಅವರು ಹೇಳಬಾರದು.

ಏನೇ ಮಾಡಿದರೂ ಸೀಲಿಂಗ್‌ಗೂ ಟೆನೆನ್ಸಿ ಕಾನೂನಿಗೂ ಹೊಂದಿಕೆಮಾಡಿಕೊಂಡು ಕುಳಿತುಕೊಳ್ಳಬಾರದು. ಟೆನೆನ್ಸಿಗೇ ಬೇರೆ ಕಾನೂನು ಮಾಡಬೇಕು. ಹೀಗೆ ಮಾಡಿದರೆ, ಸೀಲಿಂಗ್ ವಿಚಾರವನ್ನು ಚರ್ಚೆ ಮಾಡಿ ಸರ್ಕಾರ ಕಾನೂನು ಮಾಡಲು ಹೆಚ್ಚು ಶ್ರಮ ತೆಗೆದುಕೊಳ್ಳಬೇಕಾಗಿಲ್ಲ. ಟೆನೆನ್ಸಿ ವಿಚಾರವೇ ಹೆಚ್ಚು ಶ್ರಮದಾಯಕವಾದುದು. ಇದನ್ನು ಸರಿಯಾದ ರೀತಿಯಲ್ಲಿ, ತೃಪ್ತಿಕರವಾಗಿ ಮಾಡುವುದು ಆದ್ಯಕರ್ತವ್ಯ.

ಕಾಫಿ, ಟೀ ತೋಟಗಳು ಮುಂತಾದುವಕ್ಕೆ ವಿನಾಯಿತಿ ಕೊಡಬೇಕೆಂದು ಪ್ಲಾನಿಂಗ್ ಕಮೀಷನವರು ಹೇಳಿದ್ದಾರೆ. ಇದು ಸರಿಯಲ್ಲವೆಂದು ನಾನು ಹೇಳುವುದಿಲ್ಲ, ಏಕೆಂದರೆ, ಇದು ಕೈಗಾರಿಕೆಗೆ ಸಂಬಂಧಪಟ್ಟದ್ದು.

ಕಾಫಿ ಮತ್ತು ಟೀ ತೋಟಗಳಿಗೂ ಸೀಲಿಂಗ್ ಹಾಕಬೇಕು ಅಥವ ರಾಷ್ಟ್ರೀಕರಣ ಮಾಡಬೇಕು ಎಂದು ಕೆಲವರು ಹೇಳಿದ್ದಾರೆ. ಇಪ್ಪತ್ತೈದೆಕರೆಗಿಂತ ಜಾಸ್ತಿ ಇರುವ ಹಿಡುವಳಿಗಳನ್ನು ಹೊಂದಿರುವ ಜನ ಬಹಳ ಕಡಮೆಯಿದ್ದಾರೆ, ಆದುದರಿಂದ ಸೀಲಿಂಗ್ ಹಾಕಿದರೆ ತೊಂದರೆಯಾಗುವುದಿಲ್ಲವೆಂದು ಹೇಳಿದ್ದಾರೆ. ಒಪ್ಪಿಕೊಳ್ಳೋಣ. ಇದರ ವ್ಯವಸಾಯದ ಖರ್ಚು ವಿಶೇಷವಾಗಿ ಏರಿ ಹೋಗಿ, ವ್ಯವಸಾಯ ಮಾಡಬೇಕೆ ಅಥವ ಬಿಡಬೇಕೆ ಎನ್ನುವ ಪರಿಸ್ಥಿತಿ ಇದೆ. ಅಂತೂ ಈ ಕೈಗಾರಿಕೆಯನ್ನು ಕೆಡಿಸಬಾರದು. ಇದಕ್ಕೆ ಎಲ್ಲ ಸೌಲಭ್ಯಗಳನ್ನೂ ಕೊಟ್ಟು, ಇದನ್ನು ಅಭಿವೃದ್ಧಿ ಮಾಡಬೇಕು, ಇದನ್ನುಳಿಸಬೇಕು. ಶ್ರೀ ಬದರಿ ನಾರಾಯಣ್ ಅವರೂ ಮುಕ್ಕಣ್ಣಪ್ಪನವರೂ ಹೇಳಿದ ಹಾಗೆ ಅಡಕೆಯೂ ಕೂಡ ಇಷ್ಟೇ ಪ್ರಾಮುಖ್ಯವಾದ ಬೆಳೆ. ಕಾಫಿ, ಟಿ ಹೇಗೋ ಹಾಗೆಯೇ ಮಲೆನಾಡಿನಲ್ಲಿ ಅಡಕೆಯೂ ಅಷ್ಟೇ ಪ್ರಾಮುಖ್ಯವಾದುದು. ಇದರ ವ್ಯವಸಾಯ ಸುಲಭವಲ್ಲ. ಮೊದಲು ಸಾವಿರಾರು ರೂಪಾಯಿ ಬಂಡವಾಳಹಾಕಿ, ಆಮೇಲೆ ಎಂಟು ಹತ್ತು ವರ್ಷದಮೇಲೆ ಉತ್ಪತ್ತಿ ಪಡೆಯತಕ್ಕ ಬೆಳೆ. ಮೂರು ಅಥವ ಆರುತಿಂಗಳಲ್ಲಿ ಬರುವ ಬೆಳೆಯಲ್ಲ. ಹೀಗೆ ಇದಕ್ಕೂ ಕೂಡ ವಿಶೇಷ ಖರ್ಚಿದೆ. ಐದು ಗುಂಟೆ, ಹತ್ತು ಗುಂಟೆ ಅಡಕೆ ತೋಟವನ್ನಿಟ್ಟುಕೊಂಡು ಅದರಿಂದಲೇ ಜೀವನ ನಡೆಸುವವರಿದ್ದಾರೆ, ಹತ್ತು ಇಪ್ಪತ್ತು ಎಕರೆ ಇಟ್ಟುಕೊಂಡಿರುವವರೂ ಮಲೆನಾಡಿನಲ್ಲಿದ್ದಾರೆ. ಕಾಫಿ, ಟೀ ಗುಂಪಿಗೆ ಅಡಕೆಯನ್ನೂ ಸೇರಿಸುವುದು ಸರಿ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಒಟ್ಟಿನಲ್ಲಿ ನಮ್ಮ ಮುಖ್ಯ ಗುರಿಯಂತೆ ನಾವು ಕಾನೂನು ರಚನೆ ಮಾಡುವಾಗ, ನಮ್ಮ ದೇಶದ ಆಹಾರ ಉತ್ಪತ್ತಿಗೆ ಧಕ್ಕೆ ಬಾರದೇಯಿರುವ ರೀತಿಯಲ್ಲಿ ಭೂಸಮಸ್ಯೆಯನ್ನು ಬಿಡಿಸಬೇಕೆಂಬುದನ್ನು ಲಕ್ಷದಲ್ಲಿಟ್ಟು ಕಾನೂನು ರಚಿಸಬೇಕು. ಬೇರೆ ಎಲ್ಲವನ್ನೂ ಬದಿಗಿಟ್ಟು ದೇಶದ ಅನೇಕ ಇತರ ಸಮಸ್ಯೆಗಳನ್ನು ಬದಿಗಿಟ್ಟು ಇದೊಂದು ಸಮಸ್ಯೆಯನ್ನೇ ಬಗೆಹರಿಸುವುದಕ್ಕೆ ಹೋದರೆ ಇದರಿಂದ ಪ್ರಗತಿಯಾಗಲಾರದು. ಭೂಮಾಲೀಕರ ಸಮಸ್ಯೆಯನ್ನೂ ಇತರ ಕ್ಷೇತ್ರಗಳಲ್ಲಿರುವ ಸಮಸ್ಯೆಗಳನ್ನೂ ತೀವ್ರವಾಗಿ ಆಲೋಚನೆ ಮಾಡಬೇಕು. ಇಂಡಿಯಾ ಸರ್ಕಾರದವರಾಗಲೀ ಮೈಸೂರು ಸರ್ಕಾರದವರಾಗಲೀ ಈ ವಿಷಯಗಳನ್ನೆಲ್ಲಾ ಆಲೋಚನೆ ಮಾಡಬೇಕೆಂದು ಹೇಳಿ, ನನಗೆ ಇಷ್ಟು ಅವಕಾಶ ಕೊಟ್ಟದ್ದಕ್ಕಾಗಿ ಮಾನ್ಯ ಅಧ್ಯಕ್ಷರನ್ನು ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

*Sri F. H. MOHSIN (Hubli City).—The Jatti Committee has in the report enunciated the objectives of the tenancy reform, as under:

> "Elimination of the landlord-tenants' relationship and redistribution of lands to satisfy the aspirations of the landless".

These are the two objectives that the Committee had in mind in reporting the tenancy report. As regards elimination of landlord and tenant relationship, I am inclined to say that the report of the Committee has been disappointing. In fact the small holders of family holding can continue to lease out their lands to the tenants. So, the object of the committee which they had in mind before enquiring into the land reforms has not been successfully implemented or has not been successfully meted out in the report. It has been stated in the report that only a small section of the public is affected by such a legislation, *i.e.*, only 3 per cent of the whole population is affected. If this report affects only 3 per cent of the population it would not be called a step towards achieving the socialistic pattern of society. Anything that would be helpful in raising the status of the majority of the population would only be called a step towards achieving the socialistic pattern of society. This report is intended to help only certain down trodden tenants who form 3 per cent of the population. Can this be called the right step for the creation of a socialistic pattern of society?

My friends have already suggested that when steps are being taken to

bring in land reforms, why should it not be extended to other sectors also. But, I may submit that it was outside the scope of the Jatti Committee and so they could not do anything about that. There is a hint because it is mentioned that when the members of the committee toured the State people expressed the desire that such a system should be evolved in other sectors also.

As regards the landlord tenant relationship, I am afraid the Jatti Committee has been a failure. They have not been able to eliminate this relationship altogether. As has been pointed out there have been a number of small holders in the State and the persons who have big holdings, that is, more than 100 acres will be very few. Therefore, it would be almost impossible to achieve this objective as the committee has pointed out in the report.

With regard to the second objective, I am afraid whether there would be any land to distribute among the people who are landless. For a family holding, as has been enunciated in the report, it comes to about 144 acres or even more. If it is worked out like this, it will not leave any land to be distributed to the landless. So, the objective will remain on paper and there will be no land for distribution. I am therefore rather inclined to say that this report would not be of any use to the tenants or to the landless. This report should have ended this landlord and tenant relationship once for all. Of course, I do realise that small holders should be protected. The holders of one or two acres of land should not be deprived of their holding. So, to eliminate the relationship between the landlord and the tenant, the Committee should have suggested one more method, that is, the State should have come to the rescue of the tenants and there should have been relationship between the State and the tenant instead of landlord and the tenant as reported by the Committee. In Uttar Pradesh, as the Committee has pointed out, such a relationship is prevalent. Therefore such a system ought to have been employed in our State also, and in that case we would have averted any danger. Otherwise the small holders will have to approach courts for recovery of rents, etc. So, if the State takes up the responsibility, they could approach the Government and recover rents without any difficulty. So, in this regard the Committee has not helped the small holders.

Another thing is about the exemption given to *Sthridhana* properties from the ceiling. I am not able to find out the reason for such an exemption. The objective of the Committee may be spoiled by giving exemption to Sthridhana properties. We know very well that even the gifts given to the Hindu women at the time of marriage or even by the husbands would be construed as Sthridhana properties. I do not know why the Committee has recommended for exemption of these Sthridhana properties. Such gifts may be thousands of acres and everybody may give away the lands under the name of gifts which will ultimately become Sthridhana properties. If such an exemption is given, I do not find any reason for not extending the same benefits to other religions. For example, there is a custom in Muslim community of giving Jahas at the time of marriage—the father gives to a daughter. Similarly there is a system of giving Dower, cash or ornaments. I do not understand why such Jahas and Dower should not be exempted.

6 P.M.

That is also similar to the Stridhan property which is defined in the Hindu Law. If Sridhan is to be exempted, I see no reason why properties acquired by a Muslim wife by way of Jahas or Dowers should also not be similarly exempted.

Sri B. BASAVALINGAPPA (Bangalore South).—Do you mean to say that Sridh an should not be exempted?

Sri F. H. MOHSIN.—It should not be exempted at all. If it is to be exempted, then the exemption should be extended to properties acquired by a Muslim wife by way of Jahas or Dower.

The next point is that if the landlords want to resume land for personal cultivation, they will have to give two

(SRI F. H. MOHSIN)

years' notice. I fail to understand why the limit of two years has been kept. Of course, there is a condition that at least for five years a tenant cannot be evicted. So, the tenant knows that after five years he may be evicted and the land may be resumed. Today, if the landlord wants to cultivate his lands personally, in the first instance he will have to wait for two years. Even then he will not get the lands and he will have to approach the court to get possession. Even in the case of non-resumable lands, they will have to wait for two years. Today I am in a position to cultivate. After two years I may not be in the same position. Therefore, the period of two years is too long a period. If the intention is to give land holders possession of land for personal cultivation and if they are genuine cultivators, they should be given an opportunity to get back their lands as early as possible even without having to give notice of six months as embodied in the Transfer of Property Act. I see no reason why this period of six months should be extended to two years. The same conditions may not prevail after two years. I hope the Bill will be drafted on these principles and brought before the House.

SRI GAJANAN PANDIT (Mangalore II).—Mr. Speaker, Sir, various views have been expressed by several Hon'ble Members of this House on the Jatti Committee Report. Some have partially condemned it and some have supported it unanimously.

SRI B. BASAVALINGAPPA.—All of them have unanimously supported the report and not condemned it.

SRI GAJANAN PANDIT.—Some have not agreed with the report.

SRI B. BASAVALINGAPPA.—Some have not agreed with some of the recommendations. That is all.

SRI GAJANAN PANDIT.—From the point of view of production the Planning Commission says with regard to land policy: "The main objective of land policy requires that it should ensure increased agricultural output and improved and diversified rural economy." From the point of view of this recommendation of the Planning Commission, I do not think the recommendations of the Jatti Committee will carry us very far. Before the Second World War, India was importing about 15 to 16 lakh tons of rice and a small quantity of wheat from other countries. Today, we are importing very much more than this quantity in spite of the huge expansion in the vast areas that have come under cultivation as a result of the construction of huge dams, well irrigation and such other things. Our yield per acre is woefully poor. As per the report of the Commonwealth Economic Committee, in 1956-57, it was between 5 to 5·7 cwts. per acre in respect of wheat cultivation and between 6·2 to 6·4 cwts. per acre in respect of rice cultivation. Compare this yield with the yield of 31·7 cwts. in a small country like Denmark, 27·3 cwts. in Australia and 23·2 cwts. in Japan. Since our yield is so pitifully low, no amount of jugglery with land tenures or agrarian reforms will really help to tackle the problem and alleviate rural poverty. Today, all our attention is focussed on land laws. In this connection, I should like to quote the Minister for Agriculture at the Centre, Sri A. P. Jain. He says: "For real increase in output and eradication of poverty, the agricultural problem must be viewed as a problem of increasing production by encouraging better agricultural methods and increased investment in land and not merely as a problem of ensuring equity in the sharing of the produce." I stress the words 'increased investment in land'. What he has said has to be considered very thoroughly. Mere fragmentation—and that too uneconomic fragmentation—will not bring us increased production. Land hunger cannot be assuaged in a day. Land has been a sort of permanent asset of the people since centuries and it is not at all easy to disturb these conditions.

Why should India continue for all time to be an agricultural country and continue to be dependent on agricultural economy? Today, we learn that 75 per cent of the population

is dependent on agriculture. Our country has made good advance even in industries and I am sure and I am confident that by the fourth and the fifth Five Year-Plan, the population that is dependent on agriculture will definitely come down to 50 or 60 per pent, and it has happened in other western countries.

What is going to happen in the matter of cultivation of the available land? The landless labour should not be concentrated in areas where there is no land. They must be settled on lands or new lands that come under irrigation. At the end of the Second Five-Year Plan, it is estimated that something like 22 million acres of arable land will come under cultivation. This land will be available for settling not only land—less labour, but some small agriculturists also.

When a suggestion was made by one of the Hon'ble Members of this House that wherever there is thick population and where there is large fragmentation of land, surplus labour should be diverted to other areas, a doubt was expressed whether this agricultural labour would be willing to go there. I am surprised at this because our agricultural labour has in the past migrated to such distant lands as East-Africa, Burma, Malaya, Ceylon and Etheopea and various other places where they have prospered not only on agricultural plantations but on other plantations also. Why should not the Government, instead of paying huge compensation to the landholders for acquiring their lands and settling this labour, send this surplus labour to new areas and provide them with seed, fertilisers, bullocks, schools, etc. And after all, the money that will be required for this purpose will not be of the same magnitude as that required for paying compensation. Why should not the Government try and see that these vast areas are developed wherever there is water available in plenty. In my district we have to depend on rains only. Wherever new areas will be coming under irrigation shortly under the irrigation projects that are going to be undertaken under the Second Five-Year Plan, they may be given to this surplus agricultural labour. I personaly feel that it is a very good proposition and I request Government to pay proper attention to this aspect.

I agree that land must go to the tiller. Absentee landlordism must be eliminated. But the tiller also must have incentive to produce more. An intelligent and imaginative farmer should not be smothered by prescribing a very low ceiling. His children should be educated and they must have sufficient inducement to settle on lands and produce more food and not aspire to come to the cities and become whitecollared labour eking out precarious livelihood or join the ranks of the educated unemployed. If the holdings are too small, there is no scope for the intelligent educated children to take to agriculture. That is why I say that fragmentation should not take place. These holdings must be sizeable holdings and such of those experienced and intelligent farmers who are willing to cultivate the lands must be given a fair opportunity.

MR. SPEAKER.—The Hon'ble Member will bear in mind the time factor. After all, we have to take into consideration the time that is available. The Hon'ble Member is discussing subjects which are far beyond the scope of the Jetti Committee Report. It is of course very interesting to hear. But we have to take into consideration, the time-limit. Already, the Hon'ble Member has taken more than 15 minutes.

SRI GAJANAN PANDIT.—Regarding ceiling, I feel that a ceiling should not be fixed. The Jetti Committee report says that for a family of 5 members, the ceiling must be 4½ times the family holding and for a larger family it can be double that. But why should it be double for six members. What is laid down is that from 6 to even 100 members, it will be double. But a family consisting of only 6 members will have double the ceiling and a family which consists of 100 members also will have the same ceiling. I think it is most unfair. In my opinion, ceiling should not be fixed; it must be allowed for a

(SRI GAJANAN PANDIT)

family to cultivate as much as they want. Any land which they are not able to cultivate can be taken over. But as long as a family is able to cultivate and produce more food in a certain area, there should not be any restriction.

Regarding rent Sir, so far as South Kanara is concerned, I feel that the percentage fixed in the Jetti Committee Report is too low. Under the provisions of the Madras Fair Rent Act, 1956, the fair rent was fixed up to 40 per cent of the gross produce after a full consideration of the conditions. My suggestion is that this should not be reduced below 33 1/3 per cent—one-third to go to the landlord and two-thirds to the tenant. The landlord to pay the land revenue which in our district comes to well over 10 to 12 per cent.

Regarding inheritance, my district comes under a very peculiar system of Aliyasanthanam law which is prevailing in the case of the majority of the population. Intelligent and educated young men who are junior members of the family have not been allowed to cultivate lands due to various reasons.

MR. SPEAKER.—Please try to be as brief as possible.

SRI GAJANAN PANDIT.—These young men who are intelligent and who can understand and put into practice better methods of cultivation should be allowed to resume whatever falls to their share under the law of inheritance and carry on cultivation.

This right of resumption should not be restricted to fifty per cent as suggested by the Committee.

Then I come to compensation. A fair compensation must be paid. I suggest that fifteen times the present rent and not the reduced rent will be a fair figure. A good case was made out by some Hon'ble Members of this House that there should not be any discrimination in the matter of compensation between agriculturists and people in other walks of life. I entirely agree with them and it is the duty of the Government to be fair to all. My Hon'ble friend from South Kanara Sri V. Srinivas Shetty, in this connection read an extract from an interview supposed to have been given by Gandhiji to a foreign newspaper man. I would like to draw his attention to what Gandhiji has written in the 'Harijan' dated 28th April 1946—Page 102. Gandhiji says:—

> "Being a non-violent man by nature, I cannot countenance the usurpation of anybody's just rights. Let us hope that if Congress comes into power, it will be more just. Otherwise, all the good that it might have done so far will disappear. . ."

Mr. Shetty was even prepared to quote Gandhiji and say that even if compensation is not paid, it won't be unfair.

So far as plantations are concerned, all plantations should be exempted from the purview of this legislation. Coffee, tea, rubber, areca, coconut and pepper plantations should be exempted from the scope of this legislation. These plantations cannot be treated like any other agricultural lands. The Central Arecanut Committee wants that production of arecanut should be increased. India has been importing a large quantity of arecanut from East Pakistan and from Malaya as well. They want that the production of arecanut must be increased and the only way to do it is by giving more scope for planters to propagate these plantations. If restrictions are placed, can we expect a small holder to start a plantation of arecanut or coffee? I do not think he will have either the capital or the skill to do this. I therefore suggest that these plantations should be exempted. All this applies to coconut plantations also, because our soap industry is entirely dependent on coconut oil. Huge quantities of coconut oil are being imported from Ceylon and other places. Unless our production of coconut goes up, it is not possible to feed the soap industry.

Lastly, regarding lands belonging to temples, churches and mosques, I suggest that these lands should be exempted from the purview of this

legislation. The present tenants can be given permanent tenancy rights. *Moolageni* we call in South Kanara so as to improve land and grow more food, by levelling adjoining areas. If permanent rights are given to these tenants, I think it will not be difficult to solve the problem. I therefore suggest that the tenants of these institutions should be given permanent tenancy rights and these institutions be exempted from the purview of this legislation. I thank the Speaker for giving me an opportunity to speak on the subject today.

Mr. SPEAKER.—Hon'ble Member Mr. Pundalikappa will speak tomorrow.

ಈಗಾಗಲೇ 43ಜನ ಮಾತನಾಡಿದ್ದಾರೆ ಹೋದ ಸೆಷನ್‌ನಲ್ಲಿ ಮಾತನಾಡಿದವರನ್ನು ಬಿಟ್ಟು-ಅದರಲ್ಲಿ 18 ಜನ ವಿರೋಧ ಪಕ್ಷದವರು 25ಜನ ಕಾಂಗ್ರೆಸ್‌ನವರು. ಆಮೇಲೆ ಸೌತ್ ಕೆನರಾದವರು 5 ಜನ ಮಾತನಾಡಿದ್ದಾರೆ. ಆದರೂ ಅವರು ತಮ್ಮ ಕಡೆಯಿಂದ ಇನ್ನೂ ಕೆಲವರಿಗೆ ಅವಕಾಶ ಕೊಡಬೇಕೆಂದು ಕೇಳುತ್ತಿದ್ದಾರೆ. ಅಳಿಯ ಸಂತಾನಕ್ಕೆ ಬೇಕಾದಷ್ಟು ಕನ್ಸೆಷನ್ ತೋರಿಸಿದ ಹಾಗೆ ಆಗಿದೆ. ಆದರೂ ನಾಳೆ ಅವರು ಬಿಡುವ ಹಾಗೆ ಕಾಣುವುದಿಲ್ಲ. ನಾಳೆ ಇರುವುದು ಮೂರೂವರೆ ಘಂಟೆಕಾಲ. ಅದರಲ್ಲಿ ಎಲ್ಲರಿಗೂ ಸಿಕ್ಕುವುದು ಕಷ್ಟ. ಯಾರಿಗೆ ಅವಕಾಶ ಸಿಕ್ಕಲಿಲ್ಲವೋ ಅವರು ಬಡ್‌ಜೆಟ್ ಚರ್ಚೆ ಬರುತ್ತದೆ ಆ ಕಾಲದಲ್ಲಿ ಈ ವಿಷಯದಮೇಲೆ ಮಾತನಾಡಬಹುದು.

Many members have pressed me. Tomorrow it will be the tenth day. The Report has been sufficiently discussed. Taking into account the number of speakers who took part in the last session, it will be 51. It is a sufficient number. Tomorrow I will be able to accommodate five or six members. That is sufficiently a big number. Hon'ble Members who think that they have not been able to get a chance may take the opportunity to speak when the Budget discussions take place.

Sri R. CHENNIGARAMAIAH (Minister for Local Self-Government).—Again when the draft Bill comes, they will have a chance.

Mr. SPEAKER.—They are coming and pressing me so much in my chamber. They say they have been standing half a dozen times or one dozen times and still they were not able to catch my eye. I am making an appeal to all of them. If tomorrow they do not get a chance, they may take a chance at the Budget discussions. As regards half-an-hour's discussion we will take it up some time later.

The House now rises to meet again tomorrow at 8-30 A.M.

The House adjourned at Thirty Minutes past Six of the Clock to meet again at Thirty Minutes past Eight of the Clock on Saturday, the 29th March 1958.